# THE BOOK WAS DRENCHED

UNIVERSAL
LIBRARY
OU_202293
UNIVERSAL
LIBRARY

ಶ್ರೀ

೩೮ನೆಯ ಗ್ರಂಥ.

# ಭಗವತೀ-ಕಾತ್ಯಾಯನೀ.

೨

ಇದನ್ನು

**ವೇಂಕಟೇಶ ತಿರಕೋ ಕುಲಕರಣಿ ಗಳಗನಾಥ.**

ಪೆನಶನರ ಅ॥ ಮಾಸ್ತರ

ಟ್ರೇನಿಂಗ ಕಾಲೇಜ

ಧಾರವಾಡ

ಇವರು ಬರೆದರು.

ಒಂದನೆಯ ಆವೃತ್ತಿ ೫೦೦೦ ಪ್ರತಿಗಳು

ಪುಸ್ತಕದ ಎಲ್ಲಹಕ್ಕುಗಳು ಗ್ರಂಥಕರ್ತೃವಿನಿಂದ

ಕಾಯಲ್ಪಟ್ಟಿರುವವು.

೧೯೧೯.

**ಬೆಲೆ ೪ ಆಣೆ.**

ಈ ಪುಸ್ತಕವನ್ನು ಮಿ. ಯಶವಂತರಾವ ಭಾಸ್ಕರರಾವ ಜಠಾರ, ಬಿ. ಎ ಎಲ್ ಎಲ್, ಬಿ ಇವರು ಧಾರವಾಡದಲ್ಲಿ ತಮ್ಮ ಕರ್ನಾಟಕ ಪ್ರಿಂಟಿಂಗವರ್ಕ್ಸ್ ಮುದ್ರಣಾಲಯದಲ್ಲಿ ಮುದ್ರಿಸಿದರು ಮಿ. ವೆಂಕಟೇಶ ತಿರಕೋ ಕುಲಕರಣಿ, ಗಳಗನಾಥ ಇವರು ಹಾವೇರಿಯ «ಸುರಸಗ್ರಂಥಮಾಲಾ» ಆಫೀಸಿನಲ್ಲಿ ಪ್ರಸಿದ್ಧಪಡಿಸಿದರು.

# ಪ್ರಸ್ತಾವನೆ

ನಮ್ಮ ಕನ್ನಡದಲ್ಲಿ ಎಲ್ಲಬಗೆಯ ಪುಸ್ತಕಗಳ ಕೊರತೆಯಿರುವಾಗ, ಹೆಣ್ಣು ಮಕ್ಕಳ ವಾಚನಕ್ಕೆ ತಕ್ಕ ಪುಸ್ತಕಗಳ ಕೊರತೆಯಿರುವದೆಂದು ಬರೆಯುವದು ಅಪ್ರಾಸಂಗಿಕವೇ ಸರಿ. ಈ ಕೊರತೆಯನ್ನು ಅಂಶತಃ ದೂರಮಾಡುವಉದ್ದೇಶದಿಂದ ನಾವು ಈ ಪುಸ್ತಕವನ್ನು ಬಹು ಆಸ್ಥೆಯಿಂದ ಬರೆದಿರುವೆವು. ಈ ಪುಸ್ತಕವನ್ನು ಬರೆಯಲಿಕ್ಕೆ ಶ್ರೀಮದ್‌ಬ ಹ್ಮನಿಷ್ಠ ಸಾಂಬದೀಕ್ಷಿತ ಕಾಶೀಕರ ಕೃತ "ಶ್ರೀಯಾಜ್ಞವಲ್ಕ್ಯಚರಿತ್ರ," ಮಹಾರಾಷ್ಟ್ರ ದೊಳಗಿನ "ಮೈತ್ರೇಯಿ" ಎಂಬ ಪುಸ್ತಕ ಇವು ಸಹಾಯಕಾರಿಗಳಾಗಿದ್ದರೂ ಮುಖ್ಯ ವಾಗಿ ೪ ನೆಯ ಪ್ರಕರಣವು ಶ್ರೀ ಗುರುಪ್ರೇರಣೆಯಿಂದಲೇ ಬರೆಯಲ್ಪಟ್ಟಿದ್ದೆಂದು ನಾವು ಸೂಚಿಸದೆಯಿರಲಾರೆವು. ಶ್ರೀ ಭಗವತೀ-ಕಾತ್ಯಾಯನಿಯನ್ನು ಅನುಕರಿಸುವಂಥ ಮಾತೃ-ಭಗಿನೀವರ್ಗವು ಕನ್ನಡಿಗರಲ್ಲಿ ಹೆಚ್ಚಲೆಂತಲೂ, ನಮ್ಮ ಚಿರಂಜೀವಿಗಳಾದ ಸೌಭಾಗ್ಯಕಾಂಕ್ಷಿಣಿಯರು ಸುಬ್ಬಕ್ಕ, ರೇಣಕ್ಕ ಇವರು ಸದ್ಗುಣಿಗಳಾಗುವಂತೆ ಅನು ಗ್ರಹಿಸಬೇಕೆಂತಲೂ ಆ ಭಗವತಿಯನ್ನೇ ಭಕ್ತಿಯಿಂದ ಪ್ರಾರ್ಥಿಸುವೆವು.

ಈ ಪುಸ್ತಕದ ಕಡೆಯ ಫಾರಮುನ್ನು ನಜರಚೂಕಿಯಿಂದ ತಪ್ಪುಗಳನ್ನು ತಿದ್ದದೆ ಹಾಗೇ ಹಾಕಿದ್ದರಿಂದ, ಮುಖ್ಯವಾಗಿ ಕಡೆಯ ಪಾನಿನಲ್ಲಿ ಬಹಳ ತಪ್ಪುಗಳು ಉಳಿದವೆ. ಅವುಗಳಲ್ಲಿ ದೊಡ್ಡತಪ್ಪುಗಳ ತಿದ್ದುಪಡೆಯನ್ನು ಮಾತ್ರ ಕೆಳಗೆ ಕೊಟ್ಟಿರುತ್ತದೆ. ಅವನ್ನೆಷು ವಾಚಕರು ದಯಮಾಡಿ ಲಕ್ಷದಲ್ಲಿಟ್ಟು ಓದಬೇಕೆಂದು ಪ್ರಾರ್ಥಿಸುವೆವು.

| ಪುಟ. | ಸಾಲು. | ಅಶುದ್ಧ. | ಶುದ್ಧ. |
|---|---|---|---|
| ೩೬ | ೨೩ | ತರುಣೋಪಾಯು | ತರಣೋಪಾಯು |
| ೪೯ | ೧೫ | ದ್ವೈವತವು | ದ್ವೈತವು |
| ೩೯ | ೨೩ | ಸಮ್ಯೃಧ್ಧಿಯು | ಸಮಾಧಿಯು |
| ೩೯ | ೨೬ | ಕರ್ತವ್ಯವೆಂದು | ಕರ್ತೃವೆಂದು |
| ೩೯ | ೨೯ | ಮಾಯಾಸ್ಮೋಹಿರ | ಮಾಯಾಮೋಹಿತ |
| ೪೦ | ೪ | ಒಬ್ಬನೊಬ್ಬ | ಒಬ್ಬಾನೊಬ್ಬ |

ಹಾವೇರಿ.
೧೮೪೧ ಚೈತ್ರ ವದ್ಯ ೫.

ಕನ್ನಡಿಗರ ಸೇವಕ,
ಕುಲಕರಣಿ. (ಗಳಗನಾಥ)

॥ ಶ್ರೀ ಯಾಜ್ಞವಲ್ಕ್ಯಗುರುಭ್ಯೋನಮಃ ॥

# ಭಗವತೀ-ಕಾತ್ಯಾಯನೀ.

## ೧ನೆಯ ಪ್ರಕರಣ.

## ಯೋಗೀಶ್ವರನು !

**वंदेऽहं मंगलात्मानं भास्वंतं वेदविग्रहं ॥**
**याज्ञवल्क्यं मुनिश्रेष्ठं जिष्णुं हरिहरप्रभुं ॥**

ಪೂರ್ವದಲ್ಲಿ ದೇವರಾತನೆಂಬ ಹೆಸರಿನ ತಪೋಧನನಾದ ಬ್ರಾಹ್ಮಣನೊಬ್ಬನು ಇದ್ದನು. ಆತನು ಪರಮ ಶಿವಭಕ್ತನು, ಅನ್ನದಾನತತ್ಪರನು. ಆತನು ಪುತ್ರೇಚ್ಛೆಯಿಂದ ಕೇದಾರಕ್ಷೇತ್ರದಲ್ಲಿ ಘೋರತಪಸ್ಸನ್ನಾಚರಿಸಲು, ಸಾಕ್ಷಾತ್ ಪರಮೇಶ್ವರನೇ ಪುತ್ರರೂಪದಿಂದ ಆತನ ಉದರದಲ್ಲಿ ಜನಿಸಿದನು. ದೇವರಾತನು ಮಗನಿಗೆ ಯಾಜ್ಞವಲ್ಕ್ಯನೆಂಬ ಹೆಸರಿಟ್ಟನು. ಪರಮತೇಜಸ್ವಿಯಾದ ಯಾಜ್ಞವಲ್ಕ್ಯನು ಲೋಕಾನಂದಕರನಾಗಿ ಬೆಳೆಯುತ್ತಿರಲು, ದೇವರಾತನು ಯಥಾವಿಧಿ ಆತನ ಮೌಂಜೀಬಂಧನವನ್ನು ಮಾಡಿದನು. ಮೇಖಲಾ, ಕೃಷ್ಣಾಜಿನಾದಿ ಬ್ರಹ್ಮಚರ್ಯಲಕ್ಷಣಗಳಿಂದ ಯುಕ್ತನಾಗಿ ಆತನು ವೇದಪ್ರತಿಪಾದಿತವಾದ ಬ್ರಹ್ಮಚರ್ಯವ್ರತವನ್ನು ಆಚರಿಸಹತ್ತಿದನು. ಪ್ರಾತಃಸ್ನಾನ, ಸಂಧ್ಯಾವಂದನ, ಅಗ್ನಿಕಾರ್ಯ, ಆಚಾರ್ಯೋಪಾಸನಾದಿ ಕರ್ಮಗಳನ್ನು ಮಾಡುತ್ತ, ಗುರುಕುಲವಾಸದಿಂದ ವೇದಾಧ್ಯಯನವನ್ನು ಮಾಡಹತ್ತಿದನು. ಮೊದಲು ಬಾಷ್ಕಲನೆಂಬ ಋಷಿಯಬಳಿಯಲ್ಲಿ ಆ ಗುರುಸೇವಾತತ್ಪರನ ಋಗ್ವೇದಾಧ್ಯಯನವು ಸಂಪೂರ್ಣವಾಗಿ ಆಯಿತು. ಆಮೇಲೆ ಜೈಮಿನಿಯಬಳಿಯಲ್ಲಿ ಆತನು ಸಾಮವೇದದ ಸಹಸ್ರಶಾಖೆಗಳ, ಹಾಗು ಅಥರ್ವಣವೇದದ ಅಧ್ಯಯನವನ್ನು ಮಾಡಿದನು. ಆ ಮೇಲೆ ಯಜುರ್ವೇದಾಧ್ಯಯನಮಾಡುವ ಉತ್ಸುಕತೆಯಿಂದ ಆ ಮಹಾವಿದ್ವಾಂಸನಾದ ಯಾಜ್ಞವಲ್ಕ್ಯನು ವೈಶಂಪಾಯನರ ಬಳಿಯಲ್ಲಿ ಬ್ರಹ್ಮಚರ್ಯದಿಂದ ಯಜುರ್ವೇದಾಧ್ಯಯನವನ್ನು ಮಾಡಿದನು. ಶಾಂತಿ, ಇಂದ್ರಿಯನಿಗ್ರಹ, ವಿರಕ್ತಿ, ಸಹನಶೀಲತೆ, ಗುರುಸೇವಾತತ್ಪರತೆ, ನಿರಹಂಕಾರಾದಿಗುಣಗಳು ಶ್ರೀ ಯಾಜ್ಞವಲ್ಕ್ಯರಲ್ಲಿ ಮೂರ್ತಿಮತ್ತಾಗಿ ಇದ್ದದ್ದರಿಂದ, ಅಷ್ಟಸಿದ್ಧಿಗಳು ಅವರನ್ನು ಸದಾಸೇವಿಸುತ್ತಲಿದ್ದವು. ವೈಶಂಪಾಯನರ ಬಳಿಯಲ್ಲಿ ಮುನ್ನೂರಾಅರವತ್ತು ಜನಶಿಷ್ಯರು ಇದ್ದರು. ಅವರಲ್ಲಿ ಯಾಜ ವಲ್ಕ್ಯರು ಪರಮತೇಜಸ್ವಿಗಳಾಗಿ ನಕ್ಷತ್ರಗಳ ಮಧ್ಯದಲ್ಲಿ ಚಂದ್ರನಂತೆ ಒಪ್ಪುತ್ತಲಿದ್ದರು.

ಹೀಗಿರುವಾಗ ಯಾಜ್ಞವಲ್ಕ್ಯರಿಗೂ, ವೈಶಂಪಾಯನರಿಗೂ ವಿವಾದವುಂಟಾಯಿತು. ವಿವಾದದ ಕಾರಣಗಳು ಬೇರೆಬೇರೆ ಪುರಾಣಗಳಲ್ಲಿ ಬೇರೆಬೇರೆ ವಿಧವಾಗಿ ಹೇಳಲ್ಪಟ್ಟಿರುವವು. ಈ ಸಂಬಂಧದಿಂದ ಭಾಗವತ, ಹಾಗು ವಿಷ್ಣುಪುರಾಣಗಳಲ್ಲಿ ಹೇಳಿರುವದರ ಸಾರಾಂಶವೇನಂದರೆ—ವ್ಯಾಸಶಿಷ್ಯರಾದ ವೈಶಂಪಾಯನರು ತಮಗೆ ದೊರೆತ ಯಜುರ್ವೇದದ ಇಪ್ಪತ್ತೇಳು ಶಾಖೆಗಳನ್ನು ಮಾಡಿ, ಶಿಷ್ಯರಿಗೆ ಅಧ್ಯಯನಮಾಡಿಸಿದರು. ಆ ಶಿಷ್ಯರಲ್ಲಿ ಯಾಜ್ಞವಲ್ಕ್ಯರು ಇದ್ದರು. ಅವರು ಅತ್ಯಂತಗುರುಭಕ್ತಿಪರಾಯಣರಾಗಿದ್ದರು. ಮುಂದೆ ಒಂದುದಿವಸ ಎಲ್ಲ ಋಷಿಗಳು ಕೂಡಿ—"ಇಂದು ಎಲ್ಲರೂ ಮೇರುಪರ್ವತಕ್ಕೆ ಹೋಗಬೇಕು, ಇದಕ್ಕೆ ಯಾರಾದರೂ ತಪ್ಪಿದರೆ ಅವರಿಗೆ ಏಳುದಿನ ಬ್ರಹ್ಮಹತ್ಯೆಯ ದೋಷವು ಘಟಿಸುವದು" ಎಂದು ನಿಯಮಮಾಡಿಕೊಂಡರು. ಈ ನಿಯಮವನ್ನು ವೈಶಂಪಾಯನರು ತಪ್ಪಿ ಬ್ರಹ್ಮಹತ್ಯೆಗೆ ಗುರಿಯಾದದ್ದಲ್ಲದೆ, ಅವರು ಕಾರಣವಶಾತ್ ಗಡಿಬಿಡಿಯಿಂದ ಹೋಗುತ್ತಿರುವಾಗ ಪ್ರಮಾದದಿಂದ ತಮ್ಮ ತಂಗಿಯ ಸಣ್ಣ ಕೂಸನ್ನು ತುಳಿಯಲು, ಕೂಡಲೆ ಅದರ ಪ್ರಾಣೋತ್ಕ್ರಮಣವಾಗಿ ಅವರಿಗೆ ಬಾಲಹತ್ಯೆಯ ದೋಷವೂ ಘಟಿಸಿತು. ಆಗ ವೈಶಂಪಾಯನರು ತಮ್ಮ ಶಿಷ್ಯರನ್ನೆಲ್ಲಕರೆದು—"ನಮ್ಮಿಂದ ಬ್ರಹ್ಮಹತ್ಯೆಯ ಪಾತಕವು ಒದಗಿರುವದು. ಅದರ ನಾಶಕ್ಕಾಗಿ ನೀವೆಲ್ಲರೂ ತಪಸ್ಸನ್ನಾಚರಿಸಬೇಕು," ಎಂದು ಆಜ್ಞಾಪಿಸಿದರು. ಅದನ್ನು ಕೇಳಿ ಯಾಜ್ಞವಲ್ಕ್ಯರು—"ಇಂಥ ತಪಸ್ಸನ್ನಾಚರಿಸಲಿಕ್ಕೆ ಇವರು ಸಮರ್ಥರಲ್ಲ, ಸುಮ್ಮನೆ ಇವರಿಗೆ ಆಯಾಸವನ್ನು ಯಾಕೆ ಉಂಟುಮಾಡುವಿರಿ! ನಾನೊಬ್ಬನೇ ತಪಸ್ಸನ್ನಾಚರಿಸಿ, ನಿಮ್ಮ ಬ್ರಹ್ಮಹತ್ಯೆಯ ಪಾತಕವನ್ನು ಕಳೆಯುವೆನು" ಅನ್ನಲು, ಶಿಷ್ಯನ ಈ ಔದ್ಧತ್ಯಕ್ಕಾಗಿ ವೈಶಂಪಾಯನರಿಗೆ ಕೋಪವುಂಟಾಯಿತು. ಅವರು ಯಾಜ್ಞವಲ್ಕ್ಯರನ್ನು ಕುರಿತು—"ನೀನು ಇವರನ್ನು ಅಸಮರ್ಥರೆಂದು ಹೀಯಾಳಿಸುವದರಿಂದ ವಿಪ್ರಾವಮಾನಕನಿರುತ್ತೀ; ಮೇಲಾಗಿ ನನ್ನ ಆಜ್ಞಾಭಂಗ ಮಾಡಿರುತ್ತೀ; ಆದ್ದರಿಂದ ಇಂಥ ಶಿಷ್ಯನು ನನಗೆ ಬೇಡ. ನೀನು ನನ್ನಲ್ಲಿ ಮಾಡಿದ ಅಧ್ಯಯನವನ್ನು ನನಗೆ ಒಪ್ಪಿಸು,"ಎಂದು ನಿಷ್ಠುರವಾಗಿ ನುಡಿದರು. ಅದಕ್ಕೆ ಯಾಜ್ಞವಲ್ಕ್ಯರು—"ನಾನು ತಮ್ಮ ಮೇಲಿನ ಉತ್ಕಟಭಕ್ತಿಯಿಂದ ಹೀಗೆ ನುಡಿದೆನಲ್ಲದೆ, ವಿಪ್ರಾವಮಾನಕ್ಕಾಗಿ ನುಡಿದವನಲ್ಲ. ನಾನು ನಿರಪರಾಧಿಯಿದ್ದು, ತಾವು ಹೀಗೆ ನುಡಿಯುವದರಿಂದ ನಿಮ್ಮ ವೇದವನ್ನು ನೀವು ತೆಗೆದುಕೊಳ್ಳಿರಿ,"ಎಂದು ಗುರುಗಳನ್ನು ನಮಸ್ಕರಿಸಿ, ವೇದವ ವಮನಮಾಡಿ ಹೊರಟುಹೋದರು. ಹೀಗೆ ರಕ್ತರೂಪದಿಂದ ವಮನಮಾಡಿದ ವೇದವನ್ನು ಗುರುಗಳಾದ ವೈಶಂಪಾಯನರ ಆಜ್ಞೆಯಂತೆ ಉಳಿದ ಶಿಷ್ಯರು ತಿತ್ತಿರಿಪಕ್ಷಿಗಳ ರೂಪದಿಂದ ಗ್ರಹಣಮಾಡಲು, ತೈತ್ತಿರೀಯವೆಂಬ ಉತ್ತಮಶಾಖೆಯು ಉಂಟಾಯಿತು. ಮುಂದೆ ಯಾಜ್ಞವಲ್ಕ್ಯರು ಸೂರ್ಯನ ಆರಾಧನೆಯಿಂದ ಶುಕ್ಲಯಜುರ್ವೇದವನ್ನು ಸಂಪಾದಿಸಿದರು.

ಇದು ವಿಷ್ಣುಪುರಾಣ-ಭಾಗವತಗಳಲ್ಲಿಯ ಸಂಗತಿಯಾಯಿತು. ಇನ್ನು ಮಹಾಭಾರತದ ಶಾಂತಿಪರ್ವದ ಮೋಕ್ಷಧರ್ಮದ ೩೧೮ ನೆಯ ಅಧ್ಯಾಯದಲ್ಲಿ ವಿವಾದದ ಕಾರಣವು ಬೇರೆ ವಿಧವಾಗಿ ಹೇಳಲ್ಪಟ್ಟಿದೆ. ಆ ಕಾರಣವನ್ನು ಸ್ವತಃ ಯಾಜ್ಞವಲ್ಕ್ಯರೇ

ಜನಕರಾಜನಮುಂದೆ ಹೇಳಿದ್ದು ಹೇಗೆಂದರೆ—" ಜನಕರಾಜನೇ, ನಿನ್ನ ತಂದೆಯು ಯಜ್ಞ ಮಾಡಿದಾಗ, ನನ್ನ ಸೋದರಮಾವಂದಿರಾದ ವೈಶಂಪಾಯನರ ಸಲುವಾಗಿ ನಾನು ಹೋಗಿ ಯಜ ವನ್ನು ಸಾಂಗಮಾಡಿದೆನು. ಆಗ ದೇವಲಋಷಿಯು ಸಾಕ್ಷಿಯಿಂದ ನಾನು ಅರ್ಧ ದಕ್ಷಿಣೆಯನ್ನು ತಕೊಳ್ಳಲು, ಆ ದಕ್ಷಿಣೆಯ ಸಲುವಾಗಿ ವೈಶಂಪಾಯನರು ನನ್ನ ಸಂಗಡ ಜಗಳವಾಡಿದರು. ಆಗ ನಿನ್ನ ತಂದೆಯೂ, ಸುಮಂತು, ಪೈಲ, ಜೈಮಿನಿ ಮೊದಲಾದ ಋಷಿಗಳೂ ನನ್ನನ್ನು ಬಹುಮಾನಪೂರ್ವಕ ಸಮಾಧಾನಪಡಿಸಿದರು. ಆಮೇಲೆ ನಾನು ಸೂರ್ಯನನ್ನು ಆರಾಧಿಸಿದೆನು. ಆತನ ಪ್ರಸಾದದಿಂದ ಪ್ರತ್ಯಕ್ಷ ಸರಸ್ವತಿಯು ನನ್ನ ಮುಖದಲ್ಲಿಪ್ರವೇಶಿಸಿವಳು. ಆಮೇಲೆ ಹದಿನೈದು ಶಾಖೆಗಳನ್ನೂ, ಶತಪಥಬ್ರಾಹ್ಮಣವನ್ನೂ, ರಹಸ್ಯಯುಕ ಸರ್ವವೇದಜಾತವನ್ನೂ ಶಿಷ್ಯರಿಗೆ ಉಪದೇಶಿಸಿ, ಆ ವಿದ್ಯೆಯು ಸುಪ್ರತಿಷ್ಠಿತವಾದಮೇಲೆ ನಾನು ಅಧ್ಯಾತ್ಮಚಿಂತನದಲ್ಲಿ ತೊಡಗಿದೆನು."

ಇವುಗಳ ಹೊರತು ಸ್ಕಂದಪುರಾಣದ ಗೋದಾವರೀಖಂಡದ ವಿರಜಾಮಾಹಾತ್ಮ್ಯದಲ್ಲಿರುವ ಕಥೆಯ ತಾತ್ಪರ್ಯವೇನಂದರೆ,-- ಯಾಜ್ಞವಲ್ಕ್ಯರು ತಮ್ಮಗುರುಗಳ ಬಳಿಯಲ್ಲಿ ಅಧ್ಯಯನಮಾಡುತಿರುವಾಗ, ಗುರುಗಳ ಆಶ್ರಮದ ಸಮೀಪದಲ್ಲಿ ದ್ರುಮನೆಂಬ ಅರಸನ ರಾಜಧಾನಿಯು ಇತ್ತು. ಆ ಅರಸನಿಗೆ ಪ್ರತಿನಿತ್ಯ ಫಲಮಂತ್ರಾಕ್ಷತೆಯು ಶಿಷ್ಯಮುಖಾಂತರವಾಗಿ ಸರತಿಯಿಂದ ಮುಟ್ಟುತ್ತಿತ್ತು. ಒಂದುದಿನ ಯಾಜ್ಞವಲ್ಕ್ಯರ ಸರತಿಯು ಬರಲು, ಅವರು ಫಲಮಂತ್ರಾಕ್ಷತೆಯನ್ನು ತಕೊಂಡು ಅರಮನೆಗೆ ಹೋದರು. ಆಗ ಅರಸನಿದ್ದಿಲ್ಲ, ರಾಜಸ್ತ್ರೀಯರು ಕುಳಿತುಕೊಂಡಿದ್ದರು. ಅವರು ಯಾಜ್ಞವಲ್ಕ್ಯರ ಅನಾದರ ಮಾಡಿ, ಇವನಾವನೋ ಜಟಾಧಾರಿಯಾದ ನಪುಂಸಕನು ಬಂದಿರುವನೆಂದು ತಮ್ಮೊಳಗೆ ಉಪಹಾಸಮಾಡುತ್ತ, ಫಲಮಂತ್ರಾಕ್ಷತೆಯನ್ನು ತಕ್ಕೊಳ್ಳದೆ ಹಾಗೇ ಒಳಗೆ ಹೊರಟುಹೋದರು. ಇದನ್ನು ನೋಡಿ ಋಷಿವರ್ಯರಾದ ಯಾಜ್ಞವಲ್ಕ್ಯರು ಅಶ್ವಶಾಲೆಯೊಳಗಿನ ಖಂಬಗಳ ಮೇಲೆ --" ಫಲಿನೋಯೇ ಫಲೈರ್ಹೀನಾಃ ಪುಷ್ಪೈರ್ಹೀನಾಶ್ಚ ಪುಷ್ಪಿಣಃ ಮತ್ಪ್ರಸಾದೇನ ತೇಸರ್ವೇ ಸಫಲಾಶ್ಚ ಭವಂತ್ವಿತಿ"॥ ಎಂಬ ಆಶೀರ್ವಚನಪೂರ್ವಕವಾಗಿ ಮಂತ್ರಾಕ್ಷತೆಯನ್ನುಚಲ್ಲಿದರು. ಕೂಡಲೆ ಆ ಕಂಬಗಳೆಲ್ಲ ಪುಷ್ಪಫಲ ಸಂಪನ್ನವಾದವು. ಬಳಿಕ ಯಾಜ್ಞವಲ್ಕ್ಯರು ಗುರ್ವಾಶ್ರಮಕ್ಕೆ ತಿರುಗಿಹೋದರು. ಮುಂದೆ ಕೆಲವು ಹೊತ್ತಿನಮೇಲೆ ಅರಸನು ಬರಲು, ಈ ಅಲೌಕಿಕ ಚಮತ್ಕಾರವು ಆತನ ಕಣ್ಣಿಗೆ ಬಿದ್ದಿತು. ಆಗ ಆತನು ಇಂದು ಇಲ್ಲಿಗೆ ಯಾರು ಬಂದಿದ್ದರೆಂದು ಕೇಳಲು, ಸ್ತ್ರೀಯರು ನಡೆದ ಸಂಗತಿಯನ್ನೆಲ್ಲ ಹೇಳಿದರು. ಅವನ್ನು ಕೇಳಿ ಅರಸನು ಸಾನಂದಾಶ್ಚರ್ಯಗೊಂಡನು. ಕೂಡಲೆ ಆತನು ವೈಶಂಪಾಯನರಬಳಿಗೆ— "ಇಂದು ನಮ್ಮಮನೆಗೆ ಬಂದ ಶಿಷ್ಯನನ್ನೇ ದಿನಾಲು ಕಳಿಸುತ್ತ ಹೋಗಬೇಕು," ಎಂದು ಹೇಳಿಕಳಿಸಿದನು. ಅರಸನ ಈ ಸೂಚನೆಯಂತೆ ನಡೆದುಕೊಳ್ಳುವವಕ್ಕಾಗಿ ಯಾಜ್ಞವಲ್ಕ್ಯರನ್ನು ಆಜ್ಞಾಪಿಸಬೇಕೆಂದು ವೈಶಂಪಾಯನರು ಅವರನ್ನು ಕರೆಸಿ, ಅರಸನ ವಿಚಾರವನ್ನು ಅವರಿಗೆ ಹೇಳಿ "ಪ್ರತಿನಿತ್ಯ ಅರಮನೆಗೆ ನೀನೇಹೋಗಬೇಕೆಂ"ದು ಕಟ್ಟುಮಾಡಿದರು. ಅದಕ್ಕೆ ಯಾಜ್ಞ

ವಲ್ಕ್ಯರು — "ನಾನು ದಿನಾಲು ಹೋಗುವದಿಲ್ಲ. ನನ್ನ ಸರತಿಬಂದಾಗ ಹೋಗುವೆನು" ಎಂದು ಉತ್ತರಕೊಟ್ಟರು. ಅದನ್ನು ಕೇಳಿ ವೈಶಂಪಾಯನರು ಕೋಪಗೊಂಡು— "ಆವರ್ತ್ಯಯಂ ದೇಹಿ ಮೇ ಶೀಘ್ರಂ ಯದಿ ತತ್ರ ನ ಗಚ್ಛಸಿ। ನಿರ್ಗಚ್ಛ ಭವನಾದಸ್ಮಾನ್ನೃಶಂಸ ಗುರುನಿಂದಕ॥ " ಅಂದರೆ, " ಅರಸನ ಬಳಿಗೆ ಹೋಗದಿದ್ದರೆ ನನ್ನ ವೇದವನ್ನು ನನಗೆ ತಿರುಗಿ ಕೊಟ್ಟು ಇಲ್ಲಿಂದ ಹೊರಟುಹೋಗು; ಯಾಕಂದರೆ, ನೀನು ಗುರ್ವಾಜ್ಞೆಯನ್ನು ಮೀರುವವನೂ, ಗುರುನಿಂದಕನೂ ಆಗಿರುತ್ತೀ " ಎಂದು ನುಡಿದರು. ಆಗ ಯಾಜ್ಞವಲ್ಕ್ಯರು ರಕ್ತರೂಪದಿಂದ ವೇದವನ್ನು ಕಾರಿ, ಗುರುವನ್ನು . ನಮಸ್ಕರಿಸಿ ಹೊರಟುಹೋದರು. ಉಳಿದ ಶಿಷ್ಯರು ಗುರುವಿನ ಆಪ್ಪಣೆಯಿಂದ ತಿತ್ತಿರಿರೂಪಗಳನ್ನು ಧರಿಸಿ ಆ ಕಾರಿಕೆಯನ್ನು ಭಕ್ಷಿಸಿದರು. ಆದ್ದರಿಂದ ತೈತ್ತಿರೀಯಶಾಖೆಯು ಉತ್ಪನ್ನವಾಯಿತು. ಮುಂದೆ ಯಾಜ್ಞವಲ್ಕ್ಯರು ವಿರಜಾತೀರ್ಥಕ್ಕೆ ಬಂದು ಶಿವನನ್ನು ಆರಾಧಿಸಿದರು. ಆಗ ಶಿವನು ಪ್ರತ್ಯಕ್ಷನಾಗಿ ಯಾಜ್ಞವಲ್ಕ್ಯರನ್ನು ಸೂರ್ಯನ ಬಳಿಗೆ ಕಳಿಸಿದನು. ಅಲ್ಲಿ ಹೋಗಿ ಯಾಜ್ಞವಲ್ಕ್ಯರು ಋಗಾದಿ ಯಾವತ್ತು ವೇದಗಳ ಅಧ್ಯಯನ ಮಾಡಿದರು.

ಈ ವಿವಾದದ ರಹಸ್ಯವು ವಿಚಾರಣೀಯವಾಗಿರುತ್ತದೆ; ಇತ್ತ ವೈಶಂಪಾಯನರು ಸಾಮಾನ್ಯರಲ್ಲ; ಬ್ರಹ್ಮಜ್ಞರು, ಶಾಂತರು, ವ್ಯಾಸಶಿಷ್ಯರು. ಅತ್ತ ಯಾಜ್ಞವಲ್ಕ್ಯರೂ ಸಾಮಾನ್ಯರಲ್ಲ; ಮಹಾಜ್ಞಾನಿಗಳು, ಅತ್ಯಂತ ತೇಜಸ್ವಿಗಳು, ತಮ್ಮ ಆಶೀರ್ವಚನದಿಂದ ನಿರ್ಜೀವವಸ್ತುವನ್ನು ಸಜೀವಗೊಳಿಸುವಂಥ ಮಹಾಮಹಿಮೆಯುಳ್ಳವರು. ಅಂದಬಳಿಕ ಇಂಥವರಲ್ಲಿ ವಿವಾದವು ಉತ್ಪನ್ನವಾದ ಬಗೆಯೇನು? ಲೋಕಕಲ್ಯಾಣಕ್ಕಾಗಿ ಪ್ರಕಟವಾಗುವ ಸತ್ಪುರುಷರೂಪ ವಿಭೂತಿಗಳ ಪ್ರತಿಒಂದು ಕೃತಿಯಿಂದ – ಆಕೃತಿಯು ಶ್ಲಾಘ್ಯವಿರಲಿ, ಅಶ್ಲಾಘ್ಯವಿರಲಿ ಲೋಕಕಲ್ಯಾಣವೇ ಆಗುವದೆಂದು ಹೇಳಬೇಕಾಗುತ್ತದೆ. ಅಜ್ಞಾನಿಗಳುಮಾತ್ರ ಇದನ್ನು ಎಣಿಸದೆ ವಿಕಲ್ಪವನ್ನು ಭಾವಿಸುವರು. ಮಹಾಮಹಾಋಷಿಗಳು ಪ್ರತ್ಯಕ್ಷ ದೇವರನ್ನು ಶಪಿಸಿ ಲೋಕಕಲ್ಯಾಣವನ್ನುಂಟುಮಾಡಿರುವರು. ಭಗವಂತನ ದಶಾವತಾರಗಳೇ ಇದಕ್ಕೆ ಸಾಕ್ಷಿಯಾಗಿರುವವು. ಸತ್ಪುರುಷರ ನಿಗ್ರಹಾನುಗ್ರಹಗಳಂತೆ, ಅವರ ಸ್ನೇಹ-ಕಲಹಗಳೆರಡೂ ಕಲ್ಯಾಣಕಾರಕಗಳಾಗಿಯೇ ಇರುವವೆಂಬದನ್ನು ಮರೆಯಲಾಗದು. ಮಹಾತ್ಮರಾದ ವೈಶಂಪಾಯನರು ಬ್ರಹ್ಮಹತ್ಯಾದೋಷದಿಂದ ವ್ಯಾಕುಲಚಿತ್ತರಾಗಿ ಶಿಷ್ಯನನ್ನು ನಿಗ್ರಹಿಸಿದಂತೆ ತೋರಿದರೂ, ಅದರಿಂದ ಶಿಷ್ಯನ ನಿಜವಾದ ತೇಜೋವೈಭವವು ಪ್ರಕಟವಾಗಿ, ಅದು ಜಗತ್ತಿನ ಕಲ್ಯಾಣಕ್ಕೇ ಕಾರಣವಾದದ್ದರಿಂದ ಇದೊಂದು ಈಶ್ವರೀ ಸಂಕಲ್ಪವೆಂತಲೇ ಒಪ್ಪಬೇಕಾಗುವದು. ಇರಲಿ. ಯೋಗೀಶ್ವರರಾದ ಯಾಜ್ಞವಲ್ಕ್ಯರು ಗುರ್ವಾಜ್ಞೆಯಂತೆ ಯಜುರ್ವೇದವನ್ನು ಕಾರಿ, ಸೂರ್ಯನಾರಾಯಣನನ್ನು ಕುರಿತು ತಪಸ್ಸನ್ನಾಚರಿಸಲು, ಆ ಲೋಕಚಕ್ಷುವು ಪ್ರಸನ್ನನಾಗಿ —" ಎಲೈ ಬ್ರಾಹ್ಮಣಶ್ರೇಷ್ಠನೇ, ನಿನಗೆ ಕಲ್ಯಾಣವಾಗಲಿ. ನಿನ್ನ ತಪಸ್ಸು ಸಿದ್ಧವಾಗಿರುವದು. ನಿನಗೆ ಬೇಕಾದದ್ದನ್ನು ಬೇಡಿಕೋ" ಎಂದು ಹೇಳಿದನು. ಆಗ ಯಾಜ್ಞವಲ್ಕ್ಯರು ಸೂರ್ಯನಾರಾಯಣನನ್ನು ಪೂಜಿಸಿ ಕೈಜೋಡಿಸಿ ನಿಂತುಕೊಂಡು—" ನೀನು ವರಪ್ರದಾನಮಾಡುವದಾದರೆ, ನಮ್ಮ ಗುರುಗಳಾದ

ವೈಶಂಪಾಯನರಿಗೆ ಯಾವದು ಗೊತ್ತಿರುವದಿಲ್ಲವೋ, ಯಾವದರ ಹೊರತು ಯಾವ ಶ್ರೇಷ್ಠ ಕೃತ್ಯವೂ ಸಿದ್ಧವಾಗುವದಿಲ್ಲವೋ ಅಂಥ ಯಜುರ್ವೇದವನ್ನು ನನಗೆ ದಯಪಾಲಿಸು." ಎಂದು ಬೇಡಿಕೊಂಡರು. ಆಗ ಅಶ್ವರೂಪಧಾರಣಮಾಡಿದ ಆ ಮಹಾಮುನಿಯನ್ನು ಶ್ರೀಸೂರ್ಯನು ತನ್ನರಥದಲ್ಲಿ ಕರಕೊಂಡು ಸುಹಾಸ್ಯವದನದಿಂದ — "ಪೂರ್ವದಲ್ಲಿ ಋಷಿಗಳು ಮಂದಮತಿಗಳ ಉದ್ಧಾರಕ್ಕಾಗಿ ವೇದರಾಶಿಯಲ್ಲಿ ನಾಲ್ಕು ಭಾಗಮಾಡುವಾಗ, ಯಜುರ್ವೇದ ಶಾಖೆಯೊಳಗಿನದೊಂದು ಮುಷ್ಟಿಯನ್ನು, ಮುಂದೆ ನೀನು ಬೇಡುವೆಯೆಂಬ ಭವಿಷ್ಯವನ್ನರಿತು ನನ್ನಬಳಿಯಲ್ಲಿ ಇಟ್ಟು ಉಳಿದ ಎಲ್ಲವೇದದ ವಿಸ್ತಾರವನ್ನು ಜಗತ್ತಿನಲ್ಲಿ ಮಾಡಿದರು. ಯಾವವೇದದಲ್ಲಿ ಕರ್ಮ, ಉಪಾಸನಾ, ಜ್ಞಾನಗಳೆಂಬ ಮೂರು ಪ್ರಕರಣಗಳು ಇರುವವೋ ಆ ಅಯಾತಯಾಮ ಸಂಜ್ಞಕವಾದ ವೇದವನ್ನು ನಾನು ನಿನಗೆ ಉಪದೇಶಿಸುವೆನು. ಈ ವೇದದಲ್ಲಿ ಶ್ರೌತಕರ್ಮದ ಆಚಾರಗಳೆಲ್ಲ ಸಾದ್ಯಂತವಾಗಿ ಹೇಳಲ್ಪಟ್ಟಿರುವವು. ಮಧ್ಯಭಾಗದಲ್ಲಿ ಮುಕ್ತಿದಾಯಕವಾದ ಶಿವೋಪಾಸನೆಯು ಹೇಳಲ್ಪಟ್ಟಿರುವದು. ಜೀವಬ್ರಮ್ಹವಿಷಯದ ಭ್ರಮವನ್ನು ದೂರಮಾಡುವಂಥ, ಆತ್ಮಸಾಕ್ಷಾತ್ಕಾರವನ್ನುಂಟುಮಾಡುವಂಥ, ನಾಮದಿಂದಲೂ, ಅರ್ಥದಿಂದಲೂ ಶ್ರೇಷ್ಠವಾಗಿರುವಂಥ "ಈಶ" ವೆಂಬ ಉಪನಿಷದ್ರತ್ನವು ಆವೇದದ ಕಡೆಯಭಾಗದಲ್ಲಿ ಒಪ್ಪುತ್ತಿರುವದು. ಇದಲ್ಲದೆ ಬ್ರಹದಾರಣ್ಯಕವೆಂಬ ಶ್ರೇಷ್ಠ ಉಪನಿಷತು ಈ ಶುಕ್ಲ ಯಜುರ್ವೇದಕ್ಕೆ ಸಂಬಂಧಿಸಿರುವದು. ನಿನ್ನಸಲುವಾಗಿ ಬಹುಪ್ರಯಾಸದಿಂದ ಕಾದು ಇಟ್ಟಿದ್ದ ಪರಮಶ್ರೇಷ್ಠವಾದ ಯಜುರ್ವೇದದ ಈ ಶಾಖೆಯನ್ನು ನಿನಗೆ ಉಪದೇಶಿಸುವೆನು. ಮೊದಲೇ ವೇದವು ತೇಜೋಮಯ, ಅದರಲ್ಲಿ ನನ್ನತೇಜಸ್ಸು ಬೆರೆತಿರುವದು." ಎಂದು ಹೇಳಿ, ವೇದವನ್ನು ಉಪದೇಶಿಸಿ ಅಂತರ್ಧಾನಹೊಂದಿದನು.

ಹೀಗೆ ಅಗಾಧ ತಪಸ್ಸಿನಿಂದ ಸಂಪಾದಿಸಿದ ಅಯಾತಯಾಮ ವೇದವನ್ನೂ, ಉಳಿದ ಋಗಾದಿ ವೇದಗಳನ್ನೂ ಉಪದೇಶಿಸುವದಕ್ಕಾಗಿ ಶ್ರೀಯಾಜ್ಞವಲ್ಕ್ಯರು ಪಾಠಶಾಲೆಯನ್ನು ಏರ್ಪಡಿಸಿದರು. ಯಾಜ್ಞವಲ್ಕ್ಯರ ಕೀರ್ತಿಪ್ರಭೆಯು ಸಮಸ್ತದಿಗಂತವನ್ನು ಬೆಳಗುತಿತ್ತು. ವಿದ್ಯಾರ್ಥಿಗಳು ನಾಲ್ಕೂ ದಿಕ್ಕುಗಳಿಂದ ಗುಂಪುಗುಂಪಾಗಿ ಹೊರಟು, ಯಾಜ್ಞವಲ್ಕ್ಯರಲ್ಲಿ ಗುರುಕುಲವಾಸಮಾಡಬೇಕೆಂದು ಬರುತ್ತಿದ್ದರು. ಅಲ್ಪಕಾಲದಲ್ಲಿಯೇ ಪಾಠಶಾಲೆಯು ವಿದ್ಯಾರ್ಥಿಗಳಿಂದ ತುಂಬಿಹೋಯಿತು. ಜನಕನು ಆ ವೇದಶಾಲೆಗೆ ಪ್ರೋತ್ಸಾಹಕನಾಗಿ, ಒಂದು ವೇದಮಂದಿರವನ್ನು ಕಟ್ಟಿಸಿ, ಅಲ್ಲಿ ವಿದ್ಯಾರ್ಥಿಗಳ ಅನ್ನಪಾನಗಳ ಅನುಕೂಲತೆ ಮಾಡಿಕೊಟ್ಟಿದ್ದನು. ಆ ಮಂದಿರದಲ್ಲಿ ವಿದ್ಯಾರ್ಥಿಗಳೆಲ್ಲರೂ ಯಾಜ್ಞವಲ್ಕ್ಯರ ಸಹಾಯೋಪಾಧ್ಯಾಪಕರ ವ್ಯವಸ್ಥೆಗೆ ಒಳಪಟ್ಟು, ವಿದ್ಯಾಭ್ಯಾಸವನ್ನು ಮಾಡುತ್ತಲಿದ್ದರು. ಯಾಜ್ಞವಲ್ಕ್ಯರು ಒಂದುನಿಯಮಿತಕಾಲದಲ್ಲಿ ತಾವೇ ಅಲ್ಲಿಗೆ ಹೋಗಿ ವೇದಪಾಠವನ್ನು ಹೇಳುತ್ತಿದ್ದರು. ಅಲ್ಲಿ ಸೇರಿದ್ದ ವಿದ್ಯಾರ್ಥಿಗಳಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರೆಂಬ ಮೂರುಬಗೆಯ ದ್ವಿಜರಿದ್ದರು. ಪಾಠಶಾಲೆಯಲ್ಲಿ ಆರು ವೇದಾಂಗಗಳ ಬೇರೆಬೇರೆ ತರಗತಿಗಳಿದ್ದವು. ಯಾಜ್ಞವಲ್ಕ್ಯರ ಹೆಸರು, ಸಾಮಾನ್ಯ

ವಾಗಿ ಯಜುರ್ವೇದದ ವಿಷಯದಲ್ಲಿ ಬಹಳ ಪ್ರಸಿದ್ಧರಾಗಿದ್ದರೂ, ಅವರಿಗೆ ಋಕ್ಸಾಮಾದಿಗಳಲ್ಲಿಯೂ ಅಪಾರವಾದ ಪರಿಚಯವಿತ್ತು. ಅವರು ಈ ಮೂರುವೇದ ಗಳಲ್ಲಿಯೂ ಪಾಠವನ್ನು ಹೇಳುತ್ತಲಿದ್ದರು; ಆದರೆ ಅವರ ಶುಕ್ಲಯಜುರ್ವೇದದ ವಿಷಯದಉಪನ್ಯಾಸಗಳು, ಉಳಿದವೇದವೇದಾಂಗಗಳ ಉಪನ್ಯಾಸಗಳಿಗಿಂತಲೂ ಹೆಚ್ಚಾಗಿ ವಿದ್ಯಾರ್ಥಿಗಳ ಚಿತ್ತವನ್ನು ಆಕರ್ಷಿಸುತ್ತಲಿದ್ದವು. ವೇದವ್ಯಾಸರ ಮೊಮ್ಮಗನಾದ (ಮಗಳಮಗನಾದ) ಮಹಾಯೋಗಿ ಬಹ್ಮದತ್ತನು ಯಾಜ್ಞವಲ್ಕ್ಯರ ಶಿಷ್ಯನಾಗಿ, ನಾಲ್ಕೂ ವೇದಗಳ ಅಧ್ಯಯನಮಾಡಿದನು. ಮುಂದೆ ಬ್ರಹ್ಮದತ್ತನು ಒಂದುಶ್ರೇಷ್ಠ ವಾದ ಯಜ್ಞವನ್ನು ಆರಂಭಿಸಲು, ವೈಶಂಪಾಯನ, ಪೈಲ, ಮೊದಲಾದ ದೊಡ್ಡದೊಡ್ಡ ಋಷಿಗಳು ಕೂಡಿದರು. ಆಗ ಕೆಲವರು ಶಂಕಿತರಾಗಿ ಯಾಜ್ಞವಲ್ಕ್ಯರನ್ನು ಕುರಿತು— "ಪೌರುಷೇಯವಾಗಿ ತೋರುವ ಈ ಶುಕ್ಲಯಜುರ್ವೇದದ ಅಧ್ಯಯನವನ್ನು ನೀವು ಯಾರಬಳಿಯಲ್ಲಿ ಮಾಡಿದಿರಿ?" ಎಂದು ಪ್ರಶ್ನಮಾಡಲು, ಯಾಜ್ಞವಲ್ಕ್ಯರು ಅವರಿಗೆ— "ಸಾವಧಾನಚಿತ್ತದಿಂದ ಸ್ವಲ್ಪಹೊತ್ತು ಕುಳಿತುಕೊಳ್ಳಿರಿ, ಅಂದರೆ ಈ ವೇದವನ್ನು ಉಪ ದೇಶಿಸಿದ ಗುರುವನ್ನು ತೋರಿಸುವೆನು" ಎಂದು ಹೇಳಿದರು.

ಈ ಮೇರೆಗೆ ನುಡಿದು ಯಾಜ್ಞವಲ್ಕ್ಯರು ಏಕಾಗ್ರಚಿತ್ತರಾಗಿ ಸೂರ್ಯನನ್ನು ಧ್ಯಾ-ನಿಸತೊಡಗಿದರು. ಆಗ ಸೂರ್ಯನಾರಾಯಣನು ಪ್ರಕಟನಾಗಲು, ಎಲ್ಲರ ಕಣ್ಣುಗಳು ಮುಚ್ಚಬಡಿದದ್ದರಿಂದ "ರಕ್ಷಿಸು, ರಕ್ಷಿಸು" ಎಂದು ಅವರು ಪ್ರಾರ್ಥಿಸತೊಡಗಿದರು. ಆಗ ಮೇಘದಂಥ ಗಂಭೀರಧ್ವನಿಯಿಂದ ಶ್ರೀಸೂರ್ಯನಾರಾಯಣನು ಋಷಿಗಳನ್ನು ಕುರಿತು— "ಈ ಅಯಾತಯಾಮ ಸಂಜ್ಞಕವಾದ ವೇದವನ್ನು ಯಾಜ್ಞವಲ್ಕ್ಯರಿಗೆ ನಾನು ಉಪದೇಶಿಸಿರುವೆನು. ಪೌರುಷೇಯವಾಗಿ ತೋರುವ ಈ ವೇದದ ವಿಷಯವಾಗಿ ಯಾವ ಬಗೆಯ ಸಂಶಯವನ್ನೂ ಪಡಬಾರದು. ನಿಃಸಂಶಯವಾದ ಅಂತಃಕರಣದಿಂದ ಯಾಜ್ಞ ವಲ್ಕ್ಯರಿಂದ ಸಹಿತರಾಗಿ, ಶುದ್ಧವಾದ ಅಧ್ವರಭಾಗದೊಡನೆ ಒಪ್ಪುತ್ತಿರುವ ಶುಕ್ಲಯಜುರ್ವೇದದಿಂದ ಯಜ್ಞಭಾಗವನ್ನು ಸಂಪೂರ್ಣವಾಗಿ ಮಾಡಿರಿ" ಎಂದು ಹೇಳಿ, ಆ ಜಗಚ್ಚಕ್ಷುವು ಅಂತರ್ಧಾನವನ್ನು ಹೊಂದಿದನು. ಆ ಮೇಲೆ ಋಷಿಗಳೆಲ್ಲರೂ ಕಣ್ದೆರೆದು ಯಾಜ್ಞವಲ್ಕ್ಯರ ಸ್ತೋತ್ರಮಾಡಿದರು. ತಮ್ಮ ಶಿಷ್ಯನ ಮಹತ್ವವನ್ನು ನೋಡಿ ವೈಶಂಪಾಯನರು ಸಂತೋಷಭರಿತರಾಗಿ ಸದ್ಗದಿತಾಂತಃಕರಣದಿಂದ ಯಾಜ್ಞವಲ್ಕ್ಯರನ್ನು ಬಿಗಿಯಾಗಿ ಅಪ್ಪಿಕೊಂಡರು; ಮತ್ತು ತಮ್ಮಶಿಷ್ಯನ ಅದ್ಭುತವಾದ ಯೋಗಶಕ್ತಿಯನ್ನು ಯಾವತ್ತು ಋಷಿಗಳಮುಂದೆ ಶ್ಲಾಘಿಸಿ, ಶಿಷ್ಯನನ್ನು ಆಶೀರ್ವದಿಸಿ ತಾವು ಆ ಯಜ್ಞದಲ್ಲಿ ಋತ್ವಿಕ್ಕರ್ಮವನ್ನು ಸ್ವೀಕರಿಸುವವರಾದರು. ಆಮೇಲೆ ಯಾಜ್ಞವಲ್ಕ್ಯರು ಯಾವತ್ತು ಋಷಿಗಳೊಡನೆ ಬ್ರಹ್ಮದತ್ತನ ಯಜ್ಞವನ್ನು ಸಾಂಗಗೊಳಿಸಿದರು. ಇಂಥ ಮಹಾ ಪ್ರಭಾವಶಾಲಿಗಳಾದ ಶ್ರೀಯಾಜ್ಞವಲ್ಕ್ಯರಿಂದ ಶುಕ್ಲಯಜುರ್ವೇದವು ಹೀಗೆ ಪ್ರಸ್ಥಾಪಿತವಾಯಿತು.

ಒಮ್ಮೆ ಜನಕಮಹಾರಾಜನು ಏಕಾಂತದಲ್ಲಿ ಕುಳಿತಿದ್ದ ಯಾಜ್ಞವಲ್ಕ್ಯರನ್ನು

ಭಕ್ತಿಪುರಸ್ಸರ ನಮಸ್ಕರಿಸಿ ವಿನಯದಿಂದ —" ಸದ್ಗುರುವೇ, ಬ್ರಹ್ಮಜ್ಞಾನೋಪದೇಶದಿಂದ ನನ್ನನ್ನು ಘೋರಸಂಸಾರಸಾಗರದಿಂದ ಮುಕ್ತನಮಾಡಬೇಕು." ಎಂದು ಪ್ರಾರ್ಥಿಸಿದನು. ಅದಕ್ಕೆ ಯಾಜ್ಞವಲ್ಕ್ಯರು—" ಎಲೈ ಮಹಾಮತಿಯೇ, ನೀನು ಒಂದು ಯಜ್ಞಮಾಡಿ ಅದಕ್ಕೆ ಯಾವತು ಮಹರ್ಷಿಗಳನ್ನು ಕರಿಸು. ಹೀಗೆ ಯಜ್ಞಾರ್ಥವಾಗಿ ಬಂದ ಋಷಿಗಳಲ್ಲಿ ನಿನ್ನ ಬುದ್ಧಿಯಿಂದ ಬ್ರಹ್ಮನಿಷ್ಠರನ್ನು ಆರಿಸಿ, ಅವರಿಗೆ ನೀನು ಶರಣು ಹೋಗು. ಅಂದರೆ ಸದ್ಗುರುವಿನಲ್ಲಿ ದೃಢಭಕ್ತಿಯು ಉತ್ಪನ್ನವಾಗಿ ನೀನು ಮುಕ್ತನಾಗುವೆ. ದೃಢಭಕ್ತಿಯು ಹೊರತು ಬ್ರಹ್ಮಜ್ಞಾನವು ಆಗಲಾರದು. ಸದ್ಗುರುವು ಪ್ರಾಪ್ತನಾದವನಿಗೇ ಬ್ರಹ್ಮತತ್ವದ ಜ್ಞಾನವಾಗುವದೆಂದು ಶ್ರುತಿವಚನವಿರುತ ದೆ." ಎಂದು ಹೇಳಲು, ಯೋಗೀಶ್ವರರ ಅಪ್ಪಣೆಯಂತೆ ಜನಕಮಹಾರಾಜನು ಒಂದು ಶ್ರೇಷ್ಠಯಜ್ಞವನ್ನು ಆರಂಭಿಸಿದನು. ಕರೆಕಳುಹಿದಂತೆ ದೊಡ್ಡದೊಡ್ಡ ಬ್ರಹ್ಮರ್ಷಿಗಳೂ, ಅರಸರೂ, ಪಂಡಿತರೂ ಯಜ್ಞಮಂಟಪಕ್ಕೆ ಬಂದರು. ಅವರಲ್ಲಿ ಕಹೋಳ, ಆಶ್ವಲ, ಶಾಕಲ್ಯ, ವೇದವ್ಯಾಸ, ಪೈಲಾದಿ ಬ್ರಾಹ್ಮಣರೂ, ಶಿಷ್ಯರಿಂದ ಸಹಿತರಾಗಿ ಯಾಜ್ಞವಲ್ಕ್ಯರೂ, ಬಾಷ್ಕಳಾದಿ ಮಹಾ ಮಹಾಋಷಿಗಳೂ ಇದ್ದರು. ಎಲ್ಲರೂ ಕೂಡಿ ಜನಕರಾಜನ ಯಜ್ಞವನ್ನು ಸಾಂಗಗೊಳಿಸಿದರು. ಅವಭೃತಸ್ನಾನವಾದ ಮೇಲೆ ಬ್ರಹ್ಮಜ್ಞರ ಶೋಧಕ್ಕಾಗಿ ಜನಕಮಹಾರಾಜನು ಸುವರ್ಣಾಲಂಕಾರಗಳಿಂದ ಅಲಂಕೃತಗಳಾದ ಸಹಸ್ರ ಆಕಳುಗಳನ್ನು ಯಜ್ಞಮಂಟಪದಲ್ಲಿ ತಂದು ನಿಲ್ಲಿಸಿ—"ಬ್ರಾಹ್ಮಣರೇ, ಬ್ರಹ್ಮಜ್ಞಾನಿಯಾದವನು ಈ ಸಹಸ್ರಗೋಗಳ ಸ್ವೀಕಾರಮಾಡಬೇಕು," ಎಂದು ವಿಜ್ಞಾಪಿಸಿದನು. ಅದನ್ನು ಕೇಳಿ ಎಲ್ಲ ಬ್ರಾಹ್ಮಣರು ವಿಚಾರಮಗ್ನರಾಗಿ ಸುಮ್ಮನೆ ಕುಳಿತುಕೊಂಡರು. ಒಂದು ಪ್ರಹರವಾದ ಮೇಲೆ ಪುನಃ ಜನಕರಾಜನು ಬ್ರಾಹ್ಮಣರಿಗೆ—" ಬ್ರಹ್ಮಜ್ಞನು ಈ ಧೇನುಗಳನ್ನು ಸ್ವೀಕರಿಸಬೇಕು" ಎಂದು ಪ್ರಾರ್ಥಿಸಿದನು. ಆದರೂ ಒಬ್ಬ ಬ್ರಾಹ್ಮಣನೂ ಏಳದಾದನು. ಈ ಸಭೆಯಲ್ಲಿ ನಾನೊಬ್ಬನೇ ಬ್ರಹ್ಮಜ್ಞನೆಂದು ಯಾರು ಮುಂದೆ ಬರುವರು? ಅದನ್ನು ನೋಡಿ ಮತ್ತೆ ಜನಕರಾಜನು—" ಈ ಕೃತಯುಗದಲ್ಲಿ ಬ್ರಹ್ಮಜ್ಞರಹಿತ ಪೃಥ್ವಿಯಾಯಿತೇ" ಎಂದು ಕೇಳಿದನು. ಆಗ ಯಾಜ್ಞವಲ್ಕ್ಯರು ಎದ್ದು ನಿಂತು ಸಾಮಶ್ರವನೆಂಬ ತಮ್ಮ ಶಿಷ್ಯನನ್ನು ಕರೆದು—"ಸಾಮಶ್ರವಾ, ಈ ಆಕಳುಗಳನ್ನು ಅಟ್ಟಿಕೊಂಡು ಆಶ್ರಮಕ್ಕೆ ನಡೆ" ಎಂದು ಹೇಳಿದರು. ಯಾಜ್ಞವಲ್ಕ್ಯರ ಈ ಮಾತನ್ನು ಕೇಳಿ ಯಾವತ್ತು ಬ್ರಾಹ್ಮಣರು ಕ್ರೋಧಸಂತಪ್ತರಾದರು. ಅವರು ಆಕಳುಗಳನ್ನು ಅಟ್ಟಿಕೊಂಡು ಹೋಗಬಂದ ಸಾಮಶ್ರವನನ್ನು ತಡೆದು ಆವೇಶದಿಂದ—" ನೀನು ಈ ಆಕಳುಗಳನ್ನು ಮುಟ್ಟಲಾಗದು. ಯಾಜ್ಞವಲ್ಕ್ಯ, ಈ ದೊಡ್ಡದೊಡ್ಡ ಬ್ರಹ್ಮಜ್ಞ ಬ್ರಾಹ್ಮಣರು ಇರುತ್ತಿರಲು, ನೀನೇ ಶ್ರೇಷ್ಠನು ಹ್ಯಾಗೆ? ಇಷ್ಟು ಜನಬ್ರಾಹ್ಮಣರಲ್ಲಿ ಬ್ರಹ್ಮಜ್ಞತ್ವದ ಗರ್ವವನ್ನೂ, ಆಕಳುಗಳ ವಿಷಯದ ಇಚ್ಛೆಯನ್ನೂ ಪ್ರಕಟಿಸುವ ನೀನು ಬ್ರಹ್ಮಜ್ಞನು ಹೇಗೆ ಇದ್ದೀ? ನೀನು ಬ್ರಹ್ಮಜ್ಞರಲ್ಲಿ ಶ್ರೇಷ್ಠನಾಗಿದ್ದರೆ ನಮ್ಮ ಪ್ರಶ್ನಗಳಿಗೆ

ಉತ್ತರಕೊಡು. ನಿನ್ನ ಉತ್ತರಗಳು ಯೋಗ್ಯವಾಗಿ ತೋರಿದರೆ, ನಾವು ಗೆಲ್ಲಲ್ಪಟ್ಟವರಾಗುವೆವು. ಆಮೇಲೆ ಈ ಆಕಳುಗಳನ್ನು ನಿನ್ನ ಆಶ್ರಮಕ್ಕೆ ಅಟ್ಟಿಕೊಂಡು ಹೋಗುವೆಯಂತೆ; ಅಲ್ಲಿಯವರೆಗೆ ಈ ಆಕಳುಗಳನ್ನು ಮುಟ್ಟಲಾಗದು," ಎಂದು ನಿರ್ಬಂಧಿಸಿದರು.

ಬ್ರಾಹ್ಮಣರ ಈ ನಿರ್ಬಂಧವನ್ನು ಕೇಳಿ ಯಾಜ್ಞವಲ್ಕ್ಯರು ಆಸನದಿಂದ ಎದ್ದು ನಿಂತು ಬ್ರಾಹ್ಮಣರನ್ನು ನಮಸ್ಕರಿಸಿ ಕೈಜೋಡಿಸಿಕೊಂಡು —"ನಾನು ಬ್ರಹ್ಮಜ್ಞನಲ್ಲ, ಬ್ರಹ್ಮಜ್ಞರಾದ ಬ್ರಾಹ್ಮಣಶ್ರೇಷ್ಠರೇ, ನಿಮ್ಮನ್ನು ನಮಸ್ಕರಿಸುವೆನು. ನಾನು ಗೋ ಕಾಮುಕನಾಗಿರುವದು ನಿಜವು; ಆದರೆ ತಮ್ಮ ಇಚ್ಛೆಯಿದ್ದರೆ ಪ್ರಶ್ನಮಾಡಬಹುದು. ಯಥಾಮತಿ ಅವುಗಳಿಗೆ ಉತ್ತರಕೊಡುವೆನು. ಇದು ದೊಡ್ಡಜನರೊಳಗಿನ ವಾದವಿರುವದರಿಂದ, ದುರಾಗ್ರಹಕ್ಕೆ ಆಸ್ಪದವಿರಬಾರದು. ಶ್ರುತಿಮಾರ್ಗವನ್ನನುಸರಿಸಿ ವಿಚಾರವಾಗಬೇಕು. ಕುತರ್ಕಗಳು ಹೊರಡಲಾಗದು. ಇಂಥ ಬ್ರಹ್ಮವಾದದ ಕಾಲದಲ್ಲಿ ಸ್ವಾಭಿಮಾನವು ಮಹಾಪುರುಷರ ವೈರಿಯಾಗಿರುವದು; ಆದ್ದರಿಂದ ಅದನ್ನು ಬಿಟ್ಟುಕೊಟ್ಟು ಸುಖಸಮಾಧಾನದಿಂದ ವಾದವಿವಾದವನ್ನು ಮಾಡಬೇಕು. ಈ ಮಂತ್ರಿತವಾದ ಕುಶಗ್ರಂಥಿಯು ಈ ವಾದದಲ್ಲಿ ಅನ್ಯಾಯಮಾಡುವವರ ಶಾಸನಕ್ಕಾಗಿ ವಜ್ರದಂತೆ ಇರುವದು. ಇದನ್ನರಿತು ವಾದವಿವಾದವನ್ನು ಅವಶ್ಯವಾಗಿ ಮಾಡತಕ್ಕದ್ದು.

ಹೀಗೆ ನುಡಿದು ಯಾಜ ವಲ್ಕ್ಯರು ಕುಳಿತುಕೊಳ್ಳಲು, ಅವರ ಮೇಲೆ ಪ್ರಶ್ನೆಗಳ ಮಳೆಗರೆಯಹತ್ತಿತು. ಆ ಮಹಾ ಸಭೆಯಲ್ಲಿ ಪ್ರಶ್ನೆ ಮಾಡದವರು ಉಳಿಯಲೇ ಇಲ್ಲವೆಂಥು ಹೇಳಬಹುದು. ಜನಕರಾಜನ ಆ ಯಜ್ಞದಲ್ಲಿ ಹೋತೃಭಾಗವನ್ನು ಸಾಗಿಸುವ ಆಶ್ವಲನೆಂಬ ಋಷಿಯೂ, ಜರತ್ಕಾರುವೂ, ಬಾಹ್ಯಾನನ ಪುತ್ರನಾದ ಭುಜ್ಯುಋಷಿಯೂ, ಚಕ್ರಾಯಣ ಪುತ್ರನಾದ ಉಪಸ್ತಾ ಎಂಬ ಋಷಿಯೂ, ಕೌಷೀತಕನ ಮಗನಾದ ಕಹೋಲಋಷಿಯೂ ಆಧ್ಯಾತ್ಮಜ್ಞಾನದ ಸಂಬಂಧದಿಂದ ಹಲವು ಪ್ರಶ್ನೆಗಳನ್ನು ಮಾಡಿ, ಯಾಜವಲ್ಕ್ಯರ ಸಮರ್ಪಕ ಉತರದಿಂದ ಸಮಾಧಾನಪಟು, ಯಾಜ ವಲ್ಕ್ಯರು ಬ್ರಹ್ಮಜ್ಞರೆಂದು ಒಡಂಬಟ್ಟು ಸುಮ್ಮನೆ ಕುಳಿತುಕೊಂಡರು. ಈ ವಾದದಲ್ಲಿ ಜರತ್ಕಾರುವಿಗೆ ಆತ್ಮಜ್ಞಾನವಾಯಿತು. ಆ ಮೇಲೆ ವಾಚಕ್ರವಿಯ ಮಗಳಾದ ಗಾರ್ಗಿಯೆಂಬ ದಿಗಂಬರ ವೃತ್ತಿಯ ಸ್ತ್ರೀಯು ಯಾಜ್ಞವಲ್ಕ್ಯರಿಗೆ ಹಲವು ಪ್ರಶ್ನಗಳನ್ನು ಮಾಡಿ, ಯಾಜ ವಲ್ಕ್ಯರ ಬ್ರಹ್ಮಜ್ಞತ್ವವನ್ನು ಒಡಂಬಟ್ಟು, ಇವರು ಬ್ರಹ್ಮವಿದ್ವರಿಷ್ಠರೆಂದು ಉಳಿದ ಋಷಿಗಳಿಗೆ ಹೇಳಿದಳು. ಆ ಮೇಲೆ ಅರುಣಪುತ್ರನಾದ ಉದ್ದಾಲಕನು ಮುಂದಕ್ಕೆ ಬಂದು—"ಯಾಜ್ಞವಲ್ಕ್ಯ, ಅಯೋಗ್ಯ ಪ್ರಶ್ನೆಮಾಡಿದರೆ ಶಿರಚ್ಛೇದವಾದೀತೆಂದು ದರ್ಭಗ್ರಂಥಿಯ ಭಯವನ್ನು ತೋರಿಸಿ, ಜನರನ್ನು ನಿಷ್ಕಾರಣ ಬೆದರಿಸಬೇಡ. ನೀನು ಗೋಕಾಮುಕನಾಗಿರುವದರಿಂದ ನಿನ್ನ ಶಿರಚ್ಛೇದವು ಯಾಕಾಗಬಾರದು ಹೇಳು. ಬ್ರಹ್ಮಜರು ನಿರಿಚ್ಛರಾಗಿರುವರು." ಎಂದು ಹೇಳಿ, ಹಲವು ಪ್ರಶ್ನಗಳನ್ನು ಮಾಡಿದನು. ಅವುಗಳಿಗೆಲ್ಲ

ಯಾಜ್ಞವಲ್ಕ್ಯರು ಸಮರ್ಪಕ ಉತ್ತರಕೊಟ್ಟರು. ಆಗ ಉದ್ದಾಲಕನು ಯಾಜ್ಞವಲ್ಕ್ಯರನ್ನು ನಮಸ್ಕರಿಸಿ ಸುಮ್ಮನಾದನು. ಆಮೇಲೆ ಮಹಾಪಂಡಿತರಾದ ಶಾಕಲ್ಯ ಋಷಿಗಳು ವಾದಾರ್ಥವಾಗಿ ಮುಂದಕ್ಕೆ ಸರಿದರು. ಅವರು ಹಲವು ಪ್ರಶ್ನಗಳನ್ನು ಮಾಡುತ್ತ ಕಡೆಗೆ ಅಯೋಗ್ಯ ಪ್ರಶ್ನಮಾಡಲು, ಯಾಜ್ಞವಲ್ಕ್ಯರು—"ಎಲೈ ಶಾಕಲ್ಯನೇ, ಹೀಗೆ ಮಾರ್ಗಬಿಟ್ಟು ಪ್ರಶ್ನಮಾಡಬೇಡ, ನಿನ್ನ ಶಿರಚ್ಛೇದವಾದೀತು," ಎಂದು ಹೇಳಿದರು; ಆದರೆ ಶಾಕಲ್ಯರು ಅವನ್ನು ಲೆಕ್ಕಿಸದೆ ಪುನಃ ಅದೇಪ್ರಶ್ನಮಾಡಿದರು. ಆಗ ಒಮ್ಮಿಂದೊಮ್ಮೆ ಶಾಕಲ್ಯರ ಶಿರಚ್ಛೇದವಾಯಿತು. ಅದನ್ನು ನೋಡಿ ಸಭಾಸದರೆಲ್ಲರೂ ಬೆದರಿ ಸುಮ್ಮನೆ ಕುಳಿತುಕೊಂಡರು. ಆಗ ಯಾಜ್ಞವಲ್ಕ್ಯರು ಯಾವತ್ತು ಋಷಿಗಳನ್ನು ವಂದಿಸಿ—"ಸಭಾಸದರೇ, ಇನ್ನು ಏನಾದರೂ ಪ್ರಶ್ನಮಾಡುವದಿದ್ದರೆ ಭಯಪಡದೆ ಮಾಡಬೇಕು; ಅಥವಾ ನಾನೇ ಯಾವದೊಂದು ಪ್ರಶ್ನಮಾಡಲೋ" ಎಂದು ಕೇಳಲು, ದರ್ಭಗ್ರಂಥಿಯ ಭಯದಿಂದ ಯಾರೂ ಮಾತಾಡದೆ ಸುಮ್ಮನೆ ಕುಳಿತುಕೊಂಡರು. ಇದನ್ನರಿತು ಯಾಜ್ಞ ವಲ್ಕ್ಯ ರು ತಾವು ಒಂದು ಪ್ರಶ್ನಮಾಡಿ ಇದರ ಉತ್ತರ ಹೇಳಬೇಕೆಂದು ಕೇಳಿಕೊಂಡರು. ಅದಕ್ಕೆ ಋಷಿಗಳು—"ಇದರ ಉತ್ತರವು ನಮಗೆ ಗೊತ್ತಿಲ್ಲ, ನೀವೇ ಹೇಳಬೇಕು" ಎಂದು ನುಡಿಯಲು, ಯಾಜ್ಞವಲ್ಕ್ಯರು ಉತ್ತರ ಹೇಳಿ, ನಿಜವಾದ ಬ್ರಹ್ಮಜ್ಞರೇ ಈ ಮೃತಶಾಕಲ್ಯನನ್ನು ಬದುಕಿಸಬಲ್ಲರು, ಎಂದು ನುಡಿದರು. ಆಗ ಯಾವತ್ತು ಋಷಿಗಳು ಯಾಜ್ಞವಲ್ಕ್ಯರನ್ನು ವಿಜ್ಞಾಪಿಸಲು, ಅವರು ತಮ್ಮ ಶಾಂತವಾದ ಹಸ್ತಸ್ಪರ್ಶದಿಂದ ಶಾಕಲ್ಯಋಷಿಯನ್ನು ಬದುಕಿಸಿದರು! ಆಗ ಯಾಜ್ಞವಲ್ಕ್ಯರು ಬ್ರಹ್ಮಜ್ಞರೆಂದು ಜಯಜಯಕಾರವಾಯಿತು. ಆ ಶಾಕಲ್ಯಋಷಿಗಳು ಯಾಜ್ಞವಲ್ಕ್ಯರನ್ನು ದೃಢವಾಗಿ ಅಪ್ಪಿಕೊಂಡು ಸಾಮಶ್ರವನಿಗೆ—"ಆಕಳುಗಳನ್ನು ಒಯ್ಯಬೇಕೆಂ"ದು ಆದರದಿಂದ ಹೇಳಿದರು. ಮುಂದೆ ಜನಕ ಮಹಾರಾಜನು ಬ್ರಹ್ಮವಿದ್ವರಿಷ್ಠರಾದ ಯಾಜ್ಞವಲ್ಕ್ಯರಿಂದ ಬ್ರಹ್ಮಜ್ಞಾನವನ್ನು ಪಡೆದು ವಿದೇಹಜನಕನೆಂದು ಪ್ರಸಿದ್ಧನಾದನು.

೨ ನೆಯ ಪ್ರಕರಣ.

## ನಿರ್ಮಲ ಹೃದಯಪ್ರಭಾವ.

ಜನಕಮಹಾರಾಜನು ನೆರಿಸಿದ ಮಹಾಸಭೆಯಲ್ಲಿ ಭಗವಾನ್ ಯಾಜ್ಞವಲ್ಕ್ಯರೊಡನೆ ಬೇರೆ ಬೇರೆ ಋಷಿವರ್ಯರು ಮಾಡಿದ ವಿವಾದವನ್ನು ನಾವು ಉಲ್ಲೇಖಿಸದಿರುವದನ್ನು ನೋಡಿ ವಾಚಕರು ನಮ್ಮ ಮೇಲೆ ಸಿಟ್ಟಾಗಬಾರದು; ಯಾಕಂದರೆ, ಭಗವತೀ. ಕಾತ್ಯಾಯನಿಗೆ ಆಶ್ರಯಭೂತನಾಗಿರುವ ಮಹಾತ್ಮನ ಘನತರವಾದ ಯೋಗ್ಯತೆಯನ್ನು ತಿಳಿಸುವದಕ್ಕಾಗಿ ಮಾತ್ರ ನಾವು ಹಿಂದಿನ ಪ್ರಕರಣನ್ನು ಬರೆದಿರುವೆವು. ಸಾಮಾನ್ಯಜನ

ಸಮಾಜದ ವಿಚಾರದ, ಹಾಗು ಆಚಾರದ ಅಳವಿನೊಳಗೆ ಬಾರದ ಗಹನವಾದ ವೇದಾಂತವಿಷಯದ ಚರ್ಚೆಯನ್ನು ಸುಮ್ಮನೆ ಬರೆಯುತ್ತ ಹೋಗಿ, ಜನರನ್ನು ಬೇಸರಗೊಳಿಸುವದು ನಮ್ಮ ಕೆಲಸವಲ್ಲ. ವೇದಾಂತಶ್ರವಣಕ್ಕೆ ಅನಧಿಕಾರಿಯಾದ್ದರಿಂದ ತಮ್ಮ ಪ್ರಿಯಪತ್ನಿಗೂ ಆ ವಿಷಯವನ್ನು ತಾವಾಗಿ ಉಪದೇಶಿಸುವ ಗೊಡವಿಗೆ ಭಗವಾನ್ ಯಾಜ್ಞವಲ್ಕ್ಯರೇ ಹೋಗದಿರುವಾಗ, ವೇದಾಂತದ ಅನುಭವವಿಲ್ಲದ ನಮ್ಮಂಥ ಪಾಮರರ ಪಾಡೇನು ? ಮಹಾತ್ಮರಾದ ಯಾಜ್ಞವಲ್ಕ್ಯರಿಗೆ ಕಾತ್ಯಾಯನೀ, ಮೈತ್ರೇಯಿ ಎಂಬ ಇಬ್ಬರು ಹೆಂಡಿರು. ಅವರಲ್ಲಿ ಮುಖ್ಯವಾಗಿ ಸದ್ಗುಣಸಂಪನ್ನೆಯೂ, ಕರ್ತವ್ಯದಕ್ಷಳೂ, ಪತಿಭಕ್ತಿಪರಾಯಣಳೂ, ಪುತ್ರವತ್ಸಲಳೂ ಮೇಲೆ ಯಾಜ್ಞವಲ್ಕ್ಯಪಾಣಿಗ್ರಹಣದಿಂದ ಆತ್ಮನಿಷ್ಠಳೂ ಆದ ಭಗವತೀ ಕಾತ್ಯಾಯನಿಯಂಥ ಭಗಿನೀವರ್ಗವೂ, ಮಾತೃವರ್ಗವೂ ನಮ್ಮ ಕನ್ನಡಸಮಾಜದಲ್ಲಿ ಉಂಟಾಗುವದು ಹಿತಕರವೆಂದು ನಮ್ಮ ಭಾವನೆಯಿರುವದರಿಂದ, ನಾವು ಈ ಪುಸ್ತಕಕ್ಕೆ ಭಗವತೀಕಾತ್ಯಾಯನೀಯೆಂದು ಹೆಸರಿಟ್ಟಿರುವೆವು; ಮತ್ತು ಸೀತಾ, ದ್ರೌಪದೀ ಮೊದಲಾದ ಪೌರಾಣಿಕಕಾಲದ ಸ್ತ್ರೀಯರ ಪಂಕ್ತಿಯಲ್ಲಿ ಕಣ್ಣುಮುಚ್ಚಿಕೊಂಡು ಕುಳ್ಳಿರಿಸಬಹುದಾಗಿದ್ದ ಆ ಮಹಾತ್ಮಳ ಅನುಕರಣಮಾಡಬೇಕೆಂದು ಬುದ್ಧಿಪೂರ್ವಕವಾಗಿ ನಾವು ನಮ್ಮ ಮಾತೃಭಗಿನೀವರ್ಗವನ್ನು ಪ್ರಾರ್ಥಿಸುವೆವು. ಭಗವತೀ-ಕಾತ್ಯಾಯನಿಯರಂಥ ಕರ್ತಾರರು ಲೋಕಕ್ಕೆ ಅನುಕರಣೀಯರೆಂತಲೂ, ಭಗವತೀ-ಮೈತ್ರೇಯಿಯರಂಥ ಬ್ರಹ್ಮವಾದಿಗಳು ಲೋಕಕ್ಕೆ ಪೂಜ್ಯರೆಂತಲೂ ತಿಳಿಯತಕ್ಕದ್ದು. ಬ್ರಾಹ್ಮಣರು ಪುಣ್ಯಾಹವಾಚನ ಕರ್ಮದಲ್ಲಿ "ಅರುಂಧತೀಪುರೋಗಾ ಏಕಪತ್ನ್ಯಃಪ್ರೀಯಂತಾಂ" ಎಂದು ಉಚ್ಚರಿಸುವದರ ಸಾಲಿನಲ್ಲಿಯೇ "ಭಗವತೀಕಾತ್ಯಾಯನೀ ಪ್ರೀಯತಾಂ" ಎಂದು ಉಚ್ಚರಿಸುವದರ ಮರ್ಮವನ್ನು ವಾಚಕರು ಅವಶ್ಯವಾಗಿ ವಿಚಾರಿಸತಕ್ಕದ್ದು ಇರಲಿ. ಇನ್ನು ಪ್ರಕೃತವಿಷಯವನ್ನು ಕೈಕೊಳ್ಳೋಣ.

ಪ್ರಾತಃಕಾಲದ ಸುಸಮಯವು. ಜನಕಮಹಾರಾಜನ ರಾಜಧಾನಿಯಾದ ಜನಕಪುರದಬಳಿಯ ಗಹನಾರಣ್ಯ. ಅದೇ ಸೂರ್ಯೋದಯವಾಗಿದೆ. ಮಂದಮಾರುತನು ಸುಳ್ಳನೆ ಸುಳಿದು ಗಿಡಬಳ್ಳಿಗಳ ಚಿಗುರುಗಳನ್ನು ಅಲ್ಲಾಡಿಸುತ್ತ ಸದ್ದಿಲ್ಲದೆ ಸಂಚರಿಸತೊಡಗಿದಾನೆ. ಭಗವಾನ್ ಶ್ರೀ ಸೂರ್ಯನಾರಾಯಣನ ಸ್ವಾಗತಾರ್ಥವಾಗಿ ಪಕ್ಷಿಗಣವು ಮಂಜುಲಸ್ವರದಿಂದ ಗಾನಮಾಡತೊಡಗಿದೆ. ಚಿಗರೆಗಳು ಚಂಡಿನಂತೆ ಟಣ್ಣಟಣ್ಣನೆ ಜಿಗಿಯುತ್ತ ನಡೆದವೆ. ಇಂಥ ಸಮಯದಲ್ಲಿ ಮೂವರು ದಾರಿಕಾರರು ದಾರಿಯಹಿಡಿದು ಜನಕಪುರದ ಕಡೆಗೆ ಸಾಗಿದ್ದರು. ಅವರು ಮೂವರೂ ಕಸುವಿನ ಮೈಕಟ್ಟಿನವರಾಗಿದ್ದು, ನಿಲುವಿಕೆಯಲ್ಲಿ ಎತ್ತರವಾಗಿದ್ದರು. ಒಟ್ಟಿನಲ್ಲಿ ಅವರ ಆಕೃತಿಗಳು ಭವ್ಯವಾಗಿದ್ದವು. ಅವರಲ್ಲಿ ಇಬ್ಬರು ಉಣ್ಣೆಯ ಅಂಗಿಗಳನ್ನು ಹಾಕಿಕೊಂಡು, ಉದ್ದವಾದ ತಮ್ಮ ಚಂಡಿಕೆಗಳಿಗೆ ಗಂಟುಹಾಕಿದ್ದರು. ಅವರಿಬ್ಬರಿಗೂ ಗಡ್ಡಗಳಿದ್ದವು. ಅವರು ಹೇಳಿಕೊಳ್ಳುವಂಥ ಸುಂದರರಾಗಿರದಿದ್ದರೂ, ಅವರ ಮುಖಮುದ್ರೆಯಲ್ಲಿ ಶೌರ್ಯದ ಕಳೆಯು ಉಕ್ಕುತ್ತಿತ್ತು. ಅವರ ಬೆನ್ನಿಗೆ ಬತ್ತಳಿಕೆಯಿದ್ದು, ಕೆಳಗೆ ಕಾಲತನಕ ಇಳಿಬಿದ್ದಂಥ ಧನುಸ್ಸನ್ನು

ಅವರು ಹೆಗಲಿಗೆ ಹಾಕಿದ್ದರು. ಅವರ ಟೊಂಕದಲ್ಲಿ ಖಡ್ಗವು ಅಲೆದಾಡುತ್ತಿತ್ತು. ಇವರಿಬ್ಬರಿಂದ ತೀರ ಭಿನ್ನವಾದ ವೇಷವು ಮೂರನೆಯವನದಿತ್ತು. ಅವನು ಚಿಗರಿಯ ಚರ್ಮವನ್ನು ಹೊದ್ದಿದ್ದನು. ಆತನ ತಲೆಗೂದಲುಗಳ ರಚನೆಯು ಮೇಲಿನ ಇಬ್ಬರು ಗೃಹಸ್ಥರ ತಲೆಗೂದಲುಗಳ ರಚನೆಯಂತೆಯೇ ಇತ್ತು. ಮೈಮೇಲೆ ಭಸ್ಮದ ಪಟ್ಟೆಗಳಿದ್ದು, ಕೈಯಲ್ಲಿ ಉದ್ದವಾದದೊಂದು ಕೋಲು ಇತ್ತು. ಆತನ ಉಡಿಗೆ–ತೊಡಿಗೆಗಳು ತೀರ ಸಾದಾತರದವಾಗಿದ್ದರೂ, ಸುವ್ಯವಸ್ಥಿತವಾಗಿದ್ದವು. ಆತನ ಮುಖಮುದ್ರೆಯು ಗಂಭೀರವಾಗಿದ್ದು, ಅದರಲ್ಲಿ ನಿರ್ಧಾರದ ಚಿಹ್ನವು ಒಡೆದು ಕಾಣುತ್ತಿತ್ತು. ಆತನ ಮಾತುಗಳು ಅತ್ಯಂತ ಪವಿತ್ರವಾದವೂ, ಪರಿಶುದ್ಧವಾದವೂಇದ್ದವು. ಈ ಎಲ್ಲ ಚಿಹ್ನಗಳಿಂದ ಆತನು ಬ್ರಾಹ್ಮಣನಿದ್ದನೆಂಬದನ್ನೂ, ಉಳಿದವರಿಬ್ಬರು ಕ್ಷತ್ರಿಯರಿದ್ದರೆಂಬದನ್ನೂ ವಾಚಕರಿಗೆ ನಾವು ತಿಳಿಸುವ ಅವಶ್ಯವಿಲ್ಲ. ಆ ತೇಜಃಪುಂಜನಾದ ಬ್ರಾಹ್ಮಣನು ಜನಕ ರಾಜನ ವಿಶ್ವಾಸದ ಶ್ರೇಷ್ಠಮಂತ್ರಿಯಾದ ಮಿತ್ರನೆಂಬವನಾಗಿದ್ದನು. ಉಳಿದ ಕ್ಷತ್ರಿಯ ವೀರರಿಬ್ಬರನ್ನು ಬೆಂಗಾವಲಾಗಿ ನಿಯಮಿಸಿ, ಜನಕರಾಜನು ಕಾರ್ಯನಿಮಿತ್ತವಾಗಿ ಆ ತನ್ನ ಮಂತ್ರಿಶ್ರೇಷ್ಠನನ್ನು ನೆರೆಯಗ್ರಾಮಕ್ಕೆ ಕಳಿಸಿದ್ದನು. ಆ ಕಾರ್ಯವನ್ನು ಸಾಧಿಸಿಕೊಂಡು ಈ ಮೂವರು ಮೇಲೆ ಹೇಳಿದಂತೆ ತಮ್ಮ ರಾಜಧಾನಿಯಾದ ಜನಕಪುರಿಯ ಕಡೆಗೆ ಸಾಗಿದ್ದರು. ಜನಕರಾಜನು ಅದೇ ನೆರಿಸಿದ್ದಮಹಾಸಭೆಯಸುದ್ದಿಯನ್ನೂ, ಯಾಜ್ಞ-ವಲ್ಕ್ಯರ ಪ್ರಭಾವವನ್ನೂ ಕುರಿತು ಅವರು ಮಾತಾಡುತ್ತಲಿದ್ದರು. ಮಿತ್ರನು ಯಾಜ್ಞವಲ್ಕ್ಯರ ಸ್ನೇಹಿತನಾಗಿದ್ದು, ಘನಪಂಡಿತನಾಗಿದ್ದನು. ಯಾಜ್ಞವಲ್ಕ್ಯರು ಶ್ರೀ ಸೂರ್ಯ ನಾರಾಯಣನ ಉಪದೇಶರೂಪಪ್ರಸಾದದಿಂದ ಹೊಸದಾಗಿ ರಚಿಸುತ್ತಿದ್ದ ಶುಕ್ಲಯಜುರ್ವೇದ–ವ್ಯವಹಾರದಲ್ಲಿ ಮಿತ್ರನ ಅಂಗವು ಇತ್ತು. ಈ ಕಾರ್ಯಕ್ಕಾಗಿ ಹಲವು ಋಷಿಗಳು ಯಾಜ ವಲ್ಕ್ಯರ ಗೃಹದಲ್ಲಿಕೂಡುತ್ತಿದ್ದರು. ಈ ಮಿತ್ರನಿಗೆ ಮೈತ್ರೇಯಿಯೆಂಬ ಒಬ್ಬ ಅವಿವಾಹಿತಳಾದಮಗಳಿದ್ದಳು. ಆಕೆಗೆ ಈಗ ಹದಿನೆಂಟುವರ್ಷದಪ್ರಾಯವಿತ್ತು. ಮೈತ್ರೇಯಿಯ ಸದ್ಗುಣಗಳ, ಹಾಗು ಲೋಕೋತ್ತರ ಸೌಂದರ್ಯದ ಕೀರ್ತಿಯು ಎಲ್ಲಕಡೆಯಲ್ಲಿಯೂ ಪಸರಿಸಿತ್ತು. ದೊಡ್ಡದೊಡ್ಡ ವಿದ್ವಾಂಸರಾದ ತರುಣಬ್ರಾಹ್ಮಣರು ಮೈತ್ರೇಯಿಯ ಪಾಣಿಗ್ರಹಣದ ಸುಯೋಗವು ತಮ್ಮ ಪಾಲಿಗೆ ಇರಬಹುದೇ, ಎಂದು ಎದುರು ನೋಡುತಿದರು. ಆಗಿನಕಾಲದಲ್ಲಿ ಸ್ತ್ರೀಯರು ಆಜನ್ಮ ಬ್ರಹ್ಮಚರ್ಯದಿಂದ ಕಾಲಹರಣಮಾಡುವ ಪ್ರಚಾರವಿತ್ತು. ಗಾರ್ಗಿಯು ಇದಕ್ಕೆ ಪ್ರಸಿದ್ಧವಾದ ಉದಾಹರಣವಾಗಿದ್ದಳು. ಗಾರ್ಗಿಯು ಸಾಮಾನ್ಯಸ್ತ್ರೀಯಲ್ಲ, ಯಾಜ್ಞವಲ್ಕ್ಯರೊಡನೆ ಮಹಾಸಭೆಯಲ್ಲಿ ವಾದ ಮಾಡಿದವರಲ್ಲಿ ಆಕೆಯು ಅಗ್ರಗಣ್ಯಳಾಗಿದ್ದಳು. ಗಾರ್ಗಿಯು ಮೈತ್ರೇಯಿಯ ಅಬಚಿಯು, ಅಂದರೆ ಮಿತ್ರನ ಹೆಂಡತಿಯ ತಂಗಿಯು. ಮೈತ್ರೇಯಿಯ ಮೇಲೆ ಗಾರ್ಗಿಯ ಪ್ರೀತಿಯು ಬಹಳ. ಅಬಚಿಯ ಸಹವಾಸದಿಂದ ಮೈತ್ರೇಯಿಯ ವಿಚಾರಗಳು ಪರಿಪಕ್ವವಾಗತೊಡಗಿದ್ದವು. ಆಕೆಯ ಒಲವು ಅಧ್ಯಾತ್ಮವಿಷಯದಕಡೆಗೆ ವಿಶೇಷವಾಗಿತ್ತು. ಆದ್ದರಿಂದ ಲಗ್ನಮಾಡಿಕೊಳ್ಳುವದರಕಡೆಗೆ ಆಕೆಯಲಕ್ಷವು ವಿಶೇಷವಾಗಿದ್ದಿಲ್ಲ. ತನ್ನ ಅಬಚಿ

ಯಾತೆ ಮೈತ್ರೇಯಿಯು ಬ್ರಹ್ಮಚರ್ಯದಿಂದ ಕಾಲಹರಣಮಾಡುವಳೆಂದು ಜನರು ಅನ್ನುತ್ತಿದರು. ಹೀಗೆ ಸದ್ಗುಣಮಂಡಿತಳೂ, ಲೋಕೋತ್ತರ ಸುಂದರಿಯೂ ಆದ ಮಗಳಿಗೆ ತಕ್ಕವರನನ್ನು ಆರಿಸುವವಿಷಯದಲ್ಲಿ ಮಿತ್ರನು ಯಾವಾಗಲೂ ಚಿಂತಿಸುತ್ತಿದನು. ಮಗಳು ಕಣ್ಣಿಗೆ ಬಿದ್ದಾಗೆಲ್ಲ, ಮತ್ತು ಆಕೆಯು ನೆನಪುಆದಾಗೆಲ್ಲ ಮಿತ್ರನ ಮನಸ್ಸು ವ್ಯಗ್ರವಾಗುತ್ತಿತ್ತು. ಹೆಣ್ಣು ಹಡೆದವರ ಸ್ಥಿತಿಯು ಹೀಗೆಯೇ ಸರಿ!

ಮೇಲೆ ಹೇಳಿದಂತೆ ಮಿತ್ರನುಇಬ್ಬರು ಕ್ಷತ್ರಿಯವೀರರೊಡನೆ ಜನಕಪುರದಕಡೆಗೆ ಹೊರಟದ್ದಾಗ, ಆತನಿಗೆ ಮಗಳ ನೆನಪಾಗಿ ಆತನ ಮನಸ್ಸು ವ್ಯಗ್ರವಾಗಿತ್ತು. ಮಾತಿನಕಡೆಗೆ ಆತನ ಲಕ್ಷವಿದ್ದಿಲ್ಲ. ಈ ಸಂಗತಿಯು ಆ ಕ್ಷತ್ರಿಯವೀರರಿಗೆ ಗೊತ್ತಾಗಿತ್ತು. ತಮ್ಮ ಮಾತಿನಕಡೆಗೆ ಮಿತ್ರನ ಲಕ್ಷವಿಲ್ಲೆಂಬದನ್ನೂ, ಮಹಾಸಭೆಯಾದಂದಿನಿಂದ ಇತ್ತಿತ್ತಲಾಗಿ ಮಿತ್ರನು ಬಹುತರ ಯಾವಾಗಲೂ ಚಿಂತಾಮಗ್ನನಾಗಿರುವನೆಂಬದನ್ನೂ ಅವರು ಅರಿತಿದ್ದರು; ಮಿತ್ರನಂಥ ಜ್ಞಾನಧನನ ಚಿಂತೆಯಕಾರಣವು ಗೊತ್ತಾಗದ್ದರಿಂದ ಅವನ್ನು ಅರಿತುಕೊಳ್ಳಲಿಕ್ಕೆ ಅವರು ಆತುರಪಡುತ್ತಿದ್ದರು; ಆದರೆ ಒಮ್ಮೆಲೆ ಮಿತ್ರನನ್ನು ಕೇಳುವ ಧೈರ್ಯವು ಅವರಿಗೆ ಆಗಿದ್ದಿಲ್ಲ. ಆ ಕ್ಷತ್ರಿಯವೀರರಿಬ್ಬರೂ ಮಿತ್ರನ ಆದರಕ್ಕೆ ಪಾತ್ರರಾಗಿದ್ದರೂ, ಯಾವದೊಂದು ಮಾತನ್ನುಕುರಿತು ಮಿತ್ರನನ್ನು ತಟ್ಟನೆ ಕೇಳಲಿಕ್ಕೆ ಅವರು ಆತಂಕಪಡುತ್ತಿದ್ದರು. ಆ ಕ್ಷತ್ರಿಯ ವೀರರಿಬ್ಬರಲ್ಲಿ ಯಜ್ಞದತ್ತನೆಂಬುವನು ಮಿತ್ರನನ್ನು ಕುರಿತು ವಿನಯದಿಂದ--"ಭಗವನ್, ತಾವು ಚಿಂತಾತುರರಾಗಿರುವಂತೆ ತೋರುತ್ತದೆ. ಮಹಾಸಭೆಯಾದಂದಿನಿಂದ ನಿಮ್ಮಮನಸ್ಸಿಗೆ ಸ್ವಸ್ಥವಿಲ್ಲ. ಮಹಾಸಭೆಗೂ ನಿಮ್ಮ ಚಿಂತೆಗೂ ಸಂಬಂಧವೇನೋ ತಿಳಿಯದಾಗಿದೆ. ಚಿಂತೆಯಕಾರಣವು ನಾನು ಕೇಳತಕ್ಕದ್ದಾಗಿದ್ದರೆ ದಯಮಾಡಿ ಹೇಳೋಣಾಗಬೇಕು. ಆಜ್ಞಾಧಾರಕರಾದ ನಮ್ಮಲ್ಲಿ ಪರಕೀಯತ್ವವನ್ನು ವಹಿಸಬಾರದು" ಎಂದು ಕೇಳಿಕೊಂಡನು. ಅದಕ್ಕೆ ಮಿತ್ರನು--"ವತ್ಸಾ, ನೀನೂ, ವಿಷ್ಣುಮಿತ್ರನೂ ನನಗೆ ಹೊರಗಿನವರಲ್ಲ. ನಿಮ್ಮ ಮುಂದೆ ಹೇಳಲಿಕ್ಕೆ ಯಾವಬಗೆಯ ಸಂಕೋಚವೂ ನನಗೆ ಆಗುವಹಾಗಿಲ್ಲ. ನನ್ನ ಚಿಂತೆಯಕಾರಣವು ನನ್ನ ಮಗಳು ಆಗಿರುವಳು. ಆಕೆಯ ಲಗ್ನದ ಚಿಂತೆಯು ಯಾವಾಗಲೂ ನನ್ನನ್ನು ಬಾಧಿಸುತ್ತದೆ. ಅದೊಂದು ಕಾರ್ಯವು ಆದರೆ ನನ್ನಮನಸ್ಸಿಗೆ ಸಮಾಧಾನವಾಗುವದು. ಯಜ್ಞದತ್ತಾ, ಏನುಮಾಡುವದು ಹೇಳು. ಬ್ರಹ್ಮಸಂಕಲ್ಪವಿದ್ದಂತೆ ಆಗುತ್ತದೆಂದು ಬಾಯಿಂದ ಯಾರಾದರೂ ಹೇಳಬಹುದು; ಆದರೆ ಹಾಗೆಹೇಳುವದು ಕೇವಲ ಪ್ರಯತ್ನಾಂತದಲ್ಲಿ ಸಮಾಧಾನಪಡಲಿಕ್ಕೆ ತಕ್ಕಮಾತಲ್ಲದೆ, ಪ್ರಯತ್ನಮಾಡದೆ ಆ ಮಾತನ್ನು ನಂಬಿ ಸುಮ್ಮನೆ ಕುಳಿತುಕೊಳ್ಳತಕ್ಕದಲ್ಲ. ಯತ್ನಮಾಡುವದು ನಮ್ಮ ಕರ್ತವ್ಯವಾದ್ದರಿಂದ ಯೋಗ್ಯವರಪ್ರಾಪ್ತಿಗಾಗಿ ಯತ್ನಮಾಡಲೇಬೇಕು. ಹಾಗೆ ನಾನು ಈವರೆಗೆ ಯತ್ನಿಸಿದ್ದರೂ, ಆ ಯತ್ನಕ್ಕೆ ಸಿದ್ಧಿಯು ದೊರೆತಿರುವದಿಲ್ಲ. ಮೈತ್ರೇಯಿಯ ಶಿಕ್ಷಣದ ವಿಷಯವಾಗಿ ನಾನು ದುರ್ಲಕ್ಷಮಾಡಿರುವದಿಲ್ಲ. ಗಾರ್ಗಿಯಂಥ ಯೋಗ್ಯತಾಸಂಪನ್ನಳಾದ ಸ್ತ್ರೀಯಸಹವಾಸವೂ ಮೈತ್ರೇಯಿಗೆ ಇರುತ್ತದೆ. ಆದ್ದರಿಂದ ಆ ನನ್ನಮಗಳು ಕೇವಲ ವಿಷಯೋಪ

ಭೋಗದ ದೃಷ್ಟಿಯಿಂದ ಲಗ್ನಮಾಡಿಕೊಳ್ಳಬೇಕೆಂದು ಇಚ್ಛಿಸುವದಿಲ್ಲ. ಕೇವಲ ಶ್ರೀಮಂತನಾದ ವರನು ಆಕೆಗೆ ಸೇರನು. ಆಕೆಯ ವಿದ್ಯೆಯೇ ಆಕೆಯ ಲಗ್ನಕ್ಕೆ ವಿಘ್ನವಾದಂತಾಗಿದೆ. ಮೊನ್ನೆ ಮಹಾಸಭೆಯಲ್ಲಿ ಯಾಜ್ಞವಲ್ಕ್ಯರ ವಿದ್ಯಾಪ್ರಭಾವವನ್ನು ನೋಡಿ ಮೈತ್ರೇಯಿಯು—"ಆದರೆ ಯಾಜ್ಞವಲ್ಕ್ಯರನ್ನು ಮದುವೆಯಾಗಬೇಕು, ಇಲ್ಲದಿದ್ದರೆ ತನ್ನ ಅಬಚಿಯಾದ ಗಾರ್ಗಿಯಂತೆ ಆಜನ್ಮ ಬ್ರಮ್ಹಚರ್ಯದಿಂದ ಇರಬೇಕು," ಎಂದು ನಿಶ್ಚಯಿಸಿರುವಂತೆ ಕೇಳುತ್ತೇನೆ; ಆದ್ದರಿಂದ ನನಗೆ ನೀಗಲಾರದ ಚಿಂತೆಯು ಪ್ರಾಪ್ತವಾದಂತಾಗಿರುತ್ತದೆ.

ಮಿತ್ರನ ಈ ಮಾತುಗಳನ್ನು ಕೇಳಿ ಯಜ್ಞದತ್ತನು—"ಭಗವನ್, ಹದಿನೆಂಟನೆಯ ವರ್ಷದ ವಯಸ್ಸಿನಲ್ಲಿಯೇ ಆಧ್ಯಾತ್ಮವಿಷಯದ ಕಡೆಗೆ ಮನಸ್ಸು ತಿರುಗಿ, ಯಾಜ್ಞವಲ್ಕ್ಯರಂಥ ಬ್ರಹ್ಮನಿಷ್ಠರನ್ನು ಲಗ್ನವಾಗಲು ಬಯಸುವದು ನಿಮ್ಮ ಮಗಳಿಗೆ ಭೂಷಣವೇ ಸರಿ. ನಿಮ್ಮ ಮಗಳಲ್ಲಿಯಲ್ಲದೆ ಇಂಥ ಘನತರವಾದ ಯೋಗ್ಯತೆಯು ಅನ್ಯರಲ್ಲಿ ಹ್ಯಾಗೆ ಬರಬೇಕು? ಕೇವಲ ದ್ರವ್ಯಕ್ಕೆ, ರೂಪಕ್ಕೆ, ವಿದ್ಯೆಗೆ, ಆಡಂಬರಕ್ಕೆ ಮರುಳಾಗಿ ಲಗ್ನವಾಗುವದು ಸಾಮಾನ್ಯವಧುಗಳ ಮಾತಾಯಿತು; ಆದರೆ ತಮ್ಮಂಥವರ ಮಗಳು ಯಾಜ್ಞವಲ್ಕ್ಯರಂಥ ಬ್ರಹ್ಮನಿಷ್ಠರನ್ನು ವರಿಸಲಿಚ್ಛಿಸುವದು ಸಂತೋಷದ ಸಂಗತಿಯೇ ಸರಿ! ಯಾಜ್ಞವಲ್ಕ್ಯರಿಗಾದರೂ ನಿಮ್ಮ ಮಗಳನ್ನು ಲಗ್ನವಾಗುವದು ಬಹುಮಾನದ ಲಕ್ಷಣವೇ ಆಗಿರುವದು! ಮೈತ್ರೇಯಿಯಂಥ ತಮಗೆ ಅನುರೂಪವಾದ ವಧುವು, ಹುಡುಕುತ್ತ ಹೋದರೂ ಯಾಜ್ಞವಲ್ಕ್ಯರಿಗೆ ದೊರಕಲಿಕ್ಕಿಲ್ಲ. ಆದ್ದರಿಂದ ಯಾಜ್ಞವಲ್ಕ್ಯರೂ ಸಂತೋಷದಿಂದ ಮೈತ್ರೇಯಿಯ ಪಾಣಿಗ್ರಹಣ ಮಾಡಬಹುದು; ಅಂದಬಳಿಕ ತಾವು ಚಿಂತಿಸುವದೇಕೆ?" ಎಂದು ಪ್ರಶ್ನಮಾಡಿದನು. ಅದಕ್ಕೆ ಮಿತ್ರನು—"ವತ್ಸಾ, ಯಾಜ್ಞವಲ್ಕ್ಯರ ಸಂಸಾರಸುಖದ ಕಲ್ಪನೆಯು ನಿನಗೆ ಇರುವದಿಲ್ಲಾದ್ದರಿಂದ, ಅವರು ಸಹಜವಾಗಿ ನನ್ನ ಮಗಳನ್ನು ಲಗ್ನವಾಗಬಹುದೆಂದು ನೀನು ತಿಳಿಯುತ್ತೀ; ಆದರೆ ಹಾಗೆ ತಿಳಿಯುವದು ಸರ್ವಥಾ ಯೋಗ್ಯವಲ್ಲ. ಯಾಜ್ಞವಲ್ಕ್ಯರ ಲಗ್ನವಾಗಿರುವದೆಂಬದಿಷ್ಟೇ ನಿನಗೆ ಗೊತ್ತಿರಬಹುದು. ನನ್ನ ಪ್ರಿಯಮಿತ್ರನಾದ ಕಾತ್ಯನೆಂಬವನ ಮಗಳಾದ ಕಾತ್ಯಾಯನಿಯೊಡನೆ ಅವರ ಲಗ್ನವಾಗಿರುವದು. ಆ ತರುಣಿಯು ಬಹುತರ ಎಲ್ಲಬಗೆಯಿಂದಲೂ ಯಾಜ್ಞವಲ್ಕ್ಯರಿಗೆ ಒಪ್ಪುವಂಥ ಹೆಂಡತಿಯಾಗಿರುತ್ತಾಳೆ. ಆಕೆಯು ಅತ್ಯಂತ ಸುಂದರಿಯು, ಗೃಹಕೃತ್ಯದಲ್ಲಿ ದಕ್ಷಳು, ಸೌಮ್ಯಸ್ವಭಾವದವಳು. ಮಧುರಭಾಷಣವು ಆಕೆಯ ಹುಟ್ಟುಗುಣವಾಗಿರುವದು. ಒಮ್ಮೆ ಕಾತ್ಯಾಯನಿಯನ್ನು ನೋಡಿದವರ ಮನಸ್ಸಿನಲ್ಲಿ ಆ ಸದ್ಗುಣಮಂಡಿತವಾದ ಪ್ರೇಮಲಮೂರ್ತಿಯು ಸ್ಥಿರಗೊಳ್ಳುವದು. ನಾನು ಯಾಜ್ಞವಲ್ಕ್ಯರ ಮನೆಗೆ ಹೋದಾಗೆಲ್ಲ ಆ ಪತಿಭಕ್ತಿಪರಾಯಣಳು, ಪ್ರೇಮಪುರಸ್ಸರವಾದ ಮೃದುಹಾಸದಿಂದ ನನ್ನ ಸ್ವಾಗತಮಾಡುವಳು. ನನ್ನ ವಿಷಯವಾಗಿ ಆಕೆಯ ಅಂತಃಕರಣದಲ್ಲಿ ಅತ್ಯಂತ ಆದರಭಾವವು ವಾಸಿಸುತ್ತಿರುವದರಿಂದ, ನನ್ನನ್ನು ನೋಡಿದಕೂಡಲೆ ಆಕೆಯ ನಗೆಮೊಗದಲ್ಲಿ

ಅತ್ಯಂತ ವಿನಯಭಾವವು ವ್ಯಕ್ತವಾಗುತ್ತದೆ. ಆಕಾಲವ- ಆ ದಿವ್ಯಮೂರ್ತಿಯನ್ನು ನೋಡಿದಕೂಡಲೆ, ಸಾಕ್ಷಾತ್ ದೇವತೆಯೇ ಭೂತಳದಲ್ಲಿ ಅವತರಿಸಿರುವಂತೆ ನನಗೆ ಭಾಸವಾಗುತ್ತದೆ. ಇಂಥ ಸದ್ಗುಣಸಂಪನ್ನಳಾದ ಹೆಂಡತಿಯ ಮೇಲೆ ಯಾಜ್ಞವಲ್ಕ್ಯರ ಅಕೃತ್ರಿಮಪ್ರೇಮವು ಎಷ್ಟಿರುತ್ತದೆಂಬದನ್ನು ನಾನು ಬಲ್ಲೆನು; ಆದ್ದರಿಂದ ಒಂದು ಪಕ್ಷದಲ್ಲಿ ಯಾಜ್ಞವಲ್ಕ್ಯರು ನಮ್ಮ ಮೈತ್ರೇಯಿಯನ್ನು ಲಗ್ನವಾಗಲಿಚ್ಛಿಸಿದರೂ, ಅವರ ಸುಂದರಸಂಸಾರದಲ್ಲಿ ಮಣ್ಣುಗೂಡಿಸುವ ಎರಡನೆಯ ಲಗ್ನದ ಯೋಗವನ್ನು ನಾನು ಎಂದಿಗೂ ತರಲಿಚ್ಛಿಸುವದಿಲ್ಲ. ಅದರಲ್ಲಿ ನನ್ನ ಮಗಳು ತರುಣಿಯೂ, ಅನನುಭವಿಯೂ ಇರುವದರಿಂದ, ಆಕೆಯು ಅವರೊಡನೆ ಯಾವಾಗಲೂ ವಿವೇಕದಿಂದ ನಡೆದುಕೊಳ್ಳುವಳೆಂಬ ನಿಯಮವೂ ಇಲ್ಲ! ಅಂದಬಳಿಕ ಯಾಜ್ಞವಲ್ಕ್ಯರಿಗೆ ಇಲ್ಲದ ತೊಂದರೆಯನ್ನು ನಾನು ಯಾಕೆ ಉಂಟುಮಾಡಲಿ ?

ಮಿತ್ರನ ಈ ಮಾತುಗಳನ್ನು ಕೇಳಿ ಯಜ್ಞದತ್ತನಿಗೆ ಸ್ವಲ್ಪ ಸಂಶಯ ಉಂಟಾಯಿತು. ಆತನು ಮತ್ತೆ ಮಿತ್ರನನ್ನು ಕುರಿತು—"ಮುನಿಶ್ರೇಷ್ಠಾ, ಭಗವತೀಕಾತ್ಯಾಯನಿಯು ಪ್ರತ್ಯಕ್ಷ ದೇವತೆಯು ಅವತರಿಸಿದಂತೆ ಇರುವಳೆಂದು ನೀವು ಹೇಳುತ್ತಿರುವಾಗ, ಆಕೆಯು ಬಹುತರ ಯಾಜ್ಞವಲ್ಕ್ಯರಿಗೆ ಒಪ್ಪುವಂಥ ಹೆಂಡತಿಯಾಗಿರುವಳೆಂದು ಹೇಳಿದ್ದರಿಂದ ನನಗೆ ಸಂಶಯ ಉಂಟಾಯಿತು. "ಬಹುತರ"ಎಂಬ ಶಬ್ದಪ್ರಯೋಗದಿಂದ ಕಾತ್ಯಾಯನಿಯಲ್ಲಿ ಏನೋ ಕೊರತೆಯಿದ್ದಂತೆ ತೋರುತ್ತದೆ; ಆದರೆ ಆ ಕೊರತೆಯು ಯಾವದು ?" ಎಂದು ಕೇಳಲು, ಮಿತ್ರನು —"ವತ್ಸಾ, ಕಾತ್ಯಾಯನಿಯ ಒಲವು ಆಧ್ಯಾತ್ಮವಿಷಯದ ಕಡೆಗೆ ವಿಶೇಷವಾಗಿ ಇಲ್ಲೆಂಬದೇ ಆ ಕೊರತೆಯು. ಆ ಕೊರತೆಯು ಕೇವಲ ಯಾಜ್ಞವಲ್ಕ್ಯರ ದೃಷ್ಟಿಯಿಂದಲ್ಲದೆ, ಅನ್ಯರ ದೃಷ್ಟಿಯಿಂದ ಅಲ್ಲ. ಕಾತ್ಯಾಯನಿಯು ಪತಿಸೇವೆ, ಮಕ್ಕಳಆರೈಕೆ, ಬೇರೆ ಗೃಹಕೃತ್ಯಗಳು ಇವುಗಳಲ್ಲಿ ಯಾವಾಗಲೂ ತೊಡಗಿಹೋಗಿರುವದರಿಂದ, ಆಧ್ಯಾತ್ಮವಿಚಾರಕ್ಕೆ ಆಕೆಗೆ ಅವಸರವೇ ದೊರೆಯುವದಿಲ್ಲ. ಆಧ್ಯಾತ್ಮದೃಷ್ಟಿಯಿಂದ ಇದು ಕೆಲಮಟ್ಟಿಗೆ ಅನಿಷ್ಟವಾಗಿ ತೋರಿದರೂ, ಸುಂದರ ಸಂಸಾರದೃಷ್ಟಿಯಿಂದ ಇದು ಅತ್ಯಂತ ಇಷ್ಟವಾಗಿರುವದು,"ಅನ್ನಲು ವಿಷ್ಣುಮಿತ್ರನು—"ಭಗವನ್, ನೀವು ಏನು ಹೇಳಿದರೂ, ಯಾಜ್ಞವಲ್ಕ್ಯರು ನಿಮ್ಮ ಮಗಳೊಡನೆ ಲಗ್ನವಾಗುವದಕ್ಕೆ ಈ ಕೊರತೆಯು ಆಸ್ಪದಕೊಡುತ್ತದೆಂದು ನಾನು ಹೇಳದೆ ಇರಲಾರೆನು; ಆದರೆ ಈ ಕೊರತೆಯನ್ನು ಪೂರ್ಣಮಾಡಿಕೊಳ್ಳುವದು ಬಿಡುವದು ಯಾಜ್ಞವಲ್ಕ್ಯರ ಕಡೆಗಿರುವದೆಂಬದು ನಿಜವು. ತಮ್ಮಂಥವರು ಅದಕ್ಕಾಗಿ ಪ್ರಯತ್ನಮಾಡುವದು, ಸ್ವಾರ್ಥವೆಂಬ ದೃಷ್ಟಿಯಿಂದ ಗೌಣವಾದದ್ದೇಸರಿ. ತಮ್ಮಂಥವರು ಅದಕ್ಕೆ ಮನಸ್ಸು ಮಾಡಲಾರಿರಿ,"ಎಂದು ನುಡಿಯುತ್ತಿರಲು, ಮಿತ್ರನ ಲಕ್ಷ್ಯವು ಆ ಅರಣ್ಯದೊಳಗಿನದೊಂದು ದಿನ್ನೆಯ ಕಡೆಗೆ ಹೋಯಿತು. ಆತನು ಒಮ್ಮಿಂದೊಮ್ಮೆ ನಿಂತು ಆ ದಿನ್ನೆಯಕಡೆಗೆ ನೋಡಹತ್ತಿದನು. ಆತನ ದೃಷ್ಟಿಯು ಭಯಗ್ರಸ್ತವಾಯಿತು. ಆ ಮೂವರು ದಟ್ಟವಾದ ಅರಣ್ಯದಲ್ಲಿ ಸಾಗಿದ್ದು, ಅವರು ಕ್ರಮಿಸುತ್ತಿದ್ದ ಕಾಲದಾರಿಯು ಬಲು ಕಿರಿದಾಗಿತ್ತು. ಮಾರ್ಗದ ಎಡ-ಬಲದಲ್ಲಿ ಗಗನಚುಂಬಿತ

ವೃಕ್ಷಗಳ ದಟ್ಟಣೆಯಿತ್ತು. ಮಿತ್ರನಿಗೆ ಆ ದಿನ್ನೆಯ ಮೇಲೆ, ಗಿಡಗಳಲ್ಲಿ ಮುಚ್ಚಿದಂತೆ ಆಗಿದ್ದ ಒಂದು ಮನುಷ್ಯಾಕೃತಿಯು ಕಾಣಿಸಿತು. ಮುಂದಕ್ಕೆ ಸ್ವಲ್ಪ ಸಾಗಿಹೋಗಲು, ಯಾವನೋ ಒಬ್ಬ ತಪೋನಿಷ್ಠ ಮುನಿಯು ಧ್ಯಾನಸ್ಥನಾಗಿ ಕುಳಿತಿದ್ದು, ಒಂದು ಭಯಂಕರವಾದ ಹುಲಿಯು ಅವನ ಮೇಲೆ ಬೀಳುವದಕ್ಕೆ ಜಪ್ಪು ಹಾಕಿತ್ತು. ಇವನ್ನು ನೋಡಿ ಮಿತ್ರನು ಮುಂದಕ್ಕೆ ಸಾಗುತ್ತಿರಲು, ಆ ತಪೋನಿಷ್ಠನು ಯಾಜ್ಞವಲ್ಕ್ಯರೇ ಎಂಬದು ಆತನಿಗೆ ಗೊತ್ತಾಯಿತು. ಈಶ್ವರಧ್ಯಾನಾಸಕ್ತರಾದ ಯಾಜ್ಞವಲ್ಕ್ಯರಿಗೆ ಹುಲಿಯ ಸುದ್ದಿಯು ಹ್ಯಾಗೆ ಗೊತ್ತಾಗಬೇಕು? ಯಾಜ್ಞವಲ್ಕ್ಯರಮೇಲೆ ಒದಗಿದ ಸಂಕಟವನ್ನು ಮಿತ್ರನು ತನ್ನ ಕ್ಷತ್ರಿಯ ವೀರರಿಗೆ ತಿಳಿಸಲು, ಕೂಡಲೆ ಅವರು ಬಾಣಗಳನ್ನು ಗುರಿಯಿಟ್ಟು ಹುಲಿಯಮೇಲೆ ಬಿಟ್ಟರು. ಆಗ ಆ ಎರಡು ಬಾಣಗಳು ಹುಲಿಯ ಒಂದೊಂದು ಕಣ್ಣುಗಳಲ್ಲಿ ಸೇರಿ, ಅದರ ಹೃದಯವನ್ನು ಪ್ರವೇಶಿಸಿದವು. ಅಷ್ಟರಲ್ಲಿ ಮತ್ತೆ ಆ ಕ್ಷತ್ರಿಯ ವೀರರ ಕೆಲವು ಬಾಣಗಳು ಹುಲಿಯ ಹೃದಯವನ್ನು ಭೇದಿಸಲು, ಹುಲಿಯು ನೆಲಕ್ಕುರುಳಿತು. ಅದು ಪ್ರಾಣಸಂಕಟದಿಂದ ಭಯಂಕರವಾಗಿ ಗರ್ಜಿಸುವಾಗ ಧ್ಯಾನಸ್ಥರಾದ ಯಾಜ್ಞವಲ್ಕ್ಯರು ಎಚ್ಚತ್ತರು. ಅಷ್ಟರಲ್ಲಿ ಮಿತ್ರನೂ, ಯಜ್ಞದತ್ತ-ವಿಷ್ಣುಮಿತ್ರರೂ ಧಾವಿಸಿ ಅಲ್ಲಿಗೆ ಹೋಗಿದ್ದರು. ಯಾಜ್ಞವಲ್ಕ್ಯರು ಕಣ್ದೆರೆದು ನೋಡಲು, ಒದಗಿದ ಪ್ರಸಂಗವು ಅವರ ಕಣ್ಣಿಗೆ ಬಿದ್ದಿತು. ಆಗ ಯಾಜ್ಞವಲ್ಕ್ಯರು ಕೃತಜ್ಞತೆಯಿಂದ ಮಿತ್ರನ ಚರಣಸ್ಪರ್ಶಮಾಡಿ, ಕ್ಷತ್ರಿಯವೀರರನ್ನು ಪ್ರೇಮದಿಂದ ಆಲಿಂಗಿಸಿದರು. ಆಕಸ್ಮಿಕ ಪ್ರಸಂಗದಿಂದ ತಮಗೊದಗಿದ ಸಂಕಟದ ನಿವಾರಣವಾಯಿತೆಂದು ಯಾಜ್ಞವಲ್ಕ್ಯರು ಕೃತಜ್ಞತೆಯಿಂದ ಶತಶಃ ಆ ಮೂವರ ಅಭಿನಂದನಮಾಡಿದರು.

ಮೇಲೆ ಹೇಳಿದಂತೆ ಮಿತ್ರನು ಯಾಜ್ಞವಲ್ಕ್ಯರ ಪ್ರಾಣರಕ್ಷಣಮಾಡಿದರೂ, ತಾನು ಮಾಡಿದ ಉಪಕೃತಿಯ ಭಾರವನ್ನು ಆತನು ಯಾಜ್ಞವಲ್ಕ್ಯರಮೇಲೆ ಸರ್ವಥಾ ಹೊರಿಸಲಿಲ್ಲ. ನನ್ನಿಂದ ನಿಮ್ಮ ಪ್ರಾಣರಕ್ಷಣವಾಗಿರುವದರಿಂದ, ನನ್ನ ಮಗಳ ಪಾಣಿಗ್ರಹಣಮಾಡಬೇಕೆಂದು ಹೇಳುವ ವಿಚಾರವು ಸಹ ಆ ಮುನಿಯ ಮನಸ್ಸಿನಲ್ಲಿ ಹೊಳೆಯಲಿಲ್ಲ. ಆ ಕಾಲದ ಆರ್ಯಾವರ್ತದ ಸಾಮಾಜಿಕ ಪದ್ಧತಿಯಂತೆ, ಮೊದಲಲಗ್ನವಾದ ಮನುಷ್ಯನಿಗೂ ಸುಸ್ವರೂಪಿಯೂ, ಸದ್ಗುಣಸಂಪನ್ನಳೂ ಆದ ಹುಡುಗೆಯನ್ನು ಕೊಡುವದು ಅಯೋಗ್ಯವೆಂದು ತಿಳಿಯಲ್ಪಡುತ್ತಿದ್ದಿಲ್ಲ. ಇಂಥ ಸದ್ಗುಣ ಸಂಪನ್ನಳಾದ ಸುಂದರಕನ್ಯೆಯ ಪ್ರಾಪ್ತಿಯಾಗುವದು ಬಹುಮಾನದ ಲಕ್ಷಣವೆಂದು ಆಗಿನ ಜನರು ತಿಳಿಯುತ್ತಿದ್ದರು; ಆದರೆ ಇದುಸಮಾಜದೊಳಗಿನ ಸರ್ವಸಾಧಾರಣ ಜನರಮಾತಾಯಿತು; ಆದರೆಯಾಜ್ಞವಲ್ಕ್ಯರೂ, ಮಿತ್ರನೂ ಸಾಮಾನ್ಯಜನರೊಳಗಿನವರಲ್ಲವೆಂಬದನ್ನು ನಾವು ವಾಚಕರಿಗೆ ಬರೆದು ತಿಳಿಸಲವಶ್ಯವಿಲ್ಲ; ಆದ್ದರಿಂದ, ಲೋಕವಂದ್ಯರಾದ ಯಾಜ್ಞವಲ್ಕ್ಯರೊಡನೆ ಮೈತ್ರೇಯಿಯ ದ್ವಿತೀಯ ಸಂಬಂಧವಾಗುವದು ಶಕ್ಯವಾಗಿದ್ದಿಲ್ಲ. ಮೇಲೆ ಹೇಳಿದಂತೆ ಯಾಜ್ಞವಲ್ಕ್ಯರ ಪ್ರಾಣರಕ್ಷಣದ ಯೋಗವು ಒದಗಿದ್ದರಿಂದ ಮಿತ್ರನೊಡನೆ

ಯಾಜ್ಞವಲ್ಕ್ಯರ ಸ್ನೇಹದ ಅಭಿವೃದ್ಧಿಯಾಗಿ, ಅವರಿಬ್ಬರ ಮನೆಯೊಳಗಿನ ಹೆಣ್ಣು ಮಕ್ಕಳ ಪರಸ್ಪರ ಸ್ನೇಹವೂ ಹೆಚ್ಚಿತು. ಒಬ್ಬರು ಮತ್ತೊಬ್ಬರ ಮನೆಗೆ ಮೇಲೆ ಮೇಲೆ ಬರಹತ್ತಿದರು, ಹೋಗಹತ್ತಿದರು. ಕಾತ್ಯಾಯನೀ-ಮೈತ್ರೇಯಿಯರ ಪ್ರೇಮವು ದಿನದಿನಕ್ಕೆ ಹೆಚ್ಚುತ್ತ ಹೋಯಿತು. ಕಾತ್ಯಾಯನಿಯು ಮೈತ್ರೇಯಿಗಿಂತ ಎರಡೇ ವರ್ಷಕ್ಕೆ ಹಿರಿಯಳಿದ್ದದ್ದರಿಂದ, ಅವರಿಬ್ಬರು ಸಾಧಾರಣ ಓರಿಗೆಯವರಾಗಿದ್ದರೆಂದು ಹೇಳಬಹುದು. ಕಾತ್ಯಾಯನಿಯಂತೆ ಮೈತ್ರೇಯಿಯೂ ಲಾವಣ್ಯವತಿಯಾಗಿದ್ದಳು. ಇಷ್ಟರಮಟ್ಟಿಗೆ ಅವರಲ್ಲಿ ಸಾಮ್ಯವಿದ್ದು, ಅವರಲ್ಲಿಯ ಗುಣಗಳು ತೀರ ವಿರುದ್ಧವಾಗಿದ್ದವು. ವಿರುದ್ಧ ಗುಣಗಳೆಂದರೆ, ಒಬ್ಬರಲ್ಲಿಯವು ಸದ್ಗುಣಗಳು, ಇನ್ನೊಬ್ಬರಲ್ಲಿಯವು ದುರ್ಗುಣಗಳು, ಎಂಬರ್ಥವಲ್ಲ. ಇಬ್ಬರೂ ಸದ್ಗುಣಿಗಳೇ ಆಗಿದ್ದರು. ಕಾತ್ಯಾಯನಿಯಲ್ಲಿಯ ಸದ್ಗುಣಗಳು ಸಾಂಸಾರಿಕವಾಗಿದ್ದವು, ಮೈತ್ರೇಯಿಯಲ್ಲಿಯವು ಆಧ್ಯಾತ್ಮಿಕವಾಗಿದ್ದವು. ಒಬ್ಬರ ಗುಣಗಳು ಮತ್ತೊಬ್ಬರಿಗೆ ಮಹತ್ವದವಾಗಿ ತೋರಿ, ಅವು ತನ್ನಲ್ಲಿರದೆ ಈಕೆಯಲ್ಲಿರುತ್ತವೆಂದು ತಿಳಿದು ಅವರು ಒಬ್ಬರನ್ನೊಬ್ಬರು ಆದರಿಸುತ್ತಿದ್ದರು, ಪ್ರೀತಿಸುತ್ತಿದ್ದರು. ಪರಸ್ಪರ ದರ್ಶನದಿಂದ ಅವರಿಗೆ ಆನಂದವಾಗುತ್ತಿತ್ತು, ವಿಯೋಗದಿಂದ ದುಃಖವಾಗುತ್ತಿತ್ತು. ಕಾತಾ ಯನಿಯ ಅಂತಃಕರಣವು ಅತ್ಯಂತ ಕೋಮಲವಿದ್ದದ್ದರಿಂದ, ಯಾವದೊಂದು ಸಂಗತಿಯ ಪರಿಣಾಮವು ಆಕೆಯ ಮನಸ್ಸಿನ ಮೇಲೆ ಬಹುಬೇಗ ಆಗುತ್ತಿತ್ತು. ತನಗೆ ಅನುಕೂಲವಾಗಿ ತೋರುವ ವಸ್ತುಗಳ ಮೇಲೆ ಆಕೆಯ ಪ್ರೇಮವು ತಟ್ಟನೆ ಕುಳಿತುಕೊಳ್ಳುತ್ತಿತ್ತು; ಅವುಗಳ ಗುಣದೋಷಗಳ ವಿವೇಚನದ ಕಡೆಗೆ ಆಕೆಯ ಮನಸ್ಸು ಹರಿಯುತ್ತಿದ್ದಿಲ್ಲ. ಆಕೆಯ ಸೇರಿಕೆಯ ವಸ್ತುವು ಆಕೆಯ ಎದುರಿಗೆ ಬಂದರಾಯಿತು, ಕೂಡಲೆ ಲೋಹಚುಂಬಕದಂತೆ ಆಕೆಯ ಮನಸ್ಸು ಅತ್ತಕಡೆಗೆ ಹರಿದುಹೋಗುತ್ತಿತ್ತು. ಆಕೆಯ ಮನೋವಿಕಾರಗಳು ಅತ್ಯಂತ ತೀವ್ರವಾಗಿದ್ದವು. ತನಗೆ ಅನುಕೂಲ ಸಂಗತಿಗಳ ಯೋಗವಾದ ಕೂಡಲೆ ಆಕೆಯಮುಖವು ಪ್ರಫುಲ್ಲಿತವಾಗಿ, ಅದರಲ್ಲಿ ಮುಗುಳುನಗೆಯು ಮಿನುಗುತ್ತಿತ್ತು. ಇದಕ್ಕೆ ವಿರುದ್ಧವಾಗಿ, ಆಕೆಗೆ ಸೇರದಸಂಗತಿಯ ಯೋಗವಾದ ಕೂಡಲೆ ಆಕೆಯ ಚಿತ್ತವು ಕ್ಷೋಭಿಸುತ್ತಿತ್ತು. ದುಃಖದ ಪ್ರಸಂಗವನ್ನು ಕಣ್ಣು ಮುಟ್ಟಿ ನೋಡುವದಂತು ಇರಲಿ, ಕಿವಿಯಿಂದ ಕೇಳಿದರೆ ಸಾಕು, ಆಕೆಯ ಕಣ್ಣುಗಳಲ್ಲಿ ನೀರು ಬರುತ್ತಿದ್ದವು. ಆಕೆಯ ಮನಸ್ಸು ಗಂಭೀರವಾದದ್ದಲ್ಲ. ಆಕೆಯು ವಿಲಾಸದಲ್ಲಿಯೂ, ಕಥೆ ಕೇಳುವಲ್ಲಿಯೂ ತಾಸಿಗೆ ತಾಸು ಕಳೆಯುತ್ತಿದ್ದಳು. ಆಕೆಯ ಪತಿಯು ಅಂಥ ವಿದ್ವಾಂಸನಿದ್ದರೂ, ಆತನಸಂಗಡ ಪಾರಮಾರ್ಥಿಕ ವಿಷಯದ ಭಾಷಣ ಮಾಡಲಿಕ್ಕೆ ಆಕೆಯ ಮನಸ್ಸು ಇಚ್ಛಿಸುತಿದ್ದಿಲ್ಲ; ಹೀಗಿದ್ದರೂ ತನ್ನ ಸಂಸಾರಕೃತ್ಯಗಳಲ್ಲಿ ಆಕೆಯು ಅತ್ಯಂತ ಜಾಗರೂಕಳಾಗಿದ್ದಳು. ಆಕೆಯ ಪತಿಭಕ್ತಿಯು ಶ್ಲಾಘನೀಯವಾಗಿತು. ತನ್ನ ಮಕ್ಕಳ ಮೇಲಿನ ಆಕೆಯ ಅಕ್ಕರೆಯು ವಿಲಕ್ಷಣವಾಗಿತ್ತು. ತನ್ನ ಮಕ್ಕಳು ತನಗೆ ಅಲಂಕಾರವೆಂದು ಆಕೆಯು ತಿಳಿಯುತ್ತಿದ್ದಳು. ಮಕ್ಕಳ ಸಂಗೋಪನದಲ್ಲಿ ಸರ್ವಥಾ ದುರ್ಲಕ್ಷ ಮಾಡುತ್ತಿದ್ದಿಲ್ಲ. ಪತಿಗೆ ಸುಖವನ್ನುಂಟು

ಪೂತುವಲ್ಲಿ, ಮಕ್ಕಳ ಆರೈಕೆಯಲ್ಲಿ ಆಕೆಯ ಕಾಲಹರಣವಾಗುತ್ತಿತ್ತು. ಆಕೆಯು ಮನೆಯೊಂದರ ಸ್ವಚ್ಛತೆ, ಓರಣ, ಅಚ್ಚುಕಟ್ಟುತನಗಳ ಪ್ರತ್ಯಕ್ಷಮಾದರಿಯಾಗಿತ್ತೆಂದು ಹೇಳಬಹುದು. ಇದೇ ಸಂಸಾರಸುಖದ ಮೂಲಸೂತ್ರ!

ಮೈತ್ರೇಯಿಯ ಸ್ವಭಾವ ಎಷ್ಟೋ ಸಂಗತಿಗಳಲ್ಲಿ ಕಾತ್ಯಾಯನಿಯ ಸ್ವಭಾವಕ್ಕೆ ತೀರ ವಿರುದ್ಧವಾಗಿತ್ತು. ಮೈತ್ರೇಯಿಯ ಅಂತಃಕರಣದಲ್ಲಿ ಪ್ರೇಮಕ್ಕೆ ಆಸ್ಪದವಿದ್ದಿಲ್ಲವೆಂತಲ್ಲ; ಆದರೆ ಆಕೆಯ ಪ್ರೇಮಕ್ಕೆ ಜ್ಞಾನದ ಮರ್ಯಾದೆಯಿದ್ದದ್ದರಿಂದ, ಕಾತ್ಯಾಯನಿಯ ಪ್ರೇಮದಂತೆ ಅದು ಯಾವ ವಸ್ತುವಿನ ಮೇಲೆಯೂ ತಟ್ಟನೆ ಕುಳಿತುಕೊಳ್ಳುತ್ತಿದ್ದಿಲ್ಲ. ಯಾವದೊಂದು ಸಂಗತಿಯ ನಿಜವಾದ ಸ್ವರೂಪಜ್ಞಾನವಾದಹೊರತು ಅದು ಮೈತ್ರೇಯಿಯ ಪ್ರೇಮಕ್ಕೆ ಪಾತ್ರವಾಗುತ್ತಿದ್ದಿಲ್ಲ. ಆಕೆಯ ಮನೋವಿಕಾರಗಳಿಗೆ ವಿವೇಕದ ಪ್ರತಿಬಂಧವಿದ್ದದ್ದರಿಂದ, ಸುಖ ದುಃಖಗಳ, ಅಥವಾ ಶತ್ರುತ್ವ-ಮಿತ್ರತ್ವಗಳ ಪರಿಣಾಮವು ಆಕೆಯ ಮನಸ್ಸಿನ ಮೇಲೆ ತಟ್ಟನೆ ಆಗುತ್ತಿದ್ದಿಲ್ಲ. ಪ್ರೌಢರಲ್ಲಿಯ ಗಾಂಭೀರ್ಯ, ಪೊದ್ದಸ್ತಿಕೆ, ಸಮಾಧಾನ ಇವು ಮೈತ್ರೇಯಿಯ ಮುಖದಲ್ಲಿ ಈಗಿನಿಂದಲೇ ಮಿನುಗುತ್ತಿದ್ದವು. ಸ್ತ್ರೀಯರ ಮನೋರಂಜನದ ಸ್ವಾಭಾವಿಕ ಸಾಧನಗಳಾದ ವಿಲಾಸ, ಕಥಾಶ್ರವಣ ಇವುಗಳಲ್ಲಿ ಮೈತ್ರೇಯಿಯ ಮನಸ್ಸು ಬಹಳಹೊತ್ತು ತೊಡಗಿರುತ್ತಿದ್ದಿಲ್ಲ. ಆಕೆಯ ಕಣ್ಣುಗಳು ಪರಮಾತ್ಮನ ಸ್ವರೂಪವನ್ನು ನೋಡುವ ವಿಷಯದಲ್ಲಿಯೂ, ಕಿವಿಗಳು ಪರಮಾತ್ಮನ ಗುಣಾನುವಾದಗಳನ್ನು ಕೇಳುವ ವಿಷಯದಲ್ಲಿಯೂ ತತ್ಪರವಾಗಿದ್ದದರಿಂದ, ಈ ಜಗತ್ತಿನ ಅಶಾಶ್ವತಸ್ಥಿತಿಯ ಕಡೆಗೂ, ಸೌಂದರ್ಯದ ಕಡೆಗೂ ಆಕೆಯ ಮನಸ್ಸು ಹರಿಯುತ್ತಿದ್ದಿಲ್ಲ. ವಿಷಯೋಪಭೋಗದ ವಿಷಯದಲ್ಲಿ ಆಕೆಯು ಅತ್ಯಂತ ಉದಾಸೀನಳಾಗಿದ್ದಳು. ಅಧ್ಯಾತ್ಮವಿಷಯದ ಗಂಭೀರ ವಿಚಾರಮಾಡುವಲ್ಲಿಯೇ ಆಕೆಯು ಕಾಲಹರಣ ಗೈಯುತ್ತಿದ್ದರೂ, ಸಾಂಸಾರಿಕ ಕೃತ್ಯಗಳಲ್ಲಿ ಆಕೆಯು ಉದಾಸೀನಳಾಗಿದ್ದಿಲ್ಲ. ತಂದೆಯ ಮನೆಯಲ್ಲಿ ಮಾಡದಿದ್ದರೆ ನಡೆಯದಿರುವ ಸಂಸಾರಕೃತ್ಯಗಳನ್ನು ಔದಾಸೀನ್ಯದಿಂದ ನಿರ್ವಾಹವಿಲ್ಲದೆ ಮಾಡುತ್ತಿದ್ದಳು. ಆಕೆಯ ಕೆಲಸದಲ್ಲಿ ವ್ಯವಸ್ಥೆ, ಅಚ್ಚುಕಟ್ಟುತನ, ಓರಣ ಇವು ತೋರುವದರ ಬದಲು, ಹ್ಯಾಗಾದರೂ ಕೆಲಸವಾಯಿತೆಂಬುದರ ಲಕ್ಷಣಗಳು ತೋರುತ್ತಿದ್ದವು. ತಿರುಗಿ ಕೇಳಿದರೆ, ಇಷ್ಟು ಸಹ ಸಂಸಾರದ ಕಡೆಗೆ ಲಕ್ಷಕೊಡುವದು ಆಕೆಗೆ ಸೇರುತ್ತಿದ್ದಿಲ್ಲ. ಆಧ್ಯಾತ್ಮಿಕ ವಿಚಾರಕ್ಕೆ ತಕ್ಕ ಗುರುವೆಂಬ ವ್ಯಕ್ತಿಯೆಂದಲೇ ಆಕೆಯು ಯಾಜ್ಞವಲ್ಕ್ಯರ ಪಾಣಿಗ್ರಹಣ ಮಾಡಲು ಇಚ್ಛಿಸುತ್ತಿದ್ದಳು. ಈ ಯೋಗವು ಒದಗಿಬಾರದಿದ್ದರೆ ಆಜನ್ಮ ಬ್ರಹ್ಮಚರ್ಯದಿಂದಿರಬೇಕೆಂದು ಆಕೆಯು ಸಂಕಲ್ಪಿಸಿದ್ದಳು. ಆಕೆಯಲ್ಲಿ ಸೌಜನ್ಯಕ್ಕೂ, ವಿವೇಕಕ್ಕೂ ಕೊರತೆಯಿದ್ದಿಲ್ಲ. ತನ್ನನ್ನು ಯಾಜ್ಞವಲ್ಕ್ಯರು ಲಗ್ನವಾಗುವದರಿಂದ ಕಾತ್ಯಾಯನಿಯ ಸುಖಕ್ಕೆ ಕೊರತೆಯಾಗುವದೆಂತಲೂ, ಈ ಸಂಗತಿಯು ಕಾತ್ಯಾಯನಿಯ ಮನಸ್ಸನ್ನು ನೋಯಿಸತಕ್ಕದ್ದೆಂತಲೂ ಆಕೆಯು ತಿಳಿದಿದ್ದಳು. ಆಕೆಯು ಮಾತ್ಸರ್ಯರಹಿತಳಿದ್ದಳು. ಸ್ವಾರ್ಥದ ಗಂಧವುಕೂಡ ಆಕೆಯಲ್ಲಿ ಸುಳಿಯುತ್ತಿದ್ದಿಲ್ಲ; ಅಂದಬ

ಳಿಕ ಕಾತ್ಯಾಯನಿಯು ಮನಸ್ಸನ್ನು ನೋಯಿಸಿ ಯಾಜ್ಞವಲ್ಕ್ಯರ ಪಾಣಿಗ್ರಹಣದಿಂದ ತನ್ನ ಹಿತವನ್ನು ಸಾಧಿಸಿಕೊಳ್ಳಲಿಕ್ಕೆ ಆಕೆಯು ಹ್ಯಾಗೆ ಇಚ್ಛಿಸುವಳು ? ಕಾತ್ಯಾಯನಿಯ ಸುಕುಮಾರಗುಣಗಳಿಗೆ ಮೈತ್ರೇಯಿಯು ಲುಬ್ಧಳಾಗಿರುವಂತೆ, ಮೈತ್ರೇಯಿಯ ಗಂಭೀರಗುಣಗಳಿಗೆ ಕಾತ್ಯಾಯನಿಯೂ ಲುಬ್ಧಳಾಗಿದ್ದದ್ದರಿಂದ ಅವರು ಒಬ್ಬರನ್ನೊಬ್ಬರು ಕಂಡರೆ ಬಿದ್ದು ಸಾಯುತ್ತಿದ್ದರು. ತನ್ನ ಪತಿಯ ಪಾಣಿಗ್ರಹಣಕ್ಕಾಗಿ ಕುಳಿತವಳೆಂದು ಕಾತ್ಯಾಯನಿಯಾಗಲಿ, ತನ್ನ ಪಾಣಿಗ್ರಹಣಕ್ಕೆ ಅಡ್ಡಬಂದು ಕುಳಿತವಳೆಂದು ಮೈತ್ರೇಯಿಯಾಗಲಿ ಪರಸ್ಪರರನ್ನು ಮತ್ಸರಿಸುವಹಾಗಿದ್ದಿಲ್ಲ! ಅಯೋಗ್ಯಕಾರ್ಯಕ್ಕೆ ಕೈಹಾಕತಕ್ಕವರಲ್ಲವೆಂಬದನ್ನು ಪರಸ್ಪರರು ಅರಿತುಕೊಂಡಿದ್ದರಾದ್ದರಿಂದ ಒಬ್ಬರ ವಿಷಯವಾಗಿ ಮತ್ತೊಬ್ಬರ ಅಪನಂಬಿಗೆಯು ಹುಟ್ಟುವಹಾಗಿದ್ದಿಲ್ಲ. ಮೈತ್ರೇಯಿಯು ಕಾತ್ಯಾಯನಿಗೆ ಅತ್ಯಂತ ಪ್ರಿಯಳಾಗುತ್ತ ನಡೆದದ್ದರಿಂದ, ಕಾತ್ಯಾಯನಿಯ ಸ್ವಭಾವಕ್ಕನುಸರಿಸಿ ಆಕೆಗೆ ಮೈತ್ರೇಯಿಯ ಹಂಬಲವು ವಿಶೇಷವಾಗಿ ಹತ್ತಿತು. ಆಕೆಯು ಮೈತ್ರೇಯಿಯನ್ನು ಒಂದು ಕ್ಷಣವಾದರೂ ಅಗಲಿ ಇರದಾದಳು! ಮೈತ್ರೇಯಿಯ ವಿಯೋಗದ ಕಲ್ಪನೆಯು ಸಹ ಆಕೆಗೆ ದುಸ್ಸಹದುಃಖವನ್ನು ಕೊಡಹತ್ತಿತು !! ನಿರ್ಮಲಾಂತಃಕರಣದ ಪ್ರಭಾವವನ್ನು ನಾವು ಇದಕ್ಕೂ ಹೆಚ್ಚಿಗೆ ಏನು ವರ್ಣಿಸೋಣ ?

## ೩ ನೆಯ ಪ್ರಕರಣ.

## ಸ್ವಾರ್ಥಪರಿತ್ಯಾಗೇಚ್ಛೆ !

ನಿರ್ಮಲಾಂತಃಕರಣದ ಪ್ರಭಾವವೇ ವಿಲಕ್ಷಣವಾದದ್ದು. ಶುದ್ಧಾಂತಃಕರಣವನು ಶುಭ್ರವಾದ ಗಂಜಿಯ ಅರಿವೆಗೆ ಹೋಲಿಸಬಹುದು. ಗಂಜಿಯ ಅರಿವೆಯ ಮೇಲೆ ಮೂಡಿದ ಬಣ್ಣವು ವ್ಯಕ್ತವಾಗಿ ತೋರುವಂತೆ, ಶುದ್ಧಾಂತಃಕರಣದಲ್ಲಿ ಮೂಡಿದ ವಿಕಾರಗಳು ವ್ಯಕ್ತವಾಗಿ ತೋರುವವು; ಇದಲ್ಲದೆ ಅವು ಅನುಕೂಲ ಪರಿಸ್ಥಿತಿಯಲ್ಲಿ ಉತ್ತರೋತ್ತರ ವೃದ್ಧಿಂಗತವಾಗುತ್ತಲೂ ಹೋಗುವವು. ಅದರಂತೆ, ಕಾತ್ಯಾಯನಿಯ ಶುದ್ಧಾಂತಃಕರಣದಲ್ಲಿ ಮೂಡಿದ ಮೈತ್ರೇಯಿಯ ವಿಷಯದ ಪ್ರೇಮವೆಂಬ ವಿಕಾರವು, ಮೈತ್ರೇಯಿಯ ಘನತರವಾದ ಯೋಗ್ಯತೆಯ ಅನುಕೂಲಪರಿಸ್ಥಿತಿಯಲ್ಲಿ ಅಭಿವೃದ್ಧವಾಗುತ್ತಹೋಯಿತು. ಆಕೆಯು ಮೈತ್ರೇಯಿಯನ್ನು ಕಾಣಲಿಕ್ಕೆ ಮೇಲೆ ಮೇಲೆ ಹೋಗಹತ್ತಿದಳು. ಬರಬರುತ ಆಕೆಯ ವಿಯೋಗದ ಕಲ್ಪನೆಯಿಂದ ಕಾತ್ಯಾಯನಿಯ ಹೃದಯವು ಕಂಪಿಸ ಹತ್ತಿತು. ದಿನದಂತೆ ಕಾತ್ಯಾಯನಿಯು ಮೈತ್ರೇಯಿಯನ್ನು ಕಾಣಲಿಕ್ಕೆ ಹೋದಾಗ, ಆ ಮಾತು ಈಮಾತು ಹೊರಟು ಕಡೆಗೆ ಕಾತ್ಯಾಯನಿಯು ಮೈತ್ರೇಯಿಯನ್ನು ಕುರಿತು—

ಕಾತ್ಯಾಯನಿ--ತಂಗೀ, ಮೈತ್ರೇಯಿ, ನಿನ್ನ ಲಗ್ನವಾದಬಳಿಕ ನೀನು ಇಲ್ಲಿ ಯಾಕೆ ಇರುವೆ ? ನಿನ್ನ ವಿಯೋಗವು ನನಗೆ ಹ್ಯಾಗೆ ಸಹನವಾದೀತೆಂಬ ಚಿಂತೆಯು ಈಗಿನಿಂದಲೇ ಹಗಲು-ರಾತ್ರಿ ನನ್ನನ್ನು ಬಾಧಿಸಹತ್ತಿದೆ. ಇನ್ನು ನಿನ್ನ ಲಗ್ನದಕಾಲವು ಸಮೀಪಿಸಿತೆಂದು ಹೇಳಬಹುದು ! ನನ್ನ ಪ್ರತಿ ಒಬ್ಬ ತಂಗಿಯ ವಿವಾಹವೆಂದರೆ, ನನ್ನ ಮನಸ್ಸಿಗೆ ವಿಯೋಗ ದುಃಖವು ಎಷ್ಟರಮಟ್ಟಿಗೆ ಆಗುವದೆಂಬದನ್ನು ಪರೀಕ್ಷಿಸುವ ಒರೆಗಲ್ಲಾಗಿರುತ್ತದೆ. ಆ ನನ್ನ ತಂಗಿಯರ ವಿಯೋಗದ ದುಃಖವನ್ನು ಈಗೀಗ ನಾನು ಸ್ವಲ್ಪ ಮರೆಯುತ್ತಿರಲು, ಪುನಃ ನಿನ್ನ ವಿಯೋಗದುಃಖವನ್ನು ಅನುಭವಿಸುವ ಪ್ರಸಂಗವು ಬಂದೊದಗಿರುತ್ತದೆ. ಈವರೆಗೆ ನಾನು ಅನುಭವಿಸಿದ ವಿಯೋಗದುಃಖಗಳನ್ನೆಲ್ಲ, ನಿನ್ನ ಸಂಬಂಧದ ವಿಯೋಗ ದುಃಖವು ಮೀರುವಹಾಗೆ ತೋರುತ್ತದೆ.

ಈಮೇರೆಗೆ ನುಡಿಯುವಾಗ ಕಾತ್ಯಾಯನಿಯಕಣ್ಣೊಳಗಿಂದ ಬಳ ಬಳ ನೀರು ಸುರಿಯಹತ್ತಿದವು. ಆಕೆಯು ಅತ್ಯಂತ ಪ್ರೇಮದಿಂದ ಮೈತ್ರೇಯಿಯನ್ನು ನೋಡಹತ್ತಿದಳು. ಆಗಿನ ಆ ಕರುಣಾಮೂರ್ತಿಯ ನಿರ್ಮಲ ಸ್ವರೂಪವನ್ನು ನೋಡಿ ಮೈತ್ರೇಯಿಯ ಮನಸ್ಸೂ ಕರಗಿ ಆಕೆಯ ನೇತ್ರಗಳೂ ಅಶ್ರುಪೂರ್ಣವಾದವು. ಸಹೃದಯರ ಹೃದಯುಗಳ ಚಾರಿತ್ರ್ಯದ ಮಹಿಮೆಯೇ ಅಂತಹದು. ಅವರು ಕಲ್ಲನ್ನು ಕೂಡ ಕರಗಿಸಬಲ್ಲರು. ಹೀಗೆ ಕಾತ್ಯಾಯನೀ-ಮೈತ್ರೇಯಿಯರಿಬ್ಬರೂ ಅಕೃತ್ರಿಮ ಪ್ರೇಮದಿಂದ ಒಬ್ಬರನ್ನೊಬ್ಬರು ನೋಡುತ್ತಿರುವಾಗ, ಮೈತ್ರೇಯಿಯು ಕಾತ್ಯಾಯನಿಯನ್ನು ಕುರಿತು—

ಮೈತ್ರೇಯಿ—ಅಕ್ಕಾ, ನಿನ್ನ ಹೃದಯವು ಎಷ್ಟು ಕೋಮಲವವ್ವಾ, ನಿನ್ನ ಮನಸ್ಸಿನ ನೈರ್ಮಲ್ಯವಾದರೂ ಎಷ್ಟಿರುವದದು ? ಗೆಳತೀ, ಕಾತ್ಯಾಯನೀ, ನನ್ನ ವಿಯೋಗಕ್ಕಾಗಿ ನೀನು ಸರ್ವಥಾ ದುಃಖಿಸಬೇಡ ಕಂಡೆಯಾ ! ನಮ್ಮಿಬ್ಬರ ವಿಯೋಗವು ಎಂದಿಗೂ ಆಗಲಾರದು. ಇನ್ನಾದರೂ ನಿನಗೆ ಸಮಾಧಾನವಾಗಬಹುದಲ್ಲವೆ ?

ಕಾತ್ಯಾಯನಿ--" ವಿಯೋಗವಾಗಲಾರದು ! ಈ ನಿನ್ನ ಮಾತಿನ ಅರ್ಥವೇನು? ಇಲ್ಲಿಯೇ ಎಲ್ಲಿಯಾದರೂ ಸಮೀಪದಲ್ಲಿ ನಿನ್ನನ್ನುಕೊಟ್ಟರೆ, ಮೇಲಿಮೇಲೆ ನಾನುನಿನ್ನನ್ನು ಕಾಣಬಹುದೆಂಬದು ನಿಜವು; ಆದರೆ ನಿನ್ನ ಅತಿಯಮನೆಯು ಸಮೀಪದಲ್ಲಿಯೇ ದೊರೆಯುವದೆಂದು ಯಾರು ಹೇಳಬೇಕು ? ಪ್ರಶಸ್ತ ಮನೆತನ ನೋಡಿ ನಿನ್ನನು ಕೊಡಬೇಕಾಗುತ್ತದೆ."

ಮೈತ್ರೇಯಿ—ನಾನು ಲಗ್ನ ಮಾಡಿಕೊಳ್ಳುವೆನೆಂದಾದರೂ ನೀನು ಯಾತರ ಮೇಲಿಂದ ಹೇಳುತ್ತೀ ?

ಕಾತ್ಯಾಯನಿ--ಏನಂದಿ ? ನೀನು ಲಗ್ನಮಾಡಿಕೊಳ್ಳುವದಿಲ್ಲವೆ ? ಅವಿವಾಹಿತಳಾಗಿಯೇ ಇರುವೆಯಾ ? ಅವ್ವಯ್ಯಾ, ಸಖೀ, ಮೈತ್ರೇಯಿ, ಸ್ತ್ರೀಯರು ಅವಿವಾಹಿತರಾಗಿ ಇರುವ ಕಲ್ಪನೆಯೇ ನನಗೆ ವಿಲಕ್ಷಣವಾಗಿ ತೋರುತ್ತದೆ. ಅದರಲ್ಲಿ ನಿನ್ನಂಥವಳ ಪಾಣಿಗ್ರಹಣಕ್ಕೆ ಯಾರು ಆತುರಪಡಲಿಕ್ಕಿಲ್ಲ ? ತಂಗೀ, ನಿನ್ನಂಥವರು ಹಾದಿಯಲ್ಲಿ ಬಿದ್ದಿರುವರೇ ? ಮನೆಮನೆಗೆ ಒಟ್ಟಿರುವರೇ ?

ಮೈತ್ರೇಯಿ—ನನ್ನ ಪಾಣಿಗ್ರಹಣಕ್ಕೆ ಬಹುಜನರು ಸಿದ್ಧರಾಗಿರಬಹುದು; ಆದರೆ ಅವರಲ್ಲಿ ಯಾರೂ ನನ್ನ ಮನಸ್ಸಿಗೆ ಬಾರದಿದ್ದರೆ ?

ಕಾತ್ಯಾಯನಿ—ಹಾಗಾದರೆ ನೀನು ಅವಿವಾಹಿತಳಾಗಿಯೇ ಇರುವವಳೇನು ? ಸೇರದವಮ್ಮ ನನಗೆ ಈ ನಡತೆ! ಸಂಸಾರವೇ ಸ್ತ್ರೀಯರ ಕರ್ತವ್ಯವೆಂದು ನನಗೆ ಯಾವಾಗಲೂ ತೋರುತ್ತದೆ. ನಿರಾಶ್ರಿತರಾಗಿ ಹೆಂಗಸರು ಇರಬಹುದೆ? ಹಾಗೆ ಇದ್ದರೆ ಚಂದಕಾಣಬಹುದೆ?

ಮೈತ್ರೇಯಿ—ಸಖೀ, ನಿನ್ನ ಮಾತನ್ನು ನಾನು ಅಲ್ಲಗಳೆಯುವದಿಲ್ಲ. ಸ್ತ್ರೀಯರು ಬ್ರಹ್ಮಚರ್ಯದಿಂದಿರುವದು ಸುಲಭವಲ್ಲ. ಇದ್ದರೆ ಚಂದವೂ ಕಾಣುವದಿಲ್ಲ. ಅಂತೇ ಸ್ತ್ರೀಯರು ಬ್ರಹ್ಮಚರ್ಯದಿಂದಿರುವದು ತೀರ ಕಠಿಣವು; ಆದರೆ ಸಂಸಾರವು ಕೇವಲ ಸ್ತ್ರೀಯರ ಸಲುವಾಗಿಯೇ ಇರುತ್ತದೆಂಬ ಮಾತು ನನಗೆ ಒಪ್ಪಿಗೆಯಾಗಿರುವದಿಲ್ಲ. ಅದು ಸ್ತ್ರೀಯರ ಸಲುವಾಗಿ ಇರುವಂತೆ ಪುರುಷರ ಸಲುವಾಗಿಯೂ ಇರುತ್ತದೆ. ಸ್ತ್ರೀ-ಪುರುಷರಿಬ್ಬರಿಗೂ ಸಂಸಾರವು ಸಂಬಂಧಿಸಿರುವದು. ಗೃಹಕೃತ್ಯವು ಕೇವಲ ಸ್ತ್ರೀಯರದೇ ಎಂದು ಮುಖ್ಯವಾಗಿ ಪುರುಷರು ತಿಳಿದು ನಡೆಯುತ್ತಿರುವದರಿಂದ, ಗೃಹಕೃತ್ಯದಹೊರತು ಸ್ತ್ರೀಯರು ಬೇರೆ ಏನೂ ಮಾಡತಕ್ಕದ್ದಿಲ್ಲವೆಂದು ಎಲ್ಲರೂ ತಿಳಿದಿರುವರು.

ಕಾತ್ಯಾಯನಿ—ಗೃಹಕೃತ್ಯದ ಹೊರತು ನಾವು ಹೆಂಗಸರು ಬೇರೆ ಏನು ಕೆಲಸ ಮಾಡಬೇಕಾಗಿರುವದು? ಪಾರಮಾರ್ಥಿಕವಿಚಾರವೆ? ಆಗಲಿ. ಸಂಸಾರಕೃತ್ಯಗಳಲ್ಲಿ ಪಾರಮಾರ್ಥಿಕ ಸಂಗತಿಗಳು ಪೋಣಿಸಲ್ಪಟ್ಟೇ ಇರುವವಲ್ಲ! ಯಜ್ಞ-ಯಾಗಗಳಲ್ಲಿ ಪತಿಗೆ ಸಹಾಯ ಮಾಡುವದು, ಈಶಸ್ತವನ, ಜಪ, ತಪ ಮೊದಲಾದವುಗಳು ಪಾರಮಾರ್ಥಿಕ ಸಂಗತಿಗಳಲ್ಲದೆ ಮತ್ತೇನು ? ಇವೆಲ್ಲ ಕೆಲಸಗಳನ್ನು ವಿವಾಹಿತ ಸ್ತ್ರೀಯು ಮಾಡಲೇಬೇಕಾಗುವದು. ಅಂದಬಳಿಕ ಸಂಸಾರಕೃತ್ಯಗಳೊಡನೆ ಆಕೆಯು ಪಾರಮಾರ್ಥಿಕ ವಿಚಾರವನ್ನೂ ಮಾಡಿದಹಾಗಾಗುವದಿಲ್ಲವೋ ! ಪತಿಯು ದೈವವೆಂದು ತಿಳಿದು ನಡೆಯುವದರಿಂದಲೇ ಸತಿಗೆ ಸದ್ಗತಿಯಾಗುವದಲ್ಲವೆ!

ಮೈತ್ರೇಯಿ—ನೀನಾಡುವದು ಸರಿಯಾದದ್ದು; ಇವುಗಳ ಹೊರತು ಸ್ತ್ರೀಯರ ಕರ್ತವ್ಯವೇನೂ ಇರುವದಿಲ್ಲವೆ? ಆತ್ಮಜ್ಞಾನವನ್ನು ಪಡೆಯುವದು ಸ್ತ್ರೀಯರ ಮಹತ್ವದ ಕರ್ತವ್ಯವೆಂದು ನಿನಗೆ ತೋರುವದಿಲ್ಲವೆ ?

ಕಾತ್ಯಾಯನಿ—ತೋರುವದು ನಿಜವು, ಆದರೆ ಆ ಕೆಲಸವು ವಿದ್ವಾಂಸರದು, ನಮ್ಮಂಥ ಹೆಂಗಸರದಲ್ಲ. ಈಗ ವಿದುಷಿಯರಾದ ಸ್ತ್ರೀಯರು ಎಷ್ಟು ಜನರಿರುವರು ? ನಿನ್ನ ಅಬಚಿಯಾದ ಗಾರ್ಗಿಯಂಥ ಬುದ್ಧಿವೈಭವವೂ, ಕಾಲಾನುಕೂಲವೂ ಉಳ್ಳ ಸ್ತ್ರೀಯರೇ ಆತ್ಮಜ್ಞಾನಪ್ರಾಪ್ತಿಗಾಗಿ ಪ್ರಯತ್ನ ಮಾಡುವರು; ಆದರೆ ಇಂಥ ಸ್ತ್ರೀಯರು ಒಟ್ಟಿನಲ್ಲಿ ಬಹು ಸ್ವಲ್ಪ ಜನರಾದ್ದರಿಂದ, ಆತ್ಮಜ್ಞಾನದ ಕೆಲಸವು ಮುಖ್ಯವಾಗಿ ಪುರುಷರದಾಗಿರುವದು. ನಾವು ಆ ಕೆಲಸಕ್ಕೆ ತಕ್ಕವರಲ್ಲ.

ಮೈತ್ರೇಯಿ—ನಿನ್ನ ಮಾತನ್ನು ಕೇಳಿ ನನಗೊಂದು ಕಥೆಯು ನೆನಪಾಗಿದೆ.

ಕಾತ್ಯಾಯನಿ—ನಾನಂತೂ ಕಥೆಯ ಭಕ್ತಳು. ನನಗೆ ಆ ಕಥೆಯನ್ನು ಹೇಳು.

ಮೈತ್ರೇಯಿ--ನಾನು ಹೇಳುವದು ಕಥೆಯಾದರೂ ಸರಿಯೆ; ಆದರೆ ಅದು ಬಹು ಮಹತ್ವದ್ದಾಗಿರುವದು. ಆ ಕಥೆಯು ಕೇವಲ ಮನೋರಂಜನಕ್ಕಾಗಿ ಕೇಳತಕ್ಕದ್ದಲ್ಲ. ಅದರ ರಹಸ್ಯವನ್ನು ಚನ್ನಾಗಿ ವಿಚಾರಿಸತಕ್ಕದು. ಇಂಥ ಕಥೆಗಳನ್ನು ಕೇಳಿ ಆನಂದಪಡುವದಕ್ಕಿಂತ, ಅವುಗಳೊಳಗಿನ ಮೂಲತತ್ವವನ್ನು ನೆನಪಿನಲ್ಲಿಟ್ಟು ಅದರಂತೆ ನಡೆಯುವದು ಹಿತಕರವಾಗಿರುವದು.

ಕಾತ್ಯಾಯನಿ--ಹಾಗೆಯೇ ಆಗಲಿ, ನಿನ್ನ ಕಥೆಯು ಬೋಧಪ್ರದವಾಗಿದರೂ ಚಿಂತೆಯಿಲ್ಲ. ಹೇಳು, ನಾನು ಮನಸ್ಸುಗೊಟ್ಟು ಕೇಳುವೆನು. ಮೈತ್ರೇಯಿ, ನನಗೆ ಎಷ್ಟು ಕಥೆ ಕೇಳಿದರೂ ಬೇಸರಬರುವದಿಲ್ಲ ನೋಡು! ಕಥೆ ದೊಡ್ಡದಿದ್ದಷ್ಟು ಸಂತೋಷ!

ಮೈತ್ರೇಯಿ--ಒಳ್ಳೇದು, ಹೇಳುತ್ತೇನೆ ಕೇಳು. ಒಂದು ಪೂರ್ಣ ಗರ್ಭಿಣಿಯಾದ ಸಿಂಹವು ಹಸಿವೆಯಿಂದ ವ್ಯಾಕುಲವಾಗಿ ಆಹಾರ ಹುಡುಕಲಿಕ್ಕೆ ತನ್ನ ಗವಿಯಿಂದ ಹೊರಬಿದ್ದಿತು. ಅದು ದೂರ ಹೋಗುವದರೊಳಗೆ ಒಂದು ಕುರಿಯ ಹಿಂಡು ಮೇಯುತ್ತಿರುವದು ಅದರ ಕಣ್ಣಿಗೆ ಬಿದ್ದಿತು. ಸಿಂಹವು ಸರಾಸರಿ ಹಿಂಡಿನ ಸನಿಯಕ್ಕೆ ಹೋಗಿ ಒಂದು ಕುರಿಯ ಮೇಲೆ ಜಿಗಿಯಲು ಜಪ್ಪಹಾಕಿತು. ಹಸಿವೆಯು ಬಹಳವಾದದ್ದರಿಂದಲೂ, ತನ್ನ ಪರಾಕ್ರಮದ ವಿಷಯವಾಗಿ ಅದಕ್ಕೆ ನಂಬಿಗೆಯು ವಿಶೇಷವಾಗಿದ್ದದ್ದರಿಂದಲೂ ಆ ಸಿಂಹವು ಅಷ್ಟು ದೂರದಿಂದಲೇ ಕುರಿಯ ಮೇಲೆ ಹಾರಿತು; ಆದರೆ ಪೂರ್ಣ ಗರ್ಭಿಣಿಯಿದ್ದದ್ದರಿಂದ ಜಿಗತವು ತಪ್ಪಿ ಅದು ಕಸುವಿನಿಂದ ನೆಲಕ್ಕೆ ಅಪ್ಪಳಿಸಿತು. ಆದ್ದರಿಂದ ಹೊಟ್ಟೆಯೊಳಗಿನ ಗಂಡುಮರಿಯು ಹೊರಬಿದ್ದು, ಸಿಂಹವು ಮರಣಹೊಂದಿತು. ತನ್ನ ಮರಿಯ ಮೋಹಪಾಶದಲ್ಲಿ ಸಿಕ್ಕಿಕೊಳ್ಳಲಿಕ್ಕೆ ಆ ಸಿಂಹವು ಬದುಕಿ ಉಳಿಯಲಿಲ್ಲ.

ಕಾತ್ಯಾಯನಿ--ಇದೇನೇ ಮೈತ್ರೇಯಿ, ಮಕ್ಕಳ ಮೋಹವು ನಿನಗೆ ಪಾಶವಾಗಿ ತೋರುವದೆ! ತಮ್ಮ ಮಕ್ಕಳು ತಮ್ಮ ಸುತ್ತುಮುತ್ತು ಆಡುತ್ತಿರುವಾಗ ಆಗುವ ಆನಂದವು ಸ್ವರ್ಗದಲ್ಲಿಯಾದರೂ ದೊರೆಯಬಹುದೆ? ತಾಯಿಯ ಕರುಳು ಹ್ಯಾಗಿರುತ್ತದೆಂಬದು ಮಕ್ಕಳ ತಾಯಿಂದಿರಾದವರಿಗಲ್ಲದೆ ಅನ್ಯರಿಗೆ ತಿಳಿಯುವದಿಲ್ಲೆಂಬ ಮಾತು ಸುಳ್ಳಲ್ಲ. ಹಾಗಲ್ಲದಿದ್ದರೆ ಹುಚ್ಚಿಯ ಹಾಗೆ ನೀನು ಹೀಗೆ ಅನ್ನುತ್ತಿದ್ದಿಲ್ಲ. ಮಕ್ಕಳನ್ನು ಹೀಗೆ ನಿರಾಕರಿಸಬಾರದವ್ವಾ! ಮಕ್ಕಳ ತಾಯಿಂದಿರಾಗಲಿಕ್ಕೆ ಪುಣ್ಯಬೇಕು!

ಮೈತ್ರೇಯಿ--ಅದೇನೇ ಇರಲಿ; ಮಕ್ಕಳೇನು ಜೀವಕ್ಕೆ ಮುಕ್ಕಳೋ, ಅವು ಮೋಹಪಾಶವಾಗಿರುವವೋ, ಅವುಗಳಿಂದ ಮೋಕ್ಷವು ಸಾಧಿಸುವದೋ? ಎಂಬದನ್ನು ಹಿಂದುಗಡೆ ನೋಡೋಣವಂತೆ; ಸದ್ಯಕ್ಕೆ ಕಥೆಯನ್ನಂತು ಕೇಳು.

ಕಾತ್ಯಾಯನಿ--ಹಾಗೇ ಆಗಲಿ ಹೇಳು, ದುರ್ದೈವಿಯಾದ ಆ ಹೆಣ್ಣು ಸಿಂಹವು ತನ್ನ ಮರಿಯ ಲಾಲನ-ಪಾಲನದ, ಹಾಗು ಬಾಲಕ್ರೀಡೆಯ ಸುಖವನ್ನು ಅನುಭವಿಸುವದಕ್ಕಾಗಿ ಬದುಕಿ ಉಳಿಯಲಿಲ್ಲ. ಹೂ ಮುಂದೇನಾಯಿತು?

ಮೈತ್ರೇಯಿ (ನಕ್ಕು) -- ಒಳ್ಳೇದು, ನೀನಂದಂತೆಯೇ ಆಗಲಿ. ಆ ಹಿಂಡ

ನಲ್ಲಿ ಕುರಿಗಳು ಬಹಳ ಇದ್ದವು. ಆ ಪರದೇಶಿಮರಿಯನ್ನು ನೋಡಿ ಅವಕ್ಕೆ ದಯವು ಉತ್ಪನ್ನವಾಯಿತು; ಆದ್ದರಿಂದ ಅನಾಥವಾದ ಆ ಮರಿಯನ್ನು ಸಂರಕ್ಷಿಸುವ ಇಚ್ಛೆಯು ಅವಕ್ಕೆ ಆಯಿತು.

ಕಾತ್ಯಾಯನಿ (ನಡುವೇ ಬಾಯಿಹಾಕಿ)— ಪಾಪ! ಇಚ್ಛೆಯಾಗದೇನು ಮಾಡೀತು. ಮಕ್ಕಳ ತಾಯಂದಿರ ಅನುಭವವು ಆ ಕುರಿಗಳಿಗಿದ್ದಬಳಿಕ ಪರದೇಶಿಕೂಸಿನಸಂರಕ್ಷಣ ಮಾಡದೆ ಅವು ಯಾಕೆ ಬಿಟ್ಟಾವು? ಹೂ ಮುಂದೆ ಹೇಳು.

ಮೈತ್ರೇಯಿ— ಬಳಿಕ ಕುರಿಗಳು ಸಿಂಹದ ಆ ಗಂಡುಮರಿಯನ್ನು ತಕ್ಕೊಂಡು ಹೋಗಿ ಅದರ ಸಂಗೋಪನ ಮಾಡತೊಡಗಿದವು. ಆಡು-ಕುರಿಗಳು ತಿನ್ನುವ ಪದಾರ್ಥಗಳನ್ನೇ ಆ ಸಿಂಹದ ಮರಿಯು ತಿನ್ನತೊಡಗಿತು, ಕುರಿಗಳು ಕುಡಿಯುವ ನೀರನ್ನೇ ಅದು ಕುಡಿಯಹತ್ತಿತು. ಅದು ಯಾವಾಗಲೂ ಕುರಿಗಳ ಸಹವಾಸದಲ್ಲಿದ್ದು, ಅವುಗಳೊಡನೆ "ಬ್ಯಾ ಬ್ಯಾ" ಎಂದು ಕೂಗುತ್ತ ಓಡಾಡುತ್ತಿತ್ತು. ಹೀಗೆ ಆಕುರಿಗಳ ಸಹವಾಸದಿಂದ ಸಿಂಹದ ಮರಿಗೆ—"ನಾನು ಕುರಿಯೇ ಇರುತ್ತೇನೆಂ"ಬ ಭ್ರಾಂತಿಯು ಉತ್ಪನ್ನವಾಯಿತು. ಅದಕ್ಕೆ ತನ್ನ ನಿಜವಾದ ಸ್ವರೂಪದ ವಿಸ್ಮೃತಿಯು ಪೂರ್ಣವಾಗಿ ಆಗಿಹೋಯಿತು. ಸಿಂಹಾದಿ ಮೃಗಗಳನ್ನು ನೋಡಿದ ಕೂಡಲೆ ಬಾಯಲ್ಲಿ ಎಸಳುಇಲ್ಲದಂತೆ ಕುರಿಗಳು ಓಡುವಾಗ, ಆ ಸಿಂಹದ ಮರಿಯು ತಾನೂ ಅವುಗಳ ಸಂಗಡ ಓಡಿಹೋಗುತ್ತಿತ್ತು. ಶತ್ರುವಿನೊಡನೆ ಕಾದಿ ತನ್ನ ಪ್ರತಾಪವನ್ನು ತೋರಿಸುವ ಅದರ ಜನ್ಮಸ್ವಭಾವದ ವಿಸ್ಮೃತಿಯು ಅದಕ್ಕೆ ಪೂರ್ಣವಾಗಿ ಆಗಿಹೋಯಿತು. ಒಟ್ಟಿಗೆ ಹೇಳತಕ್ಕದ್ದೇನಂದರೆ, ಅದರ ಆತ್ಮಸ್ವರೂಪದ ಸುತ್ತಲು ಅಜ್ಞಾನದ ಮುತ್ತಿಗೆಯು ಬಿದ್ದು, ನಾನು ಎಲ್ಲ ಬಗೆಯಿಂದಲೂ ಕುರಿಯೇ ಇರುತ್ತೇನೆಂದು ಅದು ತಿಳಿದುಕೊಂಡಿತು.

ಕಾತ್ಯಾಯನಿ (ನಡುವೆ ಆತುರದಿಂದ)— ಛೀ ಛೀ! ಮೈತ್ರೇಯಿ, ವನರಾಜನೆನಿಸುವ ಸಿಂಹವು ಕ್ಷುದ್ರಪ್ರಾಣಿಯಾದ ಕುರಿಯಾಗಿ ಹೋಯಿತಲ್ಲ! ಪಾಪ, ಅದರ ತಾಯಿಯಾದರೂ ಯಾಕೆ ಸತ್ತಿದ್ದೀತೇ? ಆ ಮರಿಯು ಬಲು ದೈವಗೇಡಿಯು! ಸಖೀ, ಕಡೆಗೂ ಆ ಸಿಂಹದ ಮರಿಗೆ ತಾನು ಸಿಂಹನೆಂಬ ಅರಿವು ಆಗಲೇ ಇಲ್ಲವೇನು? ಅದು ಕುರಿಯಾಗಿ ಹೋಯಿತೆ?

ಮೈತ್ರೇಯಿ— ಅಕ್ಕಾ, ಸ್ವಲ್ಪ ಸಮಾಧಾನತಾಳು. ಎಷ್ಟಾದರೂ ಅದು ಸಿಂಹವಲ್ಲವೆ? ಅದು ಕುರಿಯು ಹ್ಯಾಗಾದೀತು? ನನ್ನ ಕಥೆಯನ್ನು ಪೂರ್ಣವಾಗಿ ಕೇಳು, ಅಂದರೆ ಎಲ್ಲಾ ನಿನಗೆ ತಿಳಿಯುವದು. ಒಂದು ದಿನ ಆ ಕುರಿಯ ಹಿಂಡು ಆ ಸಿಂಹದ ಮರಿಯೊಡನೆ ಒಂದು ಹಳ್ಳದಲ್ಲಿ ನೀರು ಕುಡಿಯುತಿ ತ್ತು. ಅಷ್ಟರಲ್ಲಿ ವಿಶಾಲದೇಹಿಯಾದ ಒಂದು ಸಿಂಹವೂ ನೀರು ಕುಡಿಯುವದಕ್ಕಾಗಿ ಅದೇ ಹಳ್ಳಕ್ಕೆ ಬಂದಿತು. ಸಿಂಹವು ನೀರು ಕುಡಿಯುತ್ತಿದ್ದಲ್ಲಿಂದ ಅದಕ್ಕೆ ಕುರಿಗಳ ಹಿಂಡು ಕಾಣುತಿ ತ್ತು; ಕುರಿಗಳಿಗೆ ಮಾತ್ರ ಸಿಂಹವು ಕಾಣುತ್ತಿದ್ದಿಲ್ಲ. ಕುರಿಗಳ ಹಿಂಡಿನಲ್ಲಿ ಸಿಂಹದ ಮರಿಯು ನೀರು ಕುಡಿಯುತ್ತಿರುವದನ್ನು ನೋಡಿ ಆ ಸಿಂಹಕ್ಕೆ ಬಹಳ ಆಶ್ಚರ್ಯವಾಯಿತು. ಅದು

ತನ್ನೊಳಗೆ--"ಇದೇನಾಶ್ಚರ್ಯವು! ಕುರಿಯು ಹಿಂಡಿನಲ್ಲಿ ಸಿಂಹದ ಮರಿಯೇ! ಈ ಮರಿಯು ಜಪ್ಪುಹಾಕಿ ಕುರಿಗಳನ್ನು ಹಿಡಿಯುತ್ತದೆನ್ನಬೇಕೆಂದರೆ ಹಾಗೇನು ಕಾಣು ವದಿಲ್ಲ! ಕುರಿಗಳನ್ನು ಹಿಡಿಯುವದಂತು ಇರಲಿ, ತಾನೂ ಕುರಿಗಳಂತೆ "ಬೇ ಬೇ ಬೇ" ಎಂದು ಒದರುತ್ತದಲ್ಲ" ಎಂದು ಅಂದುಕೊಂಡು, ಬಹಳ ಅಸಮಾಧಾನಪಟ್ಟಿತು. ಅದು ಸಿಂಹದಮರಿಗೆ ಎರಡು ಮಾತು ಹೇಳಿನೋಡಬೇಕೆಂದು ಮುಂದಕ್ಕೆ ಬರಲು, ಅದನ್ನು ನೋಡಿ ಕುರಿಗಳೆಲ್ಲ ದೆಸೆಗೆಟ್ಟು ಓಡತೊಡಗಿದವು. ಅವುಗಳ ಸಂಗಡ ಸಿಂಹದ ಮರಿಯೂ ಓಡತೊಡಗಿತು.

ಕಾತ್ಯಾಯನಿ (ಆತುರದಿಂದ)-- ಅಯ್ಯೊ! ಎಂಥ ದುರ್ದೈವಿಯದು! ತನ್ನನ್ನು ಎಚ್ಚರಗೊಳಿಸಿ ಹಿತಮಾಡಬಂದ ಸಿಂಹನನ್ನು ತಿಳಿಯದೆ ಹೋಯಿತಲ್ಲ, ಮುಂದೆ ಗತಿಯೇನು?

ಮೈತ್ರೇಯಿ-- ಸಖೀ, ಸ್ವಲ್ಪ ಸಮಾಧಾನತಾಳಿ ಕಥೆಯನ್ನು ಪೂರ್ಣವಾಗಿ ಯಾದರೂ ಕೇಳು. ಸ್ವಜಾತಿಯ ಪ್ರಾಣಿಯು ಸ್ವಜಾತಿಯ ಪ್ರಾಣಿಗೆ ಬೆನ್ನುತೋರಿಸಿ ಓಡಿಹೋಗುವದನ್ನು ನೋಡಿ ಸಿಂಹವು ಬಹಳ ವ್ಯಸನಪಟ್ಟಿತು. "ಇದಕ್ಕೆ ಮೂಲ ಸ್ವರೂಪದ ವಿಸ್ಮೃತಿಯು ಇಷ್ಟು ಯಾಕಾಗಿರಬಹುದೆಂ"ಬದರ ಗೊತ್ತು ಆ ಸಿಂಹಕ್ಕೆ ಆಗಲೊಲ್ಲದು. "ಈಗ ಓಡಿಹೋಗಲಿ, ಇನ್ನೊಮ್ಮೆ ಇದನ್ನು ಏಕಾಂತದಲ್ಲಿ ಕಂಡು ಎಚ್ಚರಗೊಳಿಸೋಣ," ಎಂದು ಯೋಚಿಸಿ ಸಿಂಹವು ಅದನ್ನು ಆಗ ಸುಮ್ಮನೆ ಹೋಗ ಗೊಟ್ಟಿತು. ಮುಂದೆ ಹೊತ್ತುಸಾಧಿಸಿ ಆ ಮರಿಯು ಒಂದೇ ಇದ್ದಾಗ ಅದಕ್ಕೆ ಸಿಂಹವು ಗಂಟುಬಿದ್ದಿತು. ಏಕಾಂತದಲ್ಲಿ ಆ ಭಯಂಕರ ಸಿಂಹವನ್ನು ನೋಡಿ ಸಿಂಹದ ಮರಿಯು ಗಡಗಡನೆ ನಡುಗಹತ್ತಿತು. ಅದು "ಬೇ ಬೇ" ಎಂದು ಒದರುತ್ತ ದೀನ ವಾಣಿಯಿಂದ ಸಿಂಹನನ್ನು ಕುರಿತು--"ಮಹಾರಾಜ, ನೀವು ದೊಡ್ಡವರು, ಉದಾರ ಸ್ವಭಾವದವರು; ನಾನೊಂದು ಕ್ಷುದ್ರ ಕುರಿಯುಮರಿಯು; ನನ್ನಂಥವನನ್ನು ಕೊಲ್ಲು ವದರಿಂದ ನಿಮಗಾಗುವ ಲಾಭವೇನು?" ಎಂದು ನುಡಿಯಲು, ಅದನ್ನು ಕೇಳಿ ಸಿಂಹಕ್ಕೆ ಬಹಳ ವ್ಯಸನವಾಯಿತು. ಅದು ಮರಿಗೆ--"ತಮ್ಮಾ, ನಾನು ದೊಡ್ಡವನು, ನೀನು ಸಣ್ಣವನು; ಶಕ್ತಿಯ ಮಾನದಿಂದ ನನಗಿಂತ ನೀನು ದುರ್ಬಲನೆಂದು ಹೇಳಬ ಹುದು; ಆದರೆ ನಾನು ಸಿಂಹನೇ ಅಲ್ಲ, ಹೊಲಸುಜಾತಿಯ ಕುರಿಮರಿಯಿರುತ್ತೇನೆಂಬ ತಿಳುವಳಿಕೆಯು ನಿನಗೆ ಹ್ಯಾಗೆ ಆಯಿತು" ಎಂದು ಪ್ರಶ್ನಮಾಡಿತು. ಅದಕ್ಕೆ ಮರಿಯು-- ಮಹಾರಾಜ, ಮೂಲತಃ ನಮ್ಮ ಜಾತಿಯೇ ಕುರಿಯದು, ಅಂದಬಳಿಕ ನಾನು ಕುರಿಯ ಮರಿಯೆಂದು ಹೇಳದೆ ಏನುಮಾಡಲಿ? ನಾವು ಹೊಲಸು ಜಾತಿಯವರೆಂಬದು ನಿಜವು. ಅಂತೇ ನನ್ನನ್ನು ಬಿಟ್ಟುಬಿಡಬೇಕೆಂದು ನಿಮ್ಮನ್ನು ಪ್ರಾರ್ಥಿಸುವೆನು, ಎಂದು ಉತ್ತರ ಕೊಟ್ಟಿತು. ಕಾತ್ಯಾಯನೀ, ಇನ್ನುಮುಂದೆ ಆದ ಅವುಗಳ ಸಂಭಾಷಣವನ್ನು ಲಕ್ಷ ಗೊಟ್ಟು ಕೇಳು; ಯಾಕಂದರೆ, ಯಾರಾದರೊಬ್ಬರು ತಾವು ಕೆಲಸಕ್ಕೆ ಬಾರದವರು, ತಮ್ಮ ಯೋಗ್ಯತೆಯು ಹೀನವಾದದ್ದು, ನಾವು ಹೀಗೆಯೇ ಇರತಕ್ಕವರು, ಅಂಥವ

ಕನ್ನು ನಾವು ಹ್ಯಾಗೆ ನಂಬಬೇಕು? ಎಂದು ಭಾವಿಸುವಿರಿ, ತಾಳಿದರೆ, ಅವರ ಉದ್ಧಾರವಾಗುವದು ಎಷ್ಟು ಕಠಿಣವಾಗುವದೆಂಬುದು ಮುಂದಿನ ಸಂಗತಿ ತಿಳಿಯುವದು. ಸಿಂಹದ ಮರಿಯು ಅಜ್ಞಾನದಿಂದ ನಾನು ಕುರಿಯ ಮರಿಯು, ಎಂದು ತಿಳಿದಿರುವ ಕೌತುಕವನ್ನು ನೋಡಿ ಸಿಂಹವು ಕನಿಕರದಿಂದ——

ಸಿಂಹ——ತಮ್ಮಾ. ಸ್ವಲ್ಪ ಸಮಾಧಾನತಾಳು, ಜೀವರಹಿತ ನೀನು ನೀರು ಕುಡಿಯುತ್ತಿರುವಾಗ ನಿನ್ನ ಪ್ರತಿಬಿಂಬವು ನೀರಲ್ಲಿ ಮೂಡಿತ್ತಲ್ಲ, ಅದು ಕುರಿಯ ಹಾಗೆ ಇತ್ತೇನು?

ಸಿಂಹದಮರಿ——ಇಲ್ಲ, ಕುರಿಯಮರಿಯ ಹಾಗೆ ಇಲ್ಲ. ಬೇರೆ ವಿಧವಾಗಿ ಇತ್ತು.

ಸಿಂಹ——ನೀನು ಕುರಿಯಮರಿಯೇ? ಆಗಿದ್ದರೆ ನಿನ್ನ ಪ್ರತಿಬಿಂಬವು ಕುರಿಯಮರಿಯ ಹಾಗೆಯೇ ಇರಬೇಕಾಗಿತ್ತಲ್ಲವೆ! ಹಾಗಿದ್ದರೆ ಅದು ಬೇರೆ ವಿಧವಾಗಿದ್ದ ಕಾರಣವೇನು!

ಸಿಂಹದಮರಿ——ಇಬ್ಬರ ಹಾಗೆ ಒಬ್ಬರು ಇರುತ್ತಾರೆ! ನಾನು ಕುರಿಗಿಂತ ಬೇರೆ ವಿಧವಾಗಿರಬಹುದು; ಇರಲಿ ಮಹಾರಾಜ, ನಿಮ್ಮನ್ನು ಕಂಡು ನನಗೆ ಬಹಳ ಅಂಜಿಕೆ ಬರುತ್ತದೆ. ನನ್ನನ್ನು ಬಿಟ್ಟುಬಿಡಿ.

ಸಿಂಹ——ನಿಲ್ಲು, ಎಲ್ಲಿಗೆ ಹೋಗುತ್ತೀ? ಇಬ್ಬರ ಹಾಗೆ ಒಬ್ಬರು ಇರುವದಿಲ್ಲೆಂದು ಹೇಳಿ, ನನ್ನನ್ನು ಸಮಾಧಾನಗೊಳಿಸಬೇಡ, ಅಲ್ಲದೆ, ಕುರಿಯ ರೂಪದಿಂದ ತೀರ ಭಿನ್ನವಾದ ರೂಪವು ನಿನ್ನದಿರುತ್ತದೆಂಬುದರ ಅರಿವು ನಿನಗೆ ಇರುವದಿಲ್ಲವೆ! ನಡೆ, ಆ ಬಾವಿಯ ದಂಡೆಯಮೇಲೆ ನಿಂತು ನಿನ್ನ ನೆರಳನ್ನು ನೋಡುವೊ.

ಈ ಮಾತಿಗೆ ನುಡಿದು ಸಿಂಹವು ಬಲಾತ್ಕಾರದಿಂದ ಆ ಸಿಂಹದ ಮರಿಯನ್ನು ಎಳಕೊಂಡುಹೋಗಿ, ಅದನ್ನು ಬಾವಿಯ ದಂಡೆಯಮೇಲೆ ತನ್ನ ಬಳಿಯಲ್ಲಿ ನಿಲ್ಲಿಸಿಕೊಂಡು, ಆ ಬಾವಿಯಲ್ಲಿ ಮೂಡಿರುವ ನಮ್ಮಿಬ್ಬರ ಪ್ರತಿಬಿಂಬಗಳ ಒಂದೇ ಸಾರೂಪ್ಯವನ್ನು ನೋಡಿ, ಹ್ಯಾಗೆ ಕಾಣಿಸುತ್ತದೆ ಹೇಳು, ಎಂದು ನುಡಿಯಿತು. ಆಗ ಸಿಂಹದ ಮರಿಯು ಅಂಜುತ್ತಂಜುತ್ತ ಬಾವಿಯೊಳಗಿನ ತನ್ನ ಪ್ರತಿಬಿಂಬವನ್ನು ನೋಡಿ ಯೋಚಿಸಗೊಂಡಿತು. ಅದು ಮನಸ್ಸಿನಲ್ಲಿ——"ನಾನೂ ಈ ಸಿಂಹವೂ ಬೇರೆ ಇಲ್ಲ, ನನ್ನ ಸ್ವರೂಪವು ಭಿನ್ನವಾಗಿರುತ್ತದೆಂದು ನಾನು ಮರೆತುಬಿಟ್ಟಿರುವೆನು! ಇದು ಸಂಗತಿಯ ಫಲವು. ನೀಚಸಂಗತಿಯಿಂದ ನನ್ನ ಯಾವತ್ತು ಸ್ವರೂಪದ ವಿಸ್ಮೃತಿಯಾಗಿತ್ತು. ನಾನು ಸಿಂಹನು, ಕುರಿಯಲ್ಲವೆಂದು ನಿಶ್ಚಯಿಸಿತು. ಹೀಗೆ ನಾನು ಸಿಂಹನೆಂಬ ಗುರುತು ಹತ್ತಿದಕೂಡಲೆ ಆ ಮರಿಗೆ ಅತ್ಯಾನಂದವಾಯಿತು. ಅದು ಆನಂದದ ಭರದಲ್ಲಿ ಒಮ್ಮಿಂದೊಮ್ಮೆ ಗರ್ಜಿಸಿತು. ಆ ಪ್ರಚಂಡವಾದ ಸಿಂಹದ ಮರಿಯ ಗರ್ಜನೆಯಿಂದ ಸರ್ವಪಶುಮೃಗಗಳು ನಡುಗಿದವು. ನೋಡಿ, ಕಾತ್ಯಾಯನರೇ, ಆ ಸಿಂಹದ ಮರಿಯಂತೆಯೇ ನಿಮಗೂ ಆತ್ಮವಿಸ್ಮೃತಿಯಾಗಿರುತ್ತದೆ.

ಕಾತ್ಯಾಯನ——ಸ್ವಾಮೀ, ನಿಮ್ಮ ಕಥೆ ಕೇಳಿ ನನಗೆ ಸ್ವಲ್ಪ ಗೊಂದಲವುಂಟಾಗಿದೆ, ಸ್ವಲ್ಪ ನಿಲ್ಲು, ವಿಚಾರಮಾಡುತ್ತೇನೆ. ಏನೆಂದಿ? ಸಿಂಹದ ಮರಿಯ ಹಾಗೆ ನನಗೆ ಆತ್ಮವಿಸ್ಮೃತಿಯಾಗಿದೆಯೆಂದು ನೀನು ಹೇಳಿದೆಯಲ್ಲಾ! ಆತ್ಮವಿಸ್ಮೃತಿಯೆಂದರೇನು?

ಮೈತ್ರೇಯಿ--ನಾನೆಲ್ಲ ನಿನಗೆ ಹೇಳುವೆನು; ಆದರೆ ಕಥೆಯೆಲ್ಲ ನೆನಪಿನಲ್ಲಿರಲಿ. ಸಖೀ , ನಾನು ಕೇಳುವ ಒಂದೆರಡು ಪ್ರಶ್ನಗಳಿಗೆ ಮೊದಲು ಉತ್ತರಕೊಡು . ಆತ್ಮನು ಬರಿಯ ಪುರುಷರಲ್ಲಿಯೇ ಇರುವನ್ನೋ , ಆತನು ಸ್ತ್ರೀಯರಲ್ಲಿಯೂ ಇರುವನೋ ?

ಕಾತ್ಯಾಯನೀ--( ನಕ್ಕು ) ಇದೇನು ಕೇಳುವದು ? ಆತ್ಮನು ಪುರುಷರಲ್ಲಿದ್ದಂತೆ ಸ್ತ್ರೀಯರಲ್ಲಿಯೂ ಇರುವನು; ಶರೀರರಚನೆಯಲ್ಲಿಯ ಅಲ್ಪಸ್ವಲ್ಪ ಭೇದವಲ್ಲದೆ ಉಳಿದ ಯಾವ ಮಾತುಗಳಲ್ಲಿಯೂ ಪುರುಷರಿಗೂ, ಸ್ತ್ರೀಯರಿಗೂ ಭೇದವಿರುವದಿಲ್ಲ. ಪುರುಷರಂತೆ ಸ್ತ್ರೀಯರಿಗೂ ಪಂಚಜ್ಞಾನೇಂದ್ರಿಯಗಳೂ, ಪಂಚಕರ್ಮೇಂದ್ರಿಯಗಳೂ, ಮನಸ್ಸೆಂಬ ಅಂತರಿಂದ್ರಿಯವೂ ಇರುತ್ತವೆ; ಅಂದಬಳಿಕ ಇವನ್ನೆಲ್ಲ ಪ್ರೇರಿಸುವ ಆತ್ಮನು ಇಬ್ಬರಲ್ಲಿಯೂ ಇರಲೇಬೇಕು .

ಮೈತ್ರೇಯಿ--ಒಳ್ಳೇದು, ಸ್ತ್ರೀ-ಪುರುಷರಿಬ್ಬರಲ್ಲಿ ಆತ್ಮನು ಸರಿಯಾಗಿರುವನೋ, ಪುರುಷರಲ್ಲಿ ಹೆಚ್ಚು , ಸ್ತ್ರೀಯರಲ್ಲಿ ಕಡಿಮೆಯಾಗಿ ಇರುವನೋ?

ಕಾತ್ಯಾಯನೀ--( ಪುನಃ ನಕ್ಕು ) ಇಬ್ಬರಲ್ಲಿಯೂ ಸರಿಯಾಗಿಯೇ ಇರುವನು. ಹೆಚ್ಚುಕಡಿಮೆಯಾಗಿರುವದಿಲ್ಲ; ಯಾಕಂದರೆ, ನಿತ್ಯವ್ಯವಹಾರದಲ್ಲಿಯ ಸಂಗತಿಗಳಿಂದ ಅದು ಅನುಭವಕ್ಕೆ ಬರುವ ಮಾತಾಗಿದೆ .

ಮೈತ್ರೇಯಿ,--ಸರಿ. ಆತ್ಮಜ್ಞಾನವಾಗದೆ ಮೋಕ್ಷವಾಗಲಾರದೆಂಬ ಮಾತನ್ನು ಯಾಜ್ಞವಲ್ಕ್ಯಪತ್ನಿಗೆ ನಾನು ಹೇಳಲವಶ್ಯವಿಲ್ಲ. ಯಾಕಂದರೆ, ಮಹಾತ್ಮರಾದ ಅವರ ಅಗಾಧ ಜ್ಞಾನದ, ಹಾಗು ಅಲೌಕಿಕ ಮಾಹಾತ್ಮ್ಯದ ಪ್ರಸಿದ್ಧಿಯು ಸಾರ್ವತ್ರಿಕವಾಗಿರುವದು .

ಕಾತ್ಯಾಯನೀ--ಹೌದಮ್ಮಾ ಮೈತ್ರೇಯಿ, ನೀನು ಆ ಮಾತನ್ನು ಹೇಳಲವಶ್ಯವಿಲ್ಲ. ನಾನು ಅದನ್ನು ಪತಿಮುಖದಿಂದ ಹಲವು ಸಾರೆ ಕೇಳಿದ್ದೇನೆ; ಮುಕ್ತಿಯನ್ನು ಸಂಪಾದಿಸುವದು ಪುರುಷರಿಗೆ ಅವಶ್ಯವಾಗಿರುವಂತೆ ಸ್ತ್ರೀಯರಿಗೂ ಅವಶ್ಯವಾಗಿರುತ್ತದೆ. ಹಲವು ಕೇಳಿದ್ದೇನೆ .

ಮೈತ್ರೇಯಿ—ಅಂದಬಳಿಕ ಸಖೀ, ಆತ್ಮಜ್ಞಾನವ ಸಂಪಾದಿಸುವ ಸಂಬಂಧದಿಂದ ಸ್ತ್ರೀಪುರುಷರ ಕರ್ತವ್ಯಗಳು ಭಿನ್ನವಾಗುವದು ಹ್ಯಾಗೆ ನೀನೇ ಹೇಳು. ಸಂಸಾರಕೃತ್ಯಗಳಲ್ಲಿ ದಕ್ಷರಾಗಿರುವದಷ್ಟೇ ಸ್ತ್ರೀಯರಕರ್ತವ್ಯವಲ್ಲ. ಆತ್ಮಜ್ಞಾನ ಸಂಪಾದಿಸುವದೂ ಸ್ತ್ರೀಯರಕರ್ತವ್ಯವಾಗಿರುತ್ತದೆ. ಅದನ್ನು ನಾವು ಸಂಪಾದಿಸದಿದ್ದರೆ ಅದಕ್ಕೆ ಪುರುಷರಾದರೂ ಏನುಮಾಡಬೇಕು ?

ಕಾತ್ಯಾಯನೀ—ಸಖೀ, ನಿನ್ನಮಾತು ನಿಜವು. ಆತ್ಮಜ್ಞಾನದ ಸಂಬಂಧದಿಂದ ನಾನು ತೀರ ಉದಾಸೀನಳಾಗಿದ್ದೆನು. ನಿನ್ನಬೋಧದಿಂದ ಇಂದು ನನ್ನ ಕಣ್ಣುಗಳು ತೆರೆದವು. ನಾವೇ ಉದಾಸೀನರಾದರೆ ಪುರುಷರಾದರೂ ಏನುಮಾಡಬೇಕು? ನನ್ನನ್ನೇ ನೋಡಬಾರದೆ? ನಾನೇ ಉದಾಸೀನಳಾದದ್ದರಿಂದ ನಮ್ಮಯೋಗೀಶ್ವರರೂ ಈ ಸಂಬಂಧದಿಂದ ನನ್ನನ್ನು ಉದಾಸೀನಮಾಡಿರುವರು. ನನಗೇ ಸ್ವಸ್ವರೂಪಜ್ಞಾನವು ಬೇಡಾ

ಗಿರುವಾಗ ಅವರಾವರೂ ಏನುಮಾಡಬೇಕು? ಸಾಂಸಾರಿಕವಿಷಯುಗಳಲ್ಲಿಯೇ ಸದಾ ಮಗ್ನಳಾಗಿರುವ ನನ್ನೊಡನೆ, ಆ ವಿಷಯುಗಳನ್ನು ಕುರಿತೇ ಅವರು ಪ್ರಸ್ತಾಪಿಸುತ್ತಿರುವರು. ಸಖೀ, ಯಾಜ್ಞವಲ್ಕ್ಯಪತ್ನಿಯೆನಿಸುವ ನನಗೆ ಈ ಮಾತು ಅತ್ಯಂತ ಲಾಂಛನವೇ ಸರಿ! ನಮ್ಮಂಥ ಸ್ತ್ರೀಯರಿಗೆ ಸಿಂಹದ ಮರಿಯಂತೆ ಆತ್ಮವಿಸ್ಮೃತಿಯಾಗಿರುತ್ತದೆಂದು ನಿರ್ಬಾಧವಾಗಿ ಹೇಳಬಹುದು.

ಮೈತ್ರೇಯಿ — ಅಕ್ಕಾ, ನಿನಗೆ ನಾನು ಹೆಚ್ಚಿಗೆ ಹೇಳುವದೇನು? ದ್ರವ್ಯವನ್ನು ಸಂಪಾದಿಸುವದು, ಸಂಸಾರದ ಬೇರೆ ಕೃತ್ಯಗಳನ್ನು ಮಾಡುವದು ಪುರುಷರ ಕರ್ತವ್ಯವಾಗಿರುವಂತೆ, ಮನೆಗೆಲಸಗಳನ್ನು ದಕ್ಷತೆಯಿಂದ ಮಾಡುವದು ಸ್ತ್ರೀಯರ ಕರ್ತವ್ಯವಾಗಿರುತ್ತದೆ. ಸ್ತ್ರೀ–ಪುರುಷರು ತಮ್ಮ ತಮ್ಮ ಈ ಕರ್ತವ್ಯಗಳನ್ನು ಯಥಾಸ್ಥಿತವಾಗಿ ಮಾಡಿಕೊಂಡು, ಇಬ್ಬರೂ ಮೋಕ್ಷವಿಷಯಕ ವಿಚಾರವನ್ನು ಮಾಡತಕ್ಕದ್ದು; ಆದರೆ ಪುರುಷರಂತೆ ಸ್ತ್ರೀಯರು ಈ ಮಾತನ್ನು ಅವಶ್ಯವೆಂದು ಭಾವಿಸುವದಿಲ್ಲ. ಮನೆಗೆಲಸ ಮಾಡಿದರೆ ತಾವು ಕೃತಕೃತ್ಯರಾದೆವೆಂದು ಅವರು ತಿಳಿದುಬಿಡುತ್ತಾರೆ. ಇದಕ್ಕೂ ಹೆಚ್ಚಿನದೇನು ಮಾಡುವದಿರುವದಿಲ್ಲೆಂದು ಅವರು ಭಾವಿಸಿರುವರು.

ಕಾತ್ಯಾಯನೀ—ನೀನನ್ನುವದು ನಿಜವು. ನಮ್ಮ ಸ್ತ್ರೀಸಮಾಜದ ತಿಳುವಳಿಕೆಯೇ ಹೀಗಿರುತ್ತದೆ; ಅದರಲ್ಲಿ ನಾನಂತು ಬಹಳ ನಾಚಬೇಕಾಗಿದೆ; ಯಾಕಂದರೆ ನನಗೆ ಎಲ್ಲ ಬಗೆಯ ಉತ್ತಮಸಾಧನಗಳು ಉಪಲಬ್ಧವಾಗಿದ್ದು, ಅವುಗಳ ಉಪಯೋಗವನ್ನು ನಾನು ಮಾಡಿಕೊಂಡಿರುವದಿಲ್ಲ.

ಮೈತ್ರೇಯಿ—ಸಖೀ, ಕಾತ್ಯಾಯನೀ, ನೀನು ಬಹುಭಾಗ್ಯವತಿಯು ಕಂಡೆಯಾ! ವಿದ್ವಾಂಸನೂ, ಸದ್ಗುಣಸಂಪನ್ನನೂ ಆದಪತಿಯು ದೊರೆಯಲು ಪೂರ್ವಾರ್ಜಿತ ಪುಣ್ಯವು ಬೇಕು. ನೀನು ಬಹು ಪುಣ್ಯಶಾಲಿಯು! ಅಂತೇ ಯಾಜ್ಞವಲ್ಕ್ಯರಂಥ ಮಹಾತ್ಮರ ಪಾಣಿಗ್ರಹಣಮಾಡಿರುವೆ. ತಮ್ಮ ಪತಿಯನ್ನು ಆರಿಸಿಕೊಳ್ಳಲು ಸ್ವಾತಂತ್ರ್ಯವಿರುವ ಸ್ತ್ರೀಯರಿಗೆ, ವಿಶೇಷವಾಗಿ, ಉಚ್ಚವರ್ಗದೊಳಗಿನ ಸ್ತ್ರೀಯರಿಗೆ ಕೇವಲ ಧನಿಕನೂ, ಸ್ವಸುಖಾಭಿಲಾಷಿಯೂ ಆದ ಪುರುಷನನ್ನೇ ಪತಿಯಾಗಿ ಆರಿಸಿಕೊಳ್ಳುವ ಮನಸ್ಸು ಯಾಕಾಗುತ್ತದೋ ನಾನರಿಯೆನು! ಗುಣಗಳಗಿಂತಲೂ ಐಶ್ವರ್ಯವೂ, ತೇಜಸ್ವಿತೆಗಿಂತಲೂ ಸುಖಲೋಲುಪತೆಯೂ, ಕರ್ತೃತ್ವಕ್ಕಿಂತಲೂ ವಿಷಯಾಸಕ್ತಿಯೂ ಹೆಚ್ಚಿನವೆಂದು ತಿಳಿಯುವ ಸ್ತ್ರೀಯರೇ ವಿಶೇಷವಾಗಿರುವರು. ನಿನ್ನಂಥ ವಿವೇಕಿಗಳು ತೀರ ಕಡಿಮೆ. ವಿದ್ವಾಂಸನೂ, ವಿವೇಕಿಯೂ, ಸತ್ಪುರುಷನೂ, ಮೋಕ್ಷಪ್ರಾಪ್ತ್ಯರ್ಥವಾಗಿ ಸಹಾಯಮಾಡುವವನೂ ಆದ ಭಗವಾನ್ ಯಾಜ್ಞವಲ್ಕ್ಯರಂಥ ಪತಿಯನ್ನು ಆರಿಸಿ ನೀನು ಕೃತಕೃತ್ಯಳಾಗಿರುವೆ! ಸಖೀ, ಕಾತ್ಯಾಯನೀ, ನಿನ್ನ ಮಹತ್ವವನ್ನು ನಾನೇನು ವರ್ಣಿಸಲಿ! ವಿದೇಹಜನಕನೆಂದು ಪ್ರಸಿದ್ಧನಾಗಿದ್ದ ರಾಜನುಕೂಡ ನಿನ್ನಪತಿಯ ಶಿಷ್ಯಪ್ರಕೋಟಿಯಲ್ಲಿ ಸೇರಿರುವನು. ಮೊನ್ನಿನಮಹಾಸಭೆಯಲ್ಲಿ ನಿನ್ನಪತಿಯು 'ಬ್ರಹ್ಮನಿಷ್ಠರಲ್ಲಿ ಪರಮಶ್ರೇಷ್ಠನೆಂದು ಮಹಾಮಹಾಜ್ಞಾನಿಗಳು ಒಪ್ಪಿಕೊಂಡರು! ಅಂಥ ಮಹನೀ

ಯನ ಅರ್ಧಾಂಗಿಯೆನಿಸುವ ನಿನಗೆ ಆತ್ಮಜ್ಞಾನಪಡೆಯಲು ಏನು ಪ್ರಯಾಸವಾಗುವದು?

ಕಾತ್ಯಾಯನೀ—— ಮೈತ್ರೇಯೀ, ನಿನ್ನ ಮಾತು ಒಂದೂ ಸುಳ್ಳಲ್ಲ. ಹತ್ತರ ಕಾಮಧೇನುವನ್ನಿಟ್ಟುಕೊಂಡು ಮಜ್ಜಿಗೆಗಾಗಿ ಮನೆಮನೆ ತಿರುಗಿದಂತೆ ನನ್ನ ಗತಿಯಾಗಿದೆ. ನನ್ನ ಪತಿಯಮಹತ್ವವನ್ನು ತಿಳಿದುಕೊಳ್ಳುವ ಯೋಗ್ಯತೆಯೂ ನನ್ನಲ್ಲಿಲ್ಲ. ಇಂದು ನನ್ನ ಮೇಲೆ ನೀನು ದೊಡ್ಡ ಉಪಕಾರ ಮಾಡಿದಂತಾಯಿತು. ಸಖೀ, ಆತ್ಮಜ್ಞಾನಪ್ರಾಪ್ತಿಗಾಗಿ ನಾನು ಇನ್ನು ಅವರಿಗೆ ಶರಣು ಹೋಗುವೆನು. ಪ್ರತ್ಯಕ್ಷ ನನ್ನ ಪತಿಯ ಚಿರಸಹವಾಸದ ಮಹಾತ್ಮ್ಯದಿಂದ ನನಗಾಗದೆಯಿದ್ದ ಜಾಗ್ರತಿಯು, ಇಂದು ನಿನ್ನ ಸಹವಾಸದಿಂದ ಆಗಿರುತ್ತದೆ. ನಿನ್ನ ಈ ಉಪಕಾರವನ್ನು ನಾನು ಎಂದೂ ಮರೆಯಲಾರೆನು.

ಈ ಮೇರೆಗೆ ಸಂಭಾಷಣವು ನಡೆದಿರುವಾಗ ಕಾತ್ಯಾಯನಿಯ ಒಬ್ಬ ಸೇವಕನು ಪಲ್ಲಕ್ಕಿಯನ್ನು ತಕೊಂಡು ಮಿತ್ರನ ಮನೆಯಬಳಿಗೆ ಬಂದನು. ಈ ವರ್ತಮಾನವನ್ನು ಆತನು ಕಾತ್ಯಾಯನಿಗೆ ತಿಳಿಸಲು, ಆಕೆಯು ಸೇವಕನನ್ನು ಒಳಗೆ ಕರೆಸಿಕೊಂಡಳು. ಸೇವಕನು ಭಗವತೀ-ಕಾತ್ಯಾಯನಿಯನ್ನು ನಮಸ್ಕರಿಸಿ——"ದೇವೀ, ತಾವು ಇಲ್ಲಿಗೆ ಬಂದು ಬಹಳ ಹೊತ್ತಾದದ್ದರಿಂದ ಹುಡುಗರು ತಮ್ಮ ಹಾದಿಯನೋಡುತ್ತ ಒಂದೇಸವನೆ ಚಡಪಡಿಸುತ್ತಿರುವವು. ತಮ್ಮನ್ನು ಯಾವಾಗ ನೋಡೇವೆನ್ನುವಹಾಗೆ ಅವಕ್ಕೆ ಆಗಿದೆ. ಹೊತ್ತು ಮುಣುಗುತ್ತ ಬಂದಿತು. ತಮ್ಮ ಪಲ್ಲಕ್ಕಿಯು ಹೊರಗೆ ಸಿದ್ಧವಾಗಿದೆ. ದೇವಿಯವರ ಅಪ್ಪಣೆಯಂತೆ ನಡೆದುಕೊಳ್ಳುವೆನು" ಎಂದು ಹೇಳಿದನು. ಸೇವಕನ ಈ ಮಾತುಗಳನ್ನು ಕೇಳಿದ ಕೂಡಲೆ ಕಾತ್ಯಾಯನಿಗೆ ಮಕ್ಕಳ ನೆನಪಾಗಿ, ತಾನು ಮನೆಗೆ ಯಾವಾಗ ಹೋದೇನೆನ್ನುವಹಾಗೆ ಆಯಿತು. ಆಕೆಯು ಆಧ್ಯಾತ್ಮಿಕ ವಿಷಯವನ್ನು ಕುರಿತು ಮಾತಾಡುತ್ತ ಕುಳಿತುಕೊಂಡದ್ದು ಇದೇ ಮೊದಲು. ತನ್ನ ಮಕ್ಕಳ ನೆನಪಾದ ಕೂಡಲೆ ಆಕೆಗೆ ಚಡಪಡಿಕೆಯಾಯಿತು. ಇಷ್ಟುಹೊತ್ತಿಗೆ ತಾನು ಮಾಡಿಸಬೇಕಾಗಿದ್ದ ಮನೆಗೆಲಸಗಳೆಲ್ಲ ಹಾಗೇ ಉಳಿದದ್ದರಿಂದ ಆಕೆಯ ಮನಸ್ಸು ಅಸ್ಥಿರವಾಯಿತು. ಒಣ ಮಾತಿನಿಂದ ಕಾಲಹರಣವಾದಾಗ ಕರ್ತವ್ಯನಿಷ್ಠರಿಗೆಲ್ಲ ಹೀಗೆಯೇ ಚಡಪಡಿಕೆಯಾಗುವದು. ಕಾತ್ಯಾಯನಿಯು ಅತ್ಯಂತ ಕರ್ತವ್ಯನಿಷ್ಠಳು; ಸುವ್ಯವಸ್ಥಿತಳು; ಆಲಸ್ಯರಹಿತಳು. ಆಕೆಯ ಬಲವತ್ತರವಾದ ಸಂಸಾರವಾಸನೆಯು ಆಕೆಯನ್ನು ಹಿಡಿದೆಳೆಯಹತ್ತಿತು. ಆಕೆಯು ಅವಸರದಿಂದ ಕುಂಕುಮ ಹಚ್ಚಿಸಿಕೊಂಡು ಮೈತ್ರೇಯಿಯ ಅನುಜ್ಞೆಪಡೆದು ಪಲ್ಲಕ್ಕಿಯಲ್ಲಿ ಕುಳಿತು ಮನೆಗೆ ಬಂದಳು.

## ೪ ನೆಯ ಪ್ರಕರಣ.

# ವರಪ್ರದಾನ.

ವಸಂತಕಾಲವು; ಚೈತ್ರಪೌರ್ಣಿಮೆಯ ರಾತ್ರಿಯು ಮೂರುತಾಸಿನ ಸಮಯ; ಹಿಟ್ಟು ಚಲ್ಲಿದಹಾಗೆ ಬೆಳದಿಂಗಳು ಬಿದ್ದಿದೆ. ಭಗವಾನ್ ಯಾಜ್ಞವಲ್ಕ್ಯರ ಪುಣ್ಯಾಶ್ರಮದ ಉಪವನದಲ್ಲಿ ಸುಳಿದಾಡಿ ಪವಿತ್ರವಾಗುವನೆವದಿಂದ ಮಂದಮಾರುತನು ಸುಳ್ಳ ಸುಳ್ಳನೆ ಸುಳಿದಾಡುತ್ತಲಿದ್ದಾನೆ. ಮಲ್ಲಿಗೆ, ಪಾರಿಜಾತ, ಪಾಟಲ ಮೊದಲಾದವುಗಳ ಅರಳ ಮೊಗ್ಗೆಗಳು ಮೆಲ್ಲ ಮೆಲ್ಲನೆ ಅರಳಹತ್ತಿ ಸುತ್ತಲು ಸುಗಂಧವನ್ನು ಬೀರುತ್ತಲಿವೆ. ಆಶ್ರಮದ ಮುಂಭಾಗದ ಪ್ರಶಸ್ತವಾದ ಅಂಗಳವನ್ನು ಸಾರಿಸಿ ಹಾಕಿದ ರಂಗವಲ್ಲಿಗಳು, ಅದೇ ಕಸಬೊಳೆದದ್ದರಿಂದ ಮಸಮುಸಕಾಗಿ ತೋರುತ್ತಲಿವೆ. ಕೃಷ್ಣಾಜಿನ, ದರ್ಭಾಸನಾದಿಗಳು ಸುವ್ಯವಸ್ಥೆಯಿಂದ ಹಾಕಿವೆ. ಅಲ್ಲಿಯೇ ಸಮೀಪದಲ್ಲಿ ಆಶ್ರಮಸ್ಥ ಗೋಗಳು, ಹರಿಣಗಳು ಸ್ವಚ್ಛಂದದಿಂದ ಮೆಲಕಾಡಿಸುತ್ತ ಮಲಗಿಕೊಂಡಿವೆ. ಸತ್ಕರ್ಮ, ಸದ್ವಿಚಾರ, ಸದ್ಬೋಧ, ಸದಾನಂದಗಳಸಮೀಚೀನತೆಯಿಂದ ಆ ಆಶ್ರಮಪದವು ಶಾಂತಿರಸದಿಂದ ತುಂಬಿ ತುಳುಕುತ್ತಲಿದೆ. ಶ್ರೀ ಯಾಜ್ಞವಲ್ಕ್ಯರ ಶಿಷ್ಯವೃಂದದ ಸದ್ವಿದ್ಯಾವ್ಯಾಸಂಗವು ಆಸ್ಥೆಯಿಂದ ಸಾಗಿದೆ. ಚತುರ್ವೇದಗಳ, ಬ್ರಾಹ್ಮಣಗಳ, ಉಪನಿಷತ್ತುಗಳ ಪವಿತ್ರವಾದ ಮಂಜುಲಧ್ವನಿಯು ಕಿವಿಗೆ ಇಂಪಾಗಿ ದೂರದಿಂದ ಕೇಳುತ್ತಲಿದೆ. ಲೋಕಕಲ್ಯಾಣೇಚ್ಛುಗಳಾದ ಭಗವಾನ್ ಯಾಜ ವಲ್ಕ್ಯರು ಅದೇಬಂದು ಸುಖಾಸನದಲ್ಲಿ ವಿಶ್ರಮಿಸಿದ್ದಾರೆ. ಒಂದು ಚಿಗರೆಯಮರಿಯು ಅವರ ಆಸನದ ಬಳಿಯಲ್ಲಿ ಮಲಗಿಕೊಂಡು ಮೆಲಕು ಹಾಕುತ್ತಲಿದೆ. ಅಂಗಳದಲ್ಲಿ ಆಕಳಕರಗಳು, ಸ್ವಚ್ಛಂದದಿಂದ ಹಾರಾಡುತ್ತಿರಲು, ಅವುಗಳ ತಾಯಿಗಳು ಪ್ರೇಮಭರದಿಂದ ಕಿವಿಚಾಚಿ ನೋಡುತ್ತ ಮೆಲಕಾಡಿಸುತ್ತಲಿವೆ. ನಡನಡುವೆ ನವಿಲು, ಗಿಳಿ, ಮೊದಲಾದ ಆಶ್ರಮಸ್ಥ ಪಕ್ಷಿಗಳ ಮಂಜುಲಧ್ವನಿಗಳು ಇಂಪಾಗಿ ಕೇಳುತ ಲಿವೆ. ಅಷ್ಟರಲ್ಲಿ ಭಗವತೀ-ಕಾತ್ಯಾಯನಿಯು ಗೃಹಕೃತ್ಯಗಳನ್ನೆಲ್ಲ ತೀರಿಸಿಕೊಂಡು ಮಕ್ಕಳನ್ನು ಮಲಗಿಸಿ, ನಗೆಮೊಗದಿಂದ ಪತಿಯ ಸನ್ನಿಧಿಗೆ ಪ್ರಾಪ್ತವಾದಳು. ಆ ಪ್ರೇಮಲಸ್ವಭಾವದ ಸಾಧ್ವಿಯನ್ನು ನೋಡಿ ಯಾಜ್ಞವಲ್ಕ್ಯರಿಗೆ ಪರಮಾನಂದವಾಯಿತು. ಅವರು ಅತ್ಯಂತ ಆದರದಿಂದ ತಮ್ಮ ಪ್ರಿಯ ಅರ್ಧಾಂಗಿಯನ್ನು ಕುರಿತು— "ದೇವೀ, ಗೃಹಕೃತ್ಯಗಳೆಲ್ಲ ತೀರಿದವಷ್ಟೆ? ನಿನ್ನಂಥ ಕರ್ತವ್ಯನಿಷ್ಠರಾದ ಪ್ರೇಮಲ ಹೃದಯದ ಸಾಧ್ವಿಯರ ಪ್ರಾಪ್ತಿಯಿಂದಲೇ ಸಂಸಾರವು ಸುಖಮಯವಾಗುವದುಕಂಡೆಯಾ! ಅಸಾರವಾದ ಸಂಸಾರವು ನಿಮ್ಮಂಥವರ ಯೋಗದಿಂದಲೇ ಸಾರಮಯವಾಗುವಲ್ಲಿ ಸಂಶಯವಿಲ್ಲ. ಭಗವತೀ, ಬಾ, ಕುಳಿತುಕೋ. ಕಾರ್ಯದಕ್ಷಳಾದ ನಿನಗೆ ಕೆಲಸದ ದಣಿವಾಗದಿದ್ದರೂ, ನನ್ನ ಹೃದಯವು ಸದಾ ಕೃತಜ್ಞತಾಪೂರ್ಣವಾಗಿರುತ್ತದೆ. ನಿನ್ನ ಯೋಗದಿಂದ ನನ್ನ ಗೃಹಸಾ ಶ ,ಮದ ಮಾರ್ಗವು ಅತ್ಯಂತ ಸುಗಮವಾಗಿ ಹೋಗಿದೆ." ಎಂದು

ನುಡಿಯುತ್ತಿರಲು, ಕಾತ್ಯಾಯನಿಯು ಮುಗುಳುನಗೆನಗುತ್ತ—“ ಇದೆಲ್ಲ ತಮ್ಮ ಮಹಾ ಮಹಿಮೆಯ ಪ್ರಭಾವವಲ್ಲದೆ ಮತ್ತೇನು? ಕಾತ್ಯಾಯನಿಯು ಹ್ಯಾಗಿದ್ದರೂ, ಕಾತ್ಯಾಯನಿಯ ಆಶ್ರಯಸ್ಥಾನವು ಭದ್ರವೂ, ಮಂಗಲಕರವೂ ಆಗಿರುವದಷ್ಟೆ ? ಆಶ್ರಯಸ್ಥಾನದ ಗುಣ ಗಳೇ ಆಶ್ರಿತರಲ್ಲಿ ಬರುವವು.” ಎಂದು ನುಡಿಯುತ್ತ, ಮುನಿಗಳ ಬಳಿಯ ಆಸನದಲ್ಲಿ ಕುಳಿತುಕೊಂಡಳು.

ಮೊದಲೇ ಕಾತ್ಯಾಯನಿಯು ಅತ್ಯಂತ ಪತಿಭಕ್ತಿಪರಾಯಣಳು; ಅದರಲ್ಲಿ ಮೈತ್ರೇ ಯಿಯ ಸಹವಾಸದಿಂದ ತನ್ನ ಪತಿಯಗಂಭೀರವಾದ ಯೋಗ್ಯತೆಯ ಜ್ಞಾನವಾಗ ಹತ್ತಿ ದ್ದರಿಂದ, ಆಕೆಯ ಪ ತಿ ಭ ಕ್ತಿ ಪ ರಾ ಯ ಣ ತೆ ಯು ಪವಿತ್ರ ಜ್ಞಾನಮೂಲವಾಗ ತೊಡಗಿತ್ತು. ತಾನು ಧರ್ಮಾರ್ಥ-ಕಾಮ-ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥ ಗಳನ್ನು ಕೊಡುವ ಕಲ್ಪವೃಕ್ಷರೂಪವಾದ ತಪೋಧನನನ್ನೇ ಆಶ್ರಯಿಸಿದ್ದರಿಂದ, ಧನ್ಯ ಳೆಂದು ಕಾತ್ಯಾಯನಿಯು ಯಾವಾಗಲೂ ಭಾವಿಸುತ್ತಲಿದ್ದಳು. ಆ ಪವಿತ್ರದಂಪತಿ ಗಳು ಪರಸ್ಪರರ ಗುಣಗಣಗಳನ್ನು ಗೌರವಿಸುತ್ತಿರುವಾಗ, ಪರಸ್ಪರರಿಗೆ ಪರಸ್ಪರರು ಅತ್ಯಂತ ಮನೋಹರವಾಗಿ ತೋರಹತ್ತಿದರು. ಭಗವಾನ್ ಯಾಜ್ಞವಲ್ಕ್ಯರು ಮೂವ ತು ವರ್ಷದ ವಯಸ್ಸಿನವರಾಗಿದ್ದರು. ಕಾತ್ಯಾಯನಿಯ ವಯಸ್ಸು ಇಪ್ಪತ್ತೈದು ವರ್ಷದ ಹೊರಗೊಳಗಿರಬಹುದು. ಆ ವೈದಿಕಕಾಲದಲ್ಲಿ ಪ್ರೌಢವಿವಾಹವು ಪ್ರಚಾರದಲ್ಲಿ ತ್ತೆಂದು ವಾಚಕರಿಗೆ ನಾವು ಬರೆದುತಿಳಿಸಲವಶ್ಯವಿಲ್ಲ. ಹೀಗೆ ಪ್ರಬುದ್ಧಸ್ಥಿತಿಯಲ್ಲಿತಮಗೆ ಅನುರೂಪರಾದವರನ್ನು ಆರಿಸಿಕೊಂಡು ದಾಂಪತ್ಯವನ್ನುಂಟುಮಾಡಿಕೊಳ್ಳುತ್ತಿದ್ದವರ ಸಂಸಾರಸುಖವನ್ನು, ಈಗಿನ ಹೀನಕಾಲದ ಮೂಢರಾದ ನಾವು ವರ್ಣಿಸಲು ಶಕ್ತರಾಗ ಬಹುದೆ ? ಇರಲಿ. ನಮ್ಮ ಪೂಜ್ಯರಾದ ಆ ತರುಣ ಋಷಿದಂಪತಿಗಳು ಮೌನದಿಂದ ಪರ ಸ್ಪರರನ್ನು ಅಭಿನಂದಿಸುತ್ತಿರಲು, ಭಗವತೀಕಾತ್ಯಾಯನಿಯು ತನ್ನಪತಿಯನ್ನು ಕುರಿತು—

ಕಾತ್ಯಾಯನಿ—ಭಗವನ್, ಏನಾದರೂ ನಾನು ತಮಗೆ ತಕ್ಕ ಹೆಂಡತಿಯಲ್ಲ. ತಾವು ಬ್ರಹ್ಮಜ್ಞಾನಿಗಳಲ್ಲಿ ಅತ್ಯಂತ ಶ್ರೇಷ್ಠರಾಗಿದ್ದು, ನಾನು ಅತ್ಯಂತ ಸಂಸಾರಾಸಕ್ತ ಳಾಗಿರುವೆನು. ಸಂಸಾರವು ನಶ್ವರವಾದದ್ದೆಂತಲೂ, ಸಾಂಸಾರಿಕ ಸುಖಗಳೆಲ್ಲ ಇಂದ್ರ ಜಾಲದಂತೆ ತೋರಿ ಅಡಗತಕ್ಕವೆಂತಲೂ, ಒಬ್ಬ ಆತ್ಮನು ನಿತ್ಯನೆಂತಲೂ ತಾವು ಜನ ರನ್ನು ಬೋಧಿಸುತಿರುವದನ್ನು ನಾನು ಎಷ್ಟು ಸಾರೆ ಕೇಳಿರುವೆನೋ ಏನೋ! ಆದರೆ ದಿನದಿನಕ್ಕೆ ನನ್ನ ಸಂಸಾರಾಸಕ್ತಿಯು ಹೆಚ್ಚುತ್ತಿರುವದಲ್ಲದೆ, ಕಡಿಮೆಯೆಲ್ಲಿ ಆಗುತ್ತಿರು ವದು ? ಅಜ್ಞಾನಿಗಳಾದ ಕೂಸುಗಳ ಲೀಲೆಯನ್ನು ನೋಡಿ ಜ್ಞಾನಿಗಳು ಕೌತುಕಪಡು ವಂತೆ, ಜ್ಞಾನಿವರ್ಯರಾದ ತಾವು ಪಾಮರಳಾದ ನನ್ನ ಸಂಸಾರಾಸಕ್ತಿಯನ್ನು ನೋಡಿ ಕೌತುಕಪಡುತ್ತಿರಬಹುದು; ಆದರೆ ಅಷ್ಟರಿಂದ ತಮ್ಮ ಅರ್ಧಾಂಗವೆನಿಸಲಿಕ್ಕೆ ನಾನು ಸರ್ವಥಾ ಅಯೋಗ್ಯಳೇ ಸರಿ!

ಯಾಜ್ಞವಲ್ಕ (ಆಶ್ಚರ್ಯದಿಂದ)—ದೇವಿ, ನಿನ್ನ ಬುದ್ಧಿಭೇದವು ಇಂದು ಯಾ- ರಿಂದಾಯಿತು? ಕರ್ತವ್ಯನಿಶ್ಚೆಯಿಲ್ಲದೆ ವೇದಾಂತದ ಬರಿಯ ಹಾಳುಮಾತುಗಳನ್ನಾಡು

ವದರಿಂದ ಏನೂ ಪ್ರಯೋಜನವಿಲ್ಲೆಂಬವನ್ನು ಚನ್ನಾಗಿ ಲಕ್ಷದಲ್ಲಿಡು. ಭೂತಗಳಲ್ಲಿ ಪ್ರಾಣಿಗಳು, ಪ್ರಾಣಿಗಳಲ್ಲಿ ಬುದ್ಧಿಯುಳ್ಳವು. ಬುದ್ಧಿಯುಳ್ಳವುಗಳಲ್ಲಿ ಮನುಷ್ಯರು, ಮನುಷ್ಯರಲ್ಲಿ ಬ್ರಾಹ್ಮಣರು, ಬ್ರಾಹ್ಮಣರಲ್ಲಿ ವಿದ್ವಾಂಸರು, ವಿದ್ವಾಂಸರಲ್ಲಿ ಸುಸಂಸ್ಕೃತ ಬುದ್ಧಿಯುಳ್ಳವರು, ಸುಸಂಸ್ಕೃತಬುದ್ಧಿಯುಳ್ಳವರಲ್ಲಿ ಕರ್ತೃತ್ವಶಾಲಿಗಳು, ಕರ್ತೃತ್ವ ಶಾಲಿಗಳಲ್ಲಿ ಬ್ರಹ್ಮಜ್ಞಾನಿಗಳು ಶ್ರೇಷ್ಠರಿರುವವರಿಂದ, ಕರ್ತೃತ್ವಶಾಲಿಯಾದ ನೀನು ಬ್ರಹ್ಮ ಜ್ಞಾನಕ್ಕೆ ತೀರ ಸಮೀಪಿಸಿರುತ್ತೀ. ನೀನು ಯೋಗ್ಯತಾಸಂಪನ್ನಳಾದ್ದರಿಂದಲೇ ನಿನ್ನನ್ನು ನಾನು ಲಗ್ನವಾಗಿರುವೆನು. ವಶಿಷ್ಠರಿಗೆ ಅರುಂಧತಿಯಂತೆ ನೀನು ನನಗೆ ತಕ್ಕ ಹೆಂಡತಿ ಯಾಗಿರುತ್ತೀ! ನಿನ್ನ ಯೋಗ್ಯತೆಯು ಸಾಮಾನ್ಯವೆಂದು ತಿಳಿಯಬೇಡ. ನೀನು ನನ ಶಕ್ತಿಸರ್ವಸ್ವವಾಗಿರುತ್ತೀ. ನಿನ್ನಂಥ ಕಾರ್ಯದಕ್ಷಳ ಸಹಾಯವಿರುವದರಿಂದಲೇ ನಾನು ಗೃಹಸ್ಥಾಶ್ರಮಿಯಾಗಿರುವೆನು. ನಿನ್ನಂಥ ಗೃಹಿಣಿಯ ಸಹಾಯದಿಂದಲೇ ಯೋಗ್ಯವಾದ ಸಂಸಾರದ ಮಾದರಿಯನ್ನು ಲೋಕಕ್ಕೆ ತೋರಿಸಲಿಕ್ಕೆ ನಾನು ಸಮರ್ಥನಾಗಿರುತ್ತೇನೆ. ದೇಹವಿರುವದರೊಳಗಾಗಿ ಅಭಿಮಾನಬಿಡುವದು ಮಹತ್ವವಾಗಿರುವಂತೆ, ಸಂಸಾರದಲ್ಲಿದ್ದು ಸಂಸಾರಪರಿತ್ಯಾಗ ಮಾಡುವದು ಮಹತ್ವದ್ದಾಗಿರುತ್ತದೆ.

ಕಾತ್ಯಾಯನಿ——ಭಗವನ್, ಪತಿತರನ್ನು ಕ್ಷಣದಲ್ಲಿ ಉದ್ಧರಿಸಲು ಸಮರ್ಥರಾದ ತಮಗೆ ಯಾವದು ತಾನೆ ಅಸಾಧ್ಯವು! ಸಂಸಾರದಲ್ಲಿದ್ದೂ ತಾವು ಸಂಸಾರ ಪರಿತ್ಯಾಗ ವನ್ನು ಮಾಡಿರಬಹುದು; ಆದರೆ ಸಂಸಾರವು ಅಸಾರವಾದದ್ದೂ, ತಿರಸ್ಕರಣೀಯವಾ ದದ್ದೂ ಎಂದು ಜ್ಞಾನಿಗಳು ಹೇಳುವರಲ್ಲ! ಅದರ ಮರ್ಮವೇನು?

ಯಾಜ್ಞವಲ್ಕ್ಯ——ದೇವಿ, ಇರುವಹಾಗೆಇದ್ದರೆ ಯಾವದೂ ಕೆಡಕಲ್ಲ ನೋಡು. ನಿಜವಾದ ಸಂಸಾರಕ್ಕೂ, ನಿಜವಾದ ಪಾರಮಾರ್ಥಕ್ಕೂ ಭೇದವಿಲ್ಲೆಂತಲೂ, ಸಂಸಾರವನ್ನು ಬಿಟ್ಟು ಪರಮಾರ್ಥವನ್ನು ಹಿಡಿಯುವವನೂ, ಪರಮಾರ್ಥವನ್ನು ಬಿಟ್ಟು ಸಂಸಾರ ವನ್ನುಹಿಡಿಯುವವನೂ ಜ್ಞಾನಿಯಲ್ಲೆಂತಲೂ ಅದೇ ಜ್ಞಾನಿಗಳೇ ಹೇಳಿರುವರು. ಸಂಸಾ ರವು ಹೇಯವಾಗಿದ್ದರೆ ವಶಿಷ್ಠಾದಿಗಳು ಸಂಸಾರದ ಅವಲಂಬನವನ್ನು ಯಾಕೆ ಮಾಡುತ್ತಿ ದ್ದರು? ಯಾವ ಸಂಸಾರದಲ್ಲಿ ಆಲಸ್ಯ-ದುರಾಚರಣೆಗಳಿಗೆ ಆಸ್ಪದವಿರುವದಿಲ್ಲವೋ, ಯಾವ ಸಂಸಾರವು ಅತಿಸಂಚಯದಿಂದ ದೂಷಿತವಾಗಿರುವದಿಲ್ಲವೋ, ಯಾವ ಸಂಸಾರವು ಪ್ರೇಮ-ದಯೆಗಳ ಆಗರವಾಗಿರುವದೋ, ಯಾವ ಸಂಸಾರದಲ್ಲಿ ದೇವ,-ಗುರು,-ಪಿತೃ,- ಅತಿಥಿಗಳ ಪೂಜಾ-ಸತ್ಕಾರಗಳು ಯಥಾಸ್ಥಿತವಾಗಿ ಸದಾ ಆಗುತ್ತಿರುವವೋ, ಆ ಸಂಸಾ ರವು ಪರಮಧನ್ಯವೂ, ಅತ್ಯಂತ ಸಾರಯುಕ್ತವೂ, ಶ್ರೇಷ್ಠಗತಿಪ್ರದವೂ ಆಗಿರುವದು. ಭಗವತೀ, ಹೇಳು, ನಿನ್ನಯೋಗದಿಂದ ನಮ್ಮ ಸಂಸಾರದಲ್ಲಿ ಯಾವಮಾತಿನಕೊರತೆಯದೆ? ಸಂಸಾರದ ತಿರಸ್ಕಾರವನ್ನು ನಾನು ಎಂದಾದರೂ ನಿನ್ನ ಮುಂದೆ ಮಾಡಿರುವೆನೆ?ಯಾಕೆ ಮಾಡಲಿ? ನಿನ್ನಯೋಗದಿಂದ ಸಂಸಾರದಲ್ಲಿ ನನಗೆ ಸ್ವರ್ಗಸುಖವು ಪ್ರಾಪ್ತವಾಗಿರುವದು!

ಕಾತ್ಯಾಯನಿ (ಕೈ ಜೋಡಿಸಿ)——ಋಷಿವರ್ಯರಿಗೆ ಈ ದಾಸಳ ಅನಂತ ಪ್ರಣಾ ಮಗಳಿರಲಿ! ಭಗವನ್, ಸಂಸಾರಧರ್ಮಗಳನ್ನು ನಾನು ಅರಿತವಳಲ್ಲ. ಚರಣಸೇವೆಯು

ಪ್ರಭಾವವು ನನ್ನನ್ನು ಪ್ರೇರೇಪಿಸಿದಂತೆ ನಾನು ನಡೆದುಕೊಳ್ಳುತ್ತಿರುವೆನು; ಆದರೆ ದೇಹಾದಿ ಬಾಹ್ಯವಸ್ತುಗಳ ವಿಚಾರದಲ್ಲಿಯೇ ನನ್ನ ಕಾಲಹರಣವಾಗುತ್ತಿರುವದರಿಂದಲೂ, ಅನುಭವದಿಂದ ನಶ್ವರವಾಗಿರುವ ವಸ್ತುಜಾಲಗಳ ಪ್ರಾಪ್ತಿಯಲ್ಲಿಯೇ ನನ್ನ ಮನಸ್ಸು ರಮಿಸುತ್ತಿರುವದರಿಂದಲೂ ಶಾಶ್ವತವಸ್ತುವಿನ ವಿಚಾರದ ಕಡೆಗೆ ನನ್ನ ಮನಸ್ಸು ತಿರುಗುವದೇ ಇಲ್ಲ. ಈ ಸ್ಥಿತಿಯು ನನಗೆ ಹಿತಕರವಾಗಿ ತೋರದಾಗಿದೆ. ಆತ್ಮರೂಪಸತ್ಯವಸ್ತುವಿನ ಚರ್ಚೆಯು ಈ ಪುಣ್ಯಾಶ್ರಮದಲ್ಲಿ ಸದಾ ನನ್ನ ಕಿವಿಗೆ ಬೀಳುತ್ತಿದ್ದರೂ, ಅದರ ಕಡೆಗೆ ನನ್ನ ಮನಸ್ಸು ಹೊರಳದಿರುವದು ಸೋಜಿಗವಲ್ಲವೆ? ಭಗವನ್, ಗುರುವರ, ಹೀಗೆ ನಾನು ಆತ್ಮವಿಚಾರ ವಿಮುಖಳಾಗಿರುವದು ಹಿತಕರವಾಗಬಹುದೋ?

ಯಾಜ್ಞವಲ್ಕ್ಯ——ದೇವಿ, ಹಿತಕರವಾಗುವದೆಂದು ನಾನು ಹೇಗೆ ಹೇಳಲಿ? ನಿತ್ಯವಸ್ತುವಾದ ಆತ್ಮನ ಜ್ಞಾನವನ್ನು ಪಡೆಯದವರಿಗೆ, ಆ ನಿತ್ಯವಸ್ತುವಿನ ವಿಕಾರಗಳೆನಿಸುವ ಬಾಹ್ಯವಸ್ತುಗಳ ನಿಜವಾದ ಜ್ಞಾನವು ಹ್ಯಾಗಾಗಬೇಕು? ತನ್ನ ಜ್ಞಾನವೇ ತನಗಿಲ್ಲದವನಿಗೆ ಪರರಜ್ಞಾನವಾಗಬಹುದೆ? ಮೂಲ ವಸ್ತುವಿಗಿಂತಲೂ ಮೂಲ ವಸ್ತುವಿನ ವಿಕಾರದ ಕಡೆಗೆ ಲೋಕದ ಒಲವು ವಿಶೇಷವಾಗಿರುವದು. ಬಂಗಾರಕ್ಕಿಂತ ಬಂಗಾರದ ಒಡವೆಗಳಲ್ಲಿ ಆಸಕ್ತಿಯು ಹೆಚ್ಚು ಇರುವಂತೆ, ಹತ್ತಿಗಿಂತ ಹತ್ತಿಯಿಂದಾದ ಮನೋಹರ ವಸ್ತ್ರಗಳಲ್ಲಿ ಆಸಕ್ತಿಯು ಹೆಚ್ಚು ಇರುವಂತೆ, ಮೂಲವಾದ ಆತ್ಮವಸ್ತುವಿಗಿಂತ ಆತ್ಮದ ವಿಕಾರಗಳೆನಿಸುವ ಸೃಷ್ಟ ಪದಾರ್ಥಗಳಲ್ಲಿ ಲೋಕದ ಆಸಕ್ತಿಯು ಹೆಚ್ಚು ಇರುವದು. ಈ ಲೌಕಿಕಾಸಕ್ತಿಯಿಂದ ನೀನು ವಿಮುಖಳಾಗಿ ನಿತ್ಯವಸ್ತುವಿನ ಜ್ಞಾನದ ಕಡೆಗೆ ಮನಸ್ಸು ಮಾಡಿದ್ದನ್ನು ನೋಡಿ ನನಗೆ ಬಹಳ ಸಂತೋಷವಾಗುತ್ತದೆ.

ಕಾತ್ಯಾಯನಿ——ಇದಕ್ಕೆಲ್ಲ ತಮ್ಮ ಪುಣ್ಯಪ್ರಭಾವವೇ ಕಾರಣವು; ಆದರೆ ತಮ್ಮಂಥವರ ಚಿರಸಹವಾಸದಲ್ಲಿದ್ದು ಈ ಮೊದಲೆ ನನ್ನ ಮನಸ್ಸು ನಿತ್ಯವಸ್ತುವಿನ ಜ್ಞಾನದ ಕಡೆಗೆ ತಿರುಗದೆಯಿದ್ದದ್ದಕ್ಕಾಗಿಯೂ, ನನ್ನನ್ನು ಬುದ್ಧಿಪೂರ್ವಕ ತಾವು ಜಾಗ್ರತಗೊಳಿಸದೆಯಿದ್ದದ್ದಕ್ಕಾಗಿಯೂ ನನಗೆ ಚಡಪಡಿಕೆಯಾಗಿದೆ; ಸಥಿಯ ಮೂಲಕ ನಾನು ಹೀಗೆ ಆಡುವದು ಅಪರಾಧವಾಗಿರುವದು.

ಯಾಜ್ಞವಲ್ಕ್ಯ— ದೇವಿ, ಅಪರಾಧವೆಂದು ಭಾವಿಸಬೇಡ. ನನ್ನ ಮಾತನ್ನು ಲಕ್ಷವಿಟ್ಟು ಕೇಳು. "नापृष्टः कस्यचिद्ब्रूयात्" ಅಂದರೆ ಕೇಳದೆ ಏನೂ ಹೇಳಬಾರದೆಂಬ ಮನುವಚನದಂತೆ, ಕೇಳದೆ ಹೇಳುವದು ತಪ್ಪಿನಲ್ಲಿ ಬರುವದು. ಕಸಕಾಯನ್ನು ಒತ್ತಿ ಹಣ್ಣು ಮಾಡಿದರೆ ಹಣ್ಣಾಗಬಲ್ಲದೆಯೆ? ಮಾವಿನ ಸಸಿಯು ಬೇಗನೆ ಫಲ ಕೊಡಬೇಕೆಂದು ಚಡಪಡಿಸಿದರೆ ಅದಕ್ಕೆ ಫಲಗಳಾಗಬಹುದೆ? ಯಾವದಕ್ಕಾದರೂ ತಕ್ಕ ಸಮಯವು ಒದಗಬೇಕಾಗುತ್ತದೆ. ಈ ಬುದ್ಧಿಯು ನನಗೆ ಈ ಮೊದಲೆ ಹುಟ್ಟಲಿಲ್ಲೆಂದು ನೀನು ಚಡಪಡಿಸುವದು ಹ್ಯಾಗೆ ಯೋಗ್ಯವಾಗುವದು ಹೇಳು! ವಸ್ತ್ರಾಲಂಕಾರಗಳಲ್ಲಿ, ಸಂತತಿ-ಸಂಪತ್ತುಗಳಲ್ಲಿ ಅತ್ಯಂತ ಆಸಕ್ತರಾದ ಹೆಣ್ಣುಮಕ್ಕಳ ಸಂಸಾರವಾಸನೆಯು ವೇದಾಂತಶ್ರವಣದಿಂದ ನಷ್ಟವಾಗಬಹುದೆ?

ಕಾತ್ಯಾಯನಿ—ಭಗವನ್, ಅಜ್ಞಾನದ ಮೂಲಕ ಮತ್ತೆ ಪ್ರಶ್ನೆ ಮಾಡುವದ ಕ್ಕಾಗಿ ಕ್ಷಮೆ ಬೇಡುವೆನು. ಕಾಲಕ್ಕನುಸರಿಸಿ ಎಲ್ಲ ತಾನೇ ಆಗುತ್ತದೆಂದಬಳಿಕ, ಬಾಹ್ಯಾನುಕೂಲತೆಗಳು ವ್ಯರ್ಥವೆಂದು ಹೇಳಬೇಕಾಯಿತಲ್ಲ!

ಯಾಜ್ಞವಲ್ಕ್ಯ—ಬಾಹ್ಯಾನುಕೂಲತೆಗಳು ವ್ಯರ್ಥವೆಂದು ಹೇಳಬಹುದೇ? ಮಾವಿನ ಸಸೆ ಹಚ್ಚಿ ಅದಕ್ಕೆ ನೀರು-ಗೊಬ್ಬರಗಳನ್ನು ಒದಗಿಸಿಕೊಡದೆ, ತಾನೇ ದೊಡ್ಡದಾಗುವದೆಂದು ಬಿಟ್ಟುಬಿಟ್ಟರೆ ಅದು ದೊಡ್ಡದಾಗಿ ಫಲ ಕೊಡಬಹುದೋ? ಅದರಂತೆ, ಪ್ರಾರಬ್ಧಕರ್ಮಾನುಸಾರಿಯಾಗಿರುವ ಬುದ್ಧಿರೂಪ ವೃಕ್ಷಕ್ಕೆ ಸತ್ಸಮಾಗ ಮವೆಂಬ ದಿವ್ಯಜಲವನ್ನೂ, ತಪಶ್ಚರ್ಯವೆಂಬ ಸಾರಯುಕ್ತ ಗೊಬ್ಬರವನ್ನೂ ಅನು ಕೂಲಿಸಿ ಕೊಡದಿದ್ದರೆ, ಆ ಬುದ್ಧಿರೂಪ ವೃಕ್ಷಕ್ಕೆ ಮೋಕ್ಷರೂಪ ಫಲವು ಹ್ಯಾಗೆ ಬಿಟ್ಟೀತು? ನಿನಗೆ ಇವೆರಡರ ಅನುಕೂಲತೆಯೂ ಪರಿಪೂರ್ಣವಾಗಿರುವದರಿಂದಲೇ ನಿನ್ನ ಬುದ್ಧಿರೂಪ ವೃಕ್ಷವು ಈಗ ಮುಮುಕ್ಷುತ್ವವೆಂಬ ಹೂವು ಬಿಡುತ್ತಿರುವದು.

ಕಾತ್ಯಾಯನಿ—ಅದು ಏನೇ ಇರಲಿ, ಮೈತ್ರೇಯಿಯೆಂಬ ನನ್ನ ಸಖಿಯು ಸಹ ವಾಸದಿಂದ ಈ ಬುದ್ಧಿಯು ನನಗೆ ಹುಟ್ಟಿದ್ದರಿಂದ, ಆಕೆಯ ವಿಯೋಗವು ನನಗೆ ಎಂದೂ ಒದಗದಂತೆ ಮುನಿಗಳು ಅನುಗ್ರಹಿಸಬೇಕು.

ಯಾಜ್ಞವಲ್ಕ್ಯ—ಕಾತ್ಯಾಯನಿ, ಇದೇನು ನಿನ್ನ ಬೇಡಿಕೆಯು! ಮೈತ್ರೇ ಯಿಯು ವಿಯೋಗವಾಗದಂತೆ ನಾನು ಅನುಗ್ರಹಿಸುವದು ಹ್ಯಾಗೆ? ನಾಳೆ ವಿವಾಹಾ ನಂತರ ಮೈತ್ರೇಯಿಯು ತನ್ನ ಪತಿಯನ್ನು ಹಿಂಬಾಲಿಸಿ ಹೋಗತಕ್ಕವಳಲ್ಲವೆ?

ಕಾತ್ಯಾಯನಿ—ಭಗವನ್, ನನ್ನ ಅತಿಪ್ರಸಂಗದೋಷವನ್ನು ಎಣಿಸಬಾರದು. ಮೈತ್ರೇಯಿಯು "ಮಾಡಿದರೆ ತಮ್ಮ ಪಾಣಿಗ್ರಹಣವನ್ನೇ ಮಾಡಬೇಕು, ಇಲ್ಲದಿದ್ದರೆ ಆಜನ್ಮಬ್ರಹ್ಮಚರ್ಯದಿಂದ ಇರಬೇಕು" ಎಂದು ನಿಶ್ಚಯಿಸಿರುವಂತೆ ನಾನು ಅನ್ಯಮುಖ ದಿಂದ ಕೇಳಿದ್ದೇನೆ; ಯೋಗ್ಯಪತಿಯು ದೊರೆಯದಿದ್ದರೆ, ನಾನು ನನ್ನ ಅಬಚಿಯಾದ ಗಾರ್ಗಿಯಂತೆ ಬ್ರಹ್ಮಚರ್ಯದಿಂದಲೇ ಇರುವೆನೆಂದು ಸ್ವತಃ ಮೈತ್ರೇಯಿಯೇ ನನ್ನ ಮುಂದೆ ಹೇಳಿದ್ದಾಳೆ. ಅಂದಬಳಿಕ ತಾವು ಮೈತ್ರೇಯಿಯ ಪಾಣಿಗ್ರಹಣವನ್ನು ಮಾಡಿ ನನಗೆ ಆಕೆಯ ಚಿರಸಹವಾಸವನ್ನು ಯಾಕೆ ಒದಗಿಸಿಕೊಡಬಾರದು?

ಯಾಜ್ಞವಲ್ಕ್ಯ (ಆಶ್ಚರ್ಯದಿಂದ)—ಇದೊಂದು ನಿನ್ನ ವಿಲಕ್ಷಣಬೇಡಿಕೆಯು! ನೀನು ಜಾಲಿಯಬಿತ್ತಿಕಾಲಿಗೆಮೂಲಮಾಡಿಕೊಳ್ಳುತ್ತಿರುವಂತೆ ನನಗೆ ತೋರುತ್ತದೆ. ಇಬ್ಬರು ಹೆಂಡಿರಿಂದ ಸಂಸಾರದ ಸವಿಯೇ ಕೆಟ್ಟುಹೋಗುವದೆಂಬದು ನಿನಗೆ ಗೊತ್ತಿಲ್ಲವೆ? ಕಾತ್ಯಾ ಯನೀ, ನಾನು ಮೈತ್ರೇಯಿಯ ಪಾಣಿಗ್ರಹಣ ಮಾಡಿದರೆ ನಿನಗೆ ಸಮ್ಮತವಾಗುವದೆ?

ಕಾತ್ಯಾಯನಿ—ಸಮ್ಮತವಾಗದೇನುಮಾಡುವದುಮಹಾರಾಜ, ಈ ಸುಯೋ ಗವು ಒದಗಿದರೆ ನನ್ನ ಸಖಿಯ ಮನೋದಯವು ಪೂರ್ಣವಾದಂತಾಗಿ, ನನಗೆ ಆಕೆಯ ಚಿರಸಹವಾಸವು ಒದಗಿದಹಾಗಾಗುವದು. ಈ ಯೋಗವು ಒದಗದಿದ್ದರೆಮಾತ್ರ ನನಗೆ ಒಂದು ಬಗೆಯ ವ್ಯಸನವಾಗುವದು.

ಯಾಜ್ಞವಲ್ಕ್ಯ — ದೇವೀ, ವಿಚಾರಮಾಡು. ಸವತಿಮತ್ಸರವು ಕೆಟ್ಟದು. ನಾನು ಮೈತ್ರೇಯಿಯ ಪಾಣಿಗ್ರಹಣಮಾಡುವದರಿಂದ ನಿನ್ನಲ್ಲಿ ಆಕೆಯ ವಿಷಯದ ಮತ್ಸರವು ನಿಶ್ಚಯವಾಗಿ ಉತ್ಪನ್ನವಾಗುವದು.

ಕಾತ್ಯಾಯನಿ — ದ್ವೈತಭಾವವಿದ್ದರೆ ಸವತಿಮತ್ಸರವಷ್ಟೆ? ನನಗೂ ಮೈತ್ರೇಯಿಗೂ ದ್ವೈತಭಾವವು ಉತ್ಪನ್ನವಾಗುವ ಹಾಗೆಂಬೋ ಇಲ್ಲ. ವಿಷಯಸುಖಾಪೇಕ್ಷಿಗಳಲ್ಲಿ ಮತ್ಸರವು. ಅದೇಮೂಲತಃ ನಮ್ಮಲ್ಲಿರುವದಿಲ್ಲ. ನಾನು ಪತಿಯು ದೈವತವೆಂದು ತಿಳಿದು, ಪತಿಮೂಲವಾದ ಸಂಸಾರವನ್ನು ಪತಿಸೇವೆಯೆಂದು ತಿಳಿದು ಅನಾಸಕ್ತಿಯಿಂದ ನಡಿಸುತ್ತಿರುವೆನು. ಮೈತ್ರೇಯಿಯಂತು ಜ್ಞಾನಲುಬ್ಧಳಾಗಿ ಕೇವಲ ನಿಮ್ಮಮೇಲಿನ ಭಕ್ತಿಯಿಂದ ನಿಮ್ಮ ಪಾಣಿಗ್ರಹಣಮಾಡುವಳು; ನಾನು ಇನ್ನುಮೇಲೆ ಮೈತ್ರೇಯಿಯ ಹೆಜ್ಜೆಯಮೇಲೆ ಹೆಜ್ಜೆ ಯನ್ನಿಟ್ಟು ನಡೆಯತಕ್ಕವಳು. ಅಂದಬಳಿಕ ನಮ್ಮಲ್ಲಿ ಮಾತ್ಸರ್ಯವು ಹ್ಯಾಗೆ ಉತ್ಪನ್ನವಾಗುವದು? ಮೇಲಾಗಿ ನನ್ನಮೇಲೆ ತಮ್ಮ ಅಪಾರವಾದ ಪ್ರೇಮವಿರುತ್ತದೆಂಬದನ್ನು ನಾನು ಬಲ್ಲೆನು. ನನ್ನಮೇಲಿನ ತಮ್ಮ ಪ್ರೇಮವು ಯಾತರಿಂದಲೂ ಕಡಿಮೆಯಾಗುವಹಾಗಿಲ್ಲ. ಇದರಿಂದಲೂ ಮಾತ್ಸರ್ಯದ ಉತ್ಪತ್ತಿಗೆ ಆಸ್ಪದವು ದೊರೆಯುವಹಾಗಿಲ್ಲ!

ಯಾಜ್ಞವಲ್ಕ್ಯ — ದೇವೀ, ವಿಚಾರಕ್ಕೂ ಪ್ರತ್ಯಕ್ಷಆಚಾರಕ್ಕೂ ಅಂತರವಿರುವದು. ನಿನ್ನ ಮಾತುಗಳು ಕೇಳಲಿಕ್ಕೆ ಬಲು ಸಮರ್ಪಕವಾಗಿವೆ. ಅದರಂತೆ ನಡೆಯಲುಮಾತ್ರ ಶಕ್ಯವಾಗಿರುವದಿಲ್ಲ. ನಿನಗಿಂತ ಮೈತ್ರೇಯಿಯನ್ನು ನಾನು ವಿಶೇಷವಾಗಿ ಪ್ರೀತಿಸಲಿಕ್ಕಿಲ್ಲವೆಂದು ನೀನು ಹ್ಯಾಗೆ ತಿಳಿದುಕೊಳ್ಳುವಿ? ಈ ತಿಳುವಳಿಕಿಯಿಂದಲೇ ನೀನು ಮೋಸಹೋದಿ! ಕದಾಚಿತ್ ನನ್ನ ಪ್ರೇಮವು ಮೈತ್ರೇಯಿಯಮೇಲೆ ದಿನದಿನಕ್ಕೆ ಹೆಚ್ಚುತ್ತಹೋಗಿ, ಅದರಿಂದ ನಿನ್ನಲ್ಲಿ ಮಾತ್ಸರ್ಯವು ಉತ್ಪನ್ನವಾಗುವ ಸಂಭವವಿರುತ್ತದೆ.

ಕಾತ್ಯಾಯನಿ — ಭಗವನ್ ಕ್ಷಮಿಸಬೇಕು. ಮೈತ್ರೇಯಿಯ ವಿಷಯವಾಗಿ ನಾನು ಹೊಟ್ಟೆಕಿಚ್ಚುಪಡುವದು ಸರ್ವಥಾ ಶಕ್ಯವಿರುವದಿಲ್ಲ. ನಿಮ್ಮ ಕಾತ್ಯಾಯನಿಯು ಅಷ್ಟು ಗ್ರಾಮ್ಯಸ್ತ್ರೀಯಾಗಿರಬಹುದೆ? ಮುಖ್ಯವಾಗಿ, ಪತಿಗೆ ಅತ್ಯಂತಪ್ರಿಯವಾದ ವಸ್ತುವಿನ ವಿಷಯವಾಗಿ ಸತಿಯು ಮತ್ಸರಪಡಬಹುದೆ? ಹೀಗೆ ಪತಿಯ ಒಲವಿನ ವಿರುದ್ಧವಾಗಿ ನಡೆಯುವವಳು ಸತಿಯು ಹ್ಯಾಗೆ! ಪತಿ–ಪತ್ನಿಗಳ ದೇಹಗಳು ಭಿನ್ನವಾಗಿದ್ದರೂ ಅವರ ಆತ್ಮಗಳಲ್ಲಿ ಏಕರೂಪತೆಯಿರುವದಷ್ಟೆ? ಅಂದಬಳಿಕ, ಮೈತ್ರೇಯಿಯ ಮೇಲೆ ನಿಮ್ಮ ಪ್ರೇಮವು ಹೆಚ್ಚಾದಮಾನದಿಂದ, ಮೈತ್ರೇಯಿಯ ಮೇಲಿನ ನನ್ನ ಪ್ರೇಮವು ಹೆಚ್ಚದೆ ಹ್ಯಾಗೆಯಿದ್ದೀತು! ನಾನು ತಮ್ಮ ಸಹಧರ್ಮಿಣಿಯಲ್ಲವೆ? ನಿಮಗೆ ಪ್ರಿಯವಾದದ್ದು ನನಗೆ ಪ್ರಿಯವು, ನಿಮಗೆ ಅಪ್ರಿಯವಾದದ್ದು ನನಗೆ ಅಪ್ರಿಯವು!

ಯಾಜ್ಞವಲ್ಕ್ಯ — ದೇವೀ, ನಿನ್ನ ಮಾತನ್ನು ನಾನು ಅಲ್ಲಗಳೆಯಲಾರೆನು. ನೀನು ಅಂಥ ಸಜ್ಜನಳೆಂಬದನ್ನು ನಾನು ಬಲ್ಲೆನು; ಆದರೆ ಮೈತ್ರೇಯಿಯು ತಾರುಣ್ಯದಮೂಲಕ ಅವಿವೇಕಿಯಾಗಿ ಮಾತ್ಸರ್ಯತಾಳಿದರೆ ಮಾಡುವದೇನು!

ಕಾತ್ಯಾಯನಿ — ಅದಂತು ಶಕ್ಯವೇ ಇರುವದಿಲ್ಲ. ನನಗಿಂತಲೂ ಮೈತ್ರೇಯಿಯು ಹೆಚ್ಚಿನಯೋಗ್ಯತೆಯುವಳೆಂಬದನ್ನು ನಾನು ಬಲ್ಲೆನು. ಆಕೆಯ ಸಹವಾಸ ದಿಂದಲೇ ನನಗೆ ಪಾರಮಾರ್ಥಿಕ ಜಾಗ್ರತಿಯು ಉತ್ಪನ್ನವಾಗಿರುತ್ತದೆ. ಇದರಮೇಲೆಯೂ ಕಾರುಣ್ಯದಮೂಲಕ ಆಕೆಯು ಅವಿವೇಕಿಯಾಗಿ ನಡೆದುಕೊಂಡರೆ, ಭಗವನ್, ತಮ್ಮ ಸಹವಾಸದ ಮಹಿಮೆಯು ಆಕೆಯಲ್ಲಿ ವಿವೇಕವನ್ನು ಹುಟ್ಟಿಸದೆ ಯಿರುವದೆ! ತಮ್ಮ ಸಹವಾಸಕ್ಕೆ ಹಣೆಯುದಂಥ ಯೋಗ್ಯತಾಹೀನಳು ಮೈತ್ರೇಯಿಯು ಆಗಿದ್ದರೆ, ಆಕೆಯು ಶ್ರೀಯಾಜ್ಞವಲ್ಕ್ಯಪತ್ನಿಯು, ಕಾತ್ಯಾಯನಿಯ ಸಂಸಾರಾಸಕ್ತಮನಸ್ಸನ್ನು ಜಾಗ್ರತೆಗೊಳಿಸಲು ಸಮರ್ಥಳಾಗಬಹುದೆ?

ಯಾಜ್ಞವಲ್ಕ್ಯ — ಸರಿಸರಿ, ನಿನ್ನಮಾತು ಒಪ್ಪತಕ್ಕದ್ದು! ಆದರೂ ಇನ್ನಷ್ಟು ವಿಚಾರಮಾಡು. ಮಹತ್ವದ ಕಾರ್ಯದಲ್ಲಿ ದುಡುಕುವದು ಹಿತಕರವಾಗದು. ಇಬ್ಬರು ಹೆಂಡಿರನ್ನು ಮಾಡಿಕೊಳ್ಳುವದು, ನನಗಂತು ಹಿತಕರವಾಗಿ ತೋರುವದಿಲ್ಲ. ಏಕಪತ್ನೀ ವ್ರತದ ಮಹತ್ವವು ಹೆಚ್ಚಿನದಿರುತ್ತದೆ.

ಕಾತ್ಯಾಯನಿ — ಭಗವನ್, ಕಾತ್ಯಾಯನಿಯಾದರೂ ಏಕಪತ್ನೀವ್ರತದ ಮಹಿಮೆಯನ್ನು ಅರಿಯದೆ ಇರಬಹುದೆ? ಬಹುಪತ್ನೀಕರ ಸಂಸಾರವು ಸ್ವಾರಸ್ಯಹೀನವಾಗುವದೆಂಬದು ಪ್ರಸಿದ್ಧವು. ಅಂಥ ಅಯೋಗ್ಯ ವ್ಯವಹಾರಕ್ಕೆ ಶ್ರೀ ಯಾಜ್ಞವಲ್ಕ್ಯರ ಪತ್ನಿಯು ಸರ್ವಥಾ ಉತ್ತೇಜನ ಕೊಡಲಾರಳು.

ಯಾಜ್ಞವಲ್ಕ್ಯ — ಹಾಗಾದರೆ ಮೈತ್ರೇಯಿಯ ಪಾಣಿಗ್ರಹಣಮಾಡಲಿಕ್ಕೆ ನನ್ನ ಮನಸ್ಸನ್ನು ತಿರುಗಿಸಲು ಯಾಕೆ ಯತ್ನಿಸುವೆ?

ಕಾತ್ಯಾಯನಿ — ಅದರಿಂದ ಏಕಪತ್ನೀವ್ರತಕ್ಕೆ ಭಂಗಬರುವದಿಲ್ಲೆಂದು!

ಯಾಜ್ಞವಲ್ಕ್ಯ — ಅದು ಹ್ಯಾಗೆ?

ಕಾತ್ಯಾಯನಿ — ಭಗವನ್, ಪಾಮರಳಾದ ಪತ್ನಿಯಲ್ಲಿ ತಮ್ಮ ಪ್ರೇಮವಾತ್ಸಲ್ಯಗಳೆಷ್ಟು! ಸರ್ವಜ್ಞರಾದ ತಾವು ಬಾಲಭಾವದ ನನ್ನ ಉತ್ತರದಿಂದ ಕೌತುಕ ಪಡುವದಕ್ಕಾಗಿ ಗೊತ್ತಿಲ್ಲದವರಂತೆ ಪ್ರಶ್ನಮಾಡುವಿರಲ್ಲ! ಅಜ್ಞಾನವನ್ನು ದೂರಮಾಡಿಕೊಳ್ಳಲಿಕ್ಕೆ ಇದಕ್ಕೂ ಹೆಚ್ಚಿನ ಸುಪ್ರಸಂಗವು ನನಗೆ ಬೇರೆ ಯಾವದು ಒದಗಬಹುದು? ತಮ್ಮ ಪ್ರಶ್ನೆಗೆ ಉತ್ತರಕೊಡುವಾಗ ನನ್ನ ಮನೋವೃತ್ತಿಯು ಉಜ್ವಲಭಾವನಾಯುಕ್ತವಾದದ್ದರಿಂದ ನನಗೆ ಪರಮಾನಂದವಾಗಿರುವದು. ಮುನಿವರ್ಯ, ದೇವ-ದ್ವಿಜಾಗ್ನಿ ಸಾಕ್ಷಿಯಿಂದ ಪಾಣಿಗ್ರಹಣಮಾಡಿ ಪತ್ನಿಯರೆಂಬ ಗೌರವದ ಪದವಿಯನ್ನು ಪಡೆದ ನಾವಿಬ್ಬರು, ಗಂಗಾಯಮುನೆಗಳ ಪ್ರವಾಹಗಳು ಸಮುದ್ರಗಮನ ಭರದಲ್ಲಿ ತಮ್ಮ ದ್ವೈತಭಾವದ ಪರಿವೆಯಿಲ್ಲದೆ ಏಕರೂಪಹೊಂದಿ ಕಡೆಗೆ ಸಮುದ್ರದಲ್ಲಿ ಲೀನವಾಗಿ ಹೋಗುವಂತೆ, ತಮ್ಮ ಸೇವೆಯಿಂದ ಕೃತಾರ್ಥರಾಗುವ ಭರದಲ್ಲಿ ನಾವು ಸ್ವತ್ವವನ್ನು ಮರೆತು ಏಕರೂಪರಾಗಿ ಕಡೆಗೆ ತಮ್ಮಲ್ಲಿ ಲೀನವಾಗಿ ಹೋಗುವೆವು! ಅಂದಬಳಿಕ, ಕಾತ್ಯಾಯನಿಯೂ, ಮೈತ್ರೇಯಿಯೂ ಈಗ ಭಿನ್ನ ವ್ಯಕ್ತಿಗಳಾಗಿ ತೋರಿದರೂ ಮೈತ್ರೇಯಿಯ ವಿವಾಹಾನಂತರ ಅವರು ತತ್ವತಃ

ಭಿನ್ನವಾಗಿ ಹ್ಯಾಗೆ ಉಳಿದಾರು ? ಅಂದಬಳಿಕ ನಮ್ಮಿಬ್ಬರ ವಿವಾಹದಿಂದ ತಾವು ಬಹು ಪತ್ನೀಕರು ಹ್ಯಾಗಾಗುವಿರಿ ?

ಯಾಜ್ಞವಲ್ಕ್ಯ—ಕಾತ್ಯಾಯನೀ, ನೀನು ಧನ್ಯಳೆಂಬದಿಷ್ಟೇ ಅಲ್ಲ, ನಿನ್ನ ಪಾಣಿ ಗ್ರಹಣ ಮಾಡಿದ ನಾನೂ ಪರಮಧನ್ಯನು ! ನಿಮ್ಮಂಥ ಸಾಧ್ವಿಯರ ಯೋಗದಿಂದ ಗೃಹಸ್ಥಾಶ್ರಮವೂ ಧನ್ಯವಾಗಿ ಹೋಗಿರುವದು; ಆದರೆ ನಿನ್ನ ಮಾತು ವ್ಯವಹಾರದಲ್ಲಿ ಅನುಭವಕ್ಕೆ ಬರುತ್ತಿರುವದೆಯೆ ?

ಕಾತ್ಯಾಯನಿ—ಬರುತ್ತಿರುವದೆಂದು ಹ್ಯಾಗೆ ಹೇಳಲಿ ಮಹಾರಾಜ! ತಮ್ಮಂಥ ಮಹನೀಯರಲ್ಲದ ಸ್ವಾರ್ಥಪರಾಯಣರಾದ ಏಕಪತ್ನೀಕರುಕೂಡ ಬಹುಪತ್ನೀಕರಂತೆ ದುಃಖಪಡುವದನ್ನು ನೋಡುತಿರುವಾಗ, ಬಹು ಕನ್ಯಾಪಾಣಿಗ್ರಹಣವು ಹಿತಕರವಾಗು ವದೆಂದು ಹೇಳಲಿಕ್ಕೆ ನನ್ನ ಬಾಯಿಯಾದರೂ ಹ್ಯಾಗೆ ಏಳಬೇಕು? ಎಲ್ಲ ಬಗೆಯಿಂದ ಗಂಡ ನನ್ನು ಅನುಸರಿಸಿ ಅಭೇದವಾಗಿ ವರ್ತಿಸಿದ ಸ್ವಾರ್ಥಪರಾಯಣಳಾದ ಹೆಂಡತಿಯು, ಗಂಡನೊಡನೆ ಒಮ್ಮೆ ಪ್ರೇಮದಿಂದ, ಒಮ್ಮೆ ಸಿಟ್ಟಿನಿಂದ, ಒಮ್ಮೆ ಔದಾಸೀನ್ಯದಿಂದ, ಒಮ್ಮೆ ದುರಭಿಮಾನದ ಅಹಂಕಾರದಿಂದ, ಮತ್ತೊಮ್ಮೆ ಮತ್ತೊಂದು ವಿಧದಿಂದ ವರ್ತಿಸು ವದರಿಂದ, ಬಹುರೂಪಿಯಾಗಿ ಏಕಪತ್ನೀತ್ವಕ್ಕೆ ಬಾಧೆ ತರುವಳು! ಭಗವನ್ ಈ ದೃಷ್ಟಿ ಯಿಂದ ವಿಚಾರ ಮಾಡಿದರೆ, ಜಗತ್ತಿನಲ್ಲಿ ಏಕಪತ್ನೀತ್ವವು ಅಪರೂಪವೆಂದು ಹೇಳಬೇಕಾ ಗುವದು. ಸಮುದ್ರನಾಥನು ಎಲ್ಲ ನದೀಪತ್ನಿಯರನ್ನು ಸಮನಾಗಿ ಪ್ರೀತಿಸಿ, ಅವರೆಲ್ಲ ರನ್ನೂ ತನ್ನ ಗಾಂಭೀರ್ಯದಿಂದ ಏಕೀಕರಿಸಿ ತನ್ನೊಳಗೆ ಲೀನಮಾಡಿಕೊಳ್ಳುವಂತೆ, ಮಹಾಮಹಿಮರಾದ ಮುನೀಂದ್ರರು ತಾವು ನಮ್ಮಿಬ್ಬರನ್ನು ಏಕೀಕರಿಸಿ ಲೀನಮಾಡಿ ಕೊಳ್ಳಲು ಸಮರ್ಥರಿರುವಾಗ, ಬಹುಪತ್ನೀಕತ್ವದ ದೋಷವು ಹ್ಯಾಗೆ ಬಾಧಿಸುವದು! ಎಲ್ಲ ಹೆಂಡಿರನ್ನು ಸರಿಯಾಗಿ ಪ್ರೀತಿಸಲು ಸಮರ್ಥನಾದ ಪತಿಯು, ವಿಶೇಷತರದ ಉದಾ ತ್ತೋದ್ದೇಶದಿಂದ ಎಷ್ಟು ಜನ ಹೆಂಡಿರನ್ನು ಮಾಡಿಕೊಂಡರೇನು ? ಮೈತ್ರೇಯಿಯಂಥ ಉದಾತ್ತ ವಿಚಾರದ ಸಖಿಯು ಬ್ರಹ್ಮಚರ್ಯದಿಂದಿರುವದಕ್ಕಿಂತ ತಮ್ಮಂಥ ಮಹಾತ್ಮರ ಪಾಣಿಗ್ರಹಣಮಾಡಿ ಗೃಹಸ್ಥಾಶ್ರಮಿಯಾಗಿರುವದು ನನಗೆ ಸಮರ್ಪಕವಾಗಿ ತೋರು ವದು. ಮೈತ್ರೇಯಿಯು ತಮ್ಮ ಪಾಣಿಗ್ರಹಣವನ್ನು ಮನಃಪೂರ್ವಕವಾಗಿ ಬಯಸು ವಳು. ಅದು ಸಾಧಿಸದ ಪಕ್ಷದಲ್ಲಿ ಬ್ರಹ್ಮಚರ್ಯದಿಂದ ಕಾಲಹರಣ ಮಾಡುವಳು. ಹೀಗೆ ಅನನ್ಯಗತಿಕಳಾಗಿರುವ ಗುಣಾಢ್ಯಳಾದ ಅಬಲೆಗೆ ಆಶ್ರಯವಿತ್ತು, ಆಕೆಯನ್ನು ಕೃತಾರ್ಥಳಾಗ ಮಾಡುವದು ತಮ್ಮಂಥ ದಯಾಸಾಗರರಿಗೆ ಭೂಷಣವಾಗಿರುವದು. ಮಹಾಜ್ಞಾನಿಗಳಾದ ತಾವು ಲೋಕಕ್ಕೆ ಗೃಹಸ್ಥಾಶ್ರಮದ ಪ್ರಶಸ್ತ ಮಾರ್ಗವನ್ನು ತೋರಿ ಸುವದಕ್ಕಾಗಿಯೇ ಗೃಹಸ್ಥಾಶ್ರಮಿಗಳಾಗಿರುವದರಿಂದ, ಇಂದಿನ ವರೆಗೆ ಏಕಪತ್ನೀಕರಾಗಿ ಏಕಪತ್ನೀವ್ರತವನ್ನು ಪಾಲಿಸಿ ತೋರಿಸಿದಂತೆ, ಇನ್ನು ಮೇಲೆ ಬಹುಪತ್ನೀಕರಾಗಿಯೂ ಏಕಪತ್ನೀವ್ರತದಿಂದ ಆಚರಿಸುವ ಗಂಭೀರ ಮಾರ್ಗವನ್ನೂ ಜಗತ್ತಿಗೆ ತೋರಿಸಬೇಕೆಂದು ಪಾಮರಳಾದ ನಾನು ಅತ್ಯಂತವಾದ ಸಖ್ಯಿಯಿಂದ ಸೆರಗೊಡ್ಡಿಬೇಡಿಕೊಳ್ಳುವೆನು. ಭಗ

ವನ್, ನೀವಲ್ಲದೆ ಮತ್ತೆ ಯಾರು ಈ ಗಂಭೀರ ಮಾರ್ಗವನ್ನು ತೋರಿಸಲು ಸಮರ್ಥರಾಗುವರು?

ಯಾಜ್ಞವಲ್ಕ್ಯ—ದೇವಿ, ಅತ್ಯಂತ ವಿನಯಶೀಲಳಾದ ನೀನು ಪತಿಯಾದ ನನ್ನ ಮಹಿಮೆಯನ್ನು ವರ್ಣಿಸಿದ್ದು ಸ್ವಾಭಾವಿಕವೇ ಸರಿ; ಆದರೆ ನಿನ್ನ ಯೋಗದಿಂದಲೇ ಪವಿತ್ರನಾಗಿ ಗೃಹಸ್ಥಾಶ್ರಮದ ಕರ್ತವ್ಯಗಳನ್ನೆಲ್ಲ ಅಬಾಧಿತವಾಗಿ ನಡಿಸುವ ನಾನು, ನಿನ್ನ ಘನತರವಾದ ಯೋಗ್ಯತೆಯನ್ನು ವರ್ಣಿಸುವದು ನಿನಗೆ ಸಂಕೋಚಕರವಾಗಿ ತೋರೀತು! ನಿನ್ನ ಉದಾತ್ತವಿಚಾರಕ್ಕಾಗಿ ನಾನು ಪರಮ ಸಂತುಷ್ಟನಾಗಿದ್ದೇನೆ. ಸತೀಶಿರೋಮಣಿಯಾದ ಅರುಂಧತಿಯೊಡನೆ ಪುಣ್ಯಾಹವಾಚನದಲ್ಲಿ* ನಿನ್ನ ಪರಿಗಣನೆಯಾಗಲಿ! ಭಗವತಿ, ನಿನ್ನಂಥ ಸತಿಯರ ಯೋಗ್ಯತೆಯು ಸಾಮಾನ್ಯವಾದದ್ದಲ್ಲ. ಪರ್ಯಾಯದಿಂದ ನಿನ್ನ ಮುಖದಿಂದಲೇ ಅದು ಪ್ರಕಟವಾಗಿರುವದರಿಂದ ಅದನ್ನು ನಾನು ಮತ್ತೆ ವರ್ಣಿಸುವದಿಲ್ಲ. ಆಗಲಿ, ನಾನು ಅವಶ್ಯವಾಗಿ ಮೈತ್ರೇಯಿಯ ಪಾಣಿಗ್ರಹಣ ಮಾಡುವೆನು. ಸಾಕ್ಷಾತ್ತ್ರಿಪುರಾರಿಯನ್ನು ಪಾರ್ವತಿಯೂ, ಭೋಗವತಿಯೂ ಆಶ್ರಯಿಸಿ ಶೋಭಿಸುತ್ತಿರುವಂತೆ, ನೀವಿಬ್ಬರೂ ನನ್ನನ್ನು ಆಶ್ರಯಿಸಿ ಶೋಭಿಸಿರಿ!

ಕಾತ್ಯಾಯನಿ— ಭಗವನ್, ಅಲಭ್ಯವರಪ್ರದಾನಪೂರ್ವಕವಾಗಿ ತಾವು ಮೈತ್ರೇಯಿಯ ಪಾಣಿಗ್ರಹಣಕ್ಕೆ ಒಪ್ಪಿದ್ದರಿಂದ ನಾನು ಕೃತಕೃತ್ಯಳಾದೆನು. ನಮ್ಮ ಈ ಕಲ್ಯಾಣಪ್ರದವಾದ ಸಂವಾದವು ನಿಮ್ಮ ಪ್ರಸಾದರೂಪವಾಗಿರುವದರಿಂದ ಅದನ್ನು ಓದುವವರ ಇಷ್ಟಾರ್ಥಗಳು ಸಿದ್ಧಿಸಲಿ!!

ಯಾಜ್ಞವಲ್ಕ್ಯ—ಆಗಲಿ, ಇಷ್ಟಾರ್ಥಪ್ರದರೂಪರಾದ ನಿನ್ನಂಥ ಸಾಧ್ವೀಶ್ರೇಷ್ಠರ ಪರಂಪರೆಯು ಈ ಭರತಭೂಮಿಯಲ್ಲಿ ಸ್ಥಿರವಾಗಿರಲಿ! ಮನೆಮನೆಗೆ ಕಾತ್ಯಾಯನಿಯ ಗುಣಪ್ರಭಾವವು ಪ್ರಕಾಶಿಸಲಿ!!

## ೫ ನೆಯ ಪ್ರಕರಣ.

## ಶರಣೋಪಾಯ.

ಭಗವಾನ್ ಯಾಜ್ಞವಲ್ಕ್ಯರು ಮೈತ್ರೇಯಿಯ ಪಾಣಿಗ್ರಹಣ ಮಾಡಿ ಇಬ್ಬರ ಹೆಂಡಿರೊಡನೆ ಅತ್ಯುಜ್ವಲತೆಯಿಂದ ಗೃಹಸ್ಥಾಶ್ರಮ ಧರ್ಮವನ್ನು ಪಾಲಿಸಹತ್ತಿದರು ಮಹಾತ್ಮರ ಮನಸ್ಸಿನಲ್ಲಿ, ಮಾತಿನಲ್ಲಿ, ಕೃತಿಯಲ್ಲಿ ಏಕರೂಪತೆ ಇರುವದೆಂಬುದು ಸುಳ್ಳಲ್ಲ ಭಗವತೀ ಕಾತ್ಯಾಯನಿಯು ತಾನು ಪತಿಯ ಮುಂದೆ ಪತ್ನೀಧರ್ಮವನ್ನು ಪ್ರತಿಪಾದಿಸಿ

---

* ಬ್ರಾಹ್ಮಣರು ಪುಣ್ಯಾಹವಾಚನದಲ್ಲಿ "ಅರುಂಧತೀ ಪುರೋಗಾ ಏಕಪತ್ನ್ಯಃ ಪ್ರೀಯಂತಾಂ, ಭಗವತೀ ಕಾತ್ಯಾಯನೀ ಪ್ರೀಯತಾಂ" ಎಂದು ಪಠಿಸುವದು ಪ್ರಸಿದ್ಧವಾಗಿರುವದು.

ದಂತೆ ಅಕ್ಷರಶಃ ಕಡೆತನಕ ನಡೆದಳು. ಮೈತ್ರೇಯಿಯೂ ಕಾತ್ಯಾಯನಿಯ ವಿಷಯವಾಗಿ ಮಾತ್ಸರ್ಯತಾಳಲಿಲ್ಲ. ಅವರ ಪರಸ್ಪರರ ಪ್ರೇಮಭಾವವು ಕಡೆತನಕ ಅಖಂಡವಾಗಿ ಉಳಿಯಿತು. ನಿಸ್ಪೃಹರಾದ ಮಹಾತ್ಮರ ಆಚರಣೆಯು ಹೀಗೆಯೇ ಸರಿ. ಇಂಥ ಉದಾತ್ತಭಾವದ ಪತ್ನಿಯರ ಸಹವಾಸದಿಂದ ಯಾಜ್ಞವಲ್ಕ್ಯರ ಗೃಹಸ್ಥಾಶ್ರಮ ಆನಂದಕರವಾಗಿಯೂ, ಲೋಕಾದರಣೀಯವಾಗಿಯೂ ನಡೆಯಿತು. ಸಾಧಾರಣವಾಗಿ ಮೂವತ್ತುವರ್ಷದ ವಯಸ್ಸಿನಲ್ಲಿ ಮೈತ್ರೇಯಿಯ ಲಗ್ನವಾದ ಆ ಮಹಾತ್ಮರು ವೃದ್ಧಾಪ್ಯವು ಪ್ರಾಪ್ತವಾಗುವವರೆಗೆ ಗೃಹಸ್ಥಾಶ್ರಮಿಗಳಾಗಿದ್ದರು. ಅವರು ತಮ್ಮ ಪತ್ನಿಯರೊಡನೆ ಆಧ್ಯಾತ್ಮಿಕ ವಿಷಯವನ್ನು ಕುರಿತು ದಿನಾಲು ಚರ್ಚಿಸುತ್ತಿದ್ದರು. ಮೈತ್ರೇಯಿಯೊಡನೆ ಕಾತ್ಯಾಯನಿಯ ಆಧ್ಯಾತ್ಮಿಕ ಜ್ಞಾನವೂ ದಿನದಿನಕ್ಕೆ ಹೆಚ್ಚುಹತ್ತಿ, ಆಕೆಯ ಸಂಸಾರಾಸಕ್ತಿಯು ದಿನದಿನಕ್ಕೆ ಕಡಿಮೆಯಾಗಹತ್ತಿತು. ಒಂದುದಿನ ಯಾಜ್ಞವಲ್ಕ್ಯರು ಹೋಮಶಾಲೆಯಲ್ಲಿ ಕುಳಿತಿದ್ದರು. ಅವರ ಮುಖಮುದ್ರೆಯು ಶಾಂತವೂ, ತೇಜಸ್ವಿಯೂ ಇದ್ದದ್ದರಿಂದ ಪಂಚಾಗ್ನಿಯಿಂದ ಯುಕ್ತವಾದ ಆ ಹೋಮಶಾಲೆಯಲ್ಲಿ ಆರನೆಯ ಅಗ್ನಿಯಂತೆ ಅವರು ಒಪ್ಪುತ್ತಿದ್ದರು. ಸ್ವಾಹಾ-ಸ್ವಧೆಯರಂತೆ ಇದ್ದ ಅವರ ಇಬ್ಬರು ಪತ್ನಿಯರು ಬಳಿಯಲ್ಲಿ ಕುಳಿತಿದ್ದರು. ಸಾಯಂಕಾಲದ ಹೋಮವು ಆದೇ ಮುಗಿದು, ಸ್ಥಂಡಿಲದಿಂದ ಹೊರಡುವ ಹೋಮ ಧೂಮವು ಅಲ್ಲಿಯೇ ಸುತ್ತುತ್ತಿದ್ದದ್ದರಿಂದ, ಹವಿರ್ಗಂಧವು ಹೋಮಶಾಲೆಯಲ್ಲೆಲ್ಲ ಇಡಗಿತ್ತು. ಯಜಮಾನನ ಇಚ್ಛೆಯಂತೆ ಹೋಮ ಧೂಮವು ದೇವತೆಗಳನ್ನು ಸಂತೋಷಪಡಿಸುವದಕ್ಕಾಗಿ ಸ್ವರ್ಗಲೋಕಕ್ಕೆ ಹೋಗುತ್ತಲಿತ್ತು. ಹೀಗೆ ದೇವತೆಗಳನ್ನು ಸಂತೋಷಪಡಿಸಿ ಅವರು ಆನಂದದಿಂದ ಕುಳಿತಿರಲು, ಯಾಜ್ಞವಲ್ಕ್ಯರು ತಮ್ಮ ಪ್ರಿಯಪತ್ನಿಯರನ್ನು ಕುರಿತು—"ಈ ವರೆಗೆ ನಾನು ನಿಮ್ಮ ಯೋಗದಿಂದ ಗೃಹಸ್ಥಾಶ್ರಮದ ವೈಭವದಲ್ಲಿದ್ದೆನು. ಈಗ ವೃದ್ಧಾಪ್ಯವು ಪ್ರಾಪ್ತವಾಗಿರುವದರಿಂದ, ಚತುರ್ಥಾಶ್ರಮವನ್ನು ಸ್ವೀಕರಿಸುವದು ಅವಶ್ಯವಾಗಿರುತ್ತದೆ; ಅದ್ದರಿಂದ ಏನಾದರೂ ನಿಮ್ಮ ವ್ಯವಸ್ಥೆಯನ್ನು ಮಾಡಬೇಕಾಗಿರುವದು. ಈ ವರೆಗೆ ನಾನು ಸಂಪಾದಿಸಿರುವ ಧನವನ್ನು, ನೀವಿಬ್ಬರೂ ಹಂಚಿಕೊಂಡು ಸುಖದಿಂದ ಕಾಲಹರಣ ಮಾಡಿರಿ." ಎಂದು ಹೇಳಿದರು. ಅವರ ಆಶ್ರಮಸ್ವೀಕಾರದ ವಿಚಾರವು ಅವರ ಇಬ್ಬರು ಪತ್ನಿಯರಿಗೂ ಯೋಗ್ಯವಾಗಿ ತೋರಿತು. ಅವರು ಹಟವಾದಿತನದಿಂದ ತಮ್ಮ ಪತಿಯನ್ನು ಸಂಸಾರದ ಬಲೆಯಲ್ಲಿ ಬಿಗಿಯುವ ಗೊಡವಿಗೆ ಹೋಗಲಿಲ್ಲ. ಕಾತ್ಯಾಯನಿಯ ಮೊದಲಿನ ಸಂಸಾರಾಸಕ್ತಿಯು ಸಂಪೂರ್ಣವಾಗಿ ಅಳಿದು ಹೋಗಿತ್ತು. ಮೈತ್ರೇಯಿಯಂತು ಮೊದಲಿನಿಂದಲೇ ವಿರಕ್ತಳಾಗಿದ್ದಳು. ಅವರಿಬ್ಬರೂ ತಮ್ಮ ಪತಿಯನ್ನು ಕುರಿತು—"ಭಗವನ್, ತಮ್ಮ ಮನೆಯಲ್ಲಿ ಧನವೇನಿರುವದೆಂಬದು ನಮಗೆ ಗೊತ್ತೇ ಇರುತ್ತದೆ: ಆದರೆ ಆ ಧನದಿಂದ ನಮಗೆ ಅಮರರಾಗಲಿಕ್ಕೆ ಬರಬಹುದೋ?

ಯಾಜ್ಞವಲ್ಕ್ಯ—ಛೇ, ಛೇ, ಹೀಗೆ ಹೇಗೆ ಕೇಳುವಿರಿ! ಎಲ್ಲಿಯಾದರೂ ಧನದಿಂದ ಅಮರತ್ವವು ಪ್ರಾಪ್ತವಾಗಬಹುದೆ? ಧನವಂತರಿಗೆ ಆಗುವ ಸುಖವು ಮಾತ್ರ ನಿಮಗೆ

ಧನದಿಂದ ಆಗಬಹುದು. ದ್ರವ್ಯವು ಜಡವಿರುವದರಿಂದ ಬಹಳವಾದರೆ ಅದು ಈ ಜಡ ದೇಹದ ಪರಿಪೋಷಣವನ್ನು ಮಾಡೀತು. ದ್ರವ್ಯವಿಲ್ಲದೆ ಸಂಸಾರಯಾತ್ರೆಯು ನಡೆಯಲಾರದು. ಸಂಸಾರದಲ್ಲಿ ಮುಕ್ತಿಯ ಹೆಸರನ್ನು ಎತ್ತಲಾಗದು.

ಕಾತ್ಯಾಯನಿ——ಮಹಾರಾಜ, ಶರೀರವು ಪುಷ್ಟವಾದ ಮಾತ್ರದಿಂದ ನಮ್ಮ ಕರ್ತವ್ಯವು ಮುಗಿದಂತಾಗಲಿಲ್ಲ. ಅಮರತ್ವವನ್ನು ದೊರಕಿಸಿಕೊಡದೆಯಿದ್ದ ಧನವನ್ನು ತಕ್ಕೊಂಡು ನಾವು ಮಾಡುವದೇನು? ಅದರಿಂದ ನಮಗಾಗುವ ಹಿತವೇನು?

ಮೈತ್ರೇಯಿ——ಭಗವಾನ್, ಅಮರಪದಪ್ರಾಪ್ತಿಗೆ ಬೇಕಾದದ್ದನ್ನಷ್ಟು ನಮಗೆ ಕೊಟ್ಟು ಹೋಗಬೇಕು. ಉಳಿದದ್ದೇನು ನಮಗೆ ಬೇಡ. ಜನ್ಮ-ಮರಣಗಳ ಘರ್ಷಣದಿಂದ, ಹಾಗು ತಾಪತ್ರಯಾಗ್ನಿಗಳ ತಾಪದಿಂದ ಬೇಯುವ ನಮ್ಮನ್ನು ಭವಸಾಗರದಿಂದ ಮುಕ್ತವಾಗಮಾಡಿರಿ. ನಮಗೆ ಶಾಂತಿಯನ್ನು ಕೊಡುವವರು ತಮ್ಮ ಹೊರತು ತ್ರೈಲೋಕ್ಯದಲ್ಲಿ ಮತ್ತೆ ಯಾರೂ ನಮಗೆ ಕಾಣುವದಿಲ್ಲ.

ಈ ಮಾತುಗಳನ್ನು ಕೇಳಿ ಯಾಜ್ಞವಲ್ಕ್ಯರಿಗೆ ಪರಮಾನಂದವಾಯಿತು. ಅವರು ತಮ್ಮ ಪತ್ನಿಯರನ್ನು ಕುರಿತು——"ನೀವಿಬ್ಬರೂ ನನಗೆ ಅತ್ಯಂತ ಪ್ರಿಯರಾಗಿರುವಿರಿ. ನನಗೆ ಪ್ರಿಯವಾದ ಮಾತುಗಳನ್ನೇ ನೀವು ಆಡಿದಿರಿ. ನಾನು ನಿಮಗೆ ಅಮರತ್ವವು ಪ್ರಾಪ್ತವಾಗುವದಕ್ಕಾಗಿ ಹೇಳುವ ಮಾತುಗಳನ್ನು ಲಕ್ಷ್ಯಪೂರ್ವಕವಾಗಿ ಕೇಳಿರಿ. ಈ ವರೆಗೆ ಗೃಹಸ್ಥಾಶ್ರಮದ ಧರ್ಮಗಳಂತೆ ಆಚರಿಸಿ ನೀವು ಧನ್ಯರಾಗಿರುವಿರಿ. ನಿಮಗೆ ಮೋಕ್ಷೋಪಾಯಗಳನ್ನು ಕುರಿತು ಸಾಮಾನ್ಯವಾಗಿ ಇಂದು ನಿಮ್ಮನ್ನು ಬೋಧಿಸುವೆನು. ನಿಮಗೆ ಶಾಶ್ವತ ಶಾಂತಿಯ ಪ್ರಶಸ್ತವಾದ ಮಾರ್ಗವನ್ನು ತೋರಿಸಿಯೇ ನಾನು ಚತುರ್ಥಾಶ್ರಮವನ್ನು ಸ್ವೀಕರಿಸುವೆನು; ಮುಂದೆ ತಪಶ್ಚರ್ಯದಿಂದ ಆ ಮಾರ್ಗವನ್ನು ಕ್ರಮಿಸಿ, ಶಾಶ್ವತಶಾಂತಿಸಾಮ್ರಾಜ್ಯವ ಮುಟ್ಟುವ ಕೆಲಸವನ್ನು ನೀವೇ ಮಾಡಬೇಕಾಗುವದು; ಅಲ್ಲಿ ಅನ್ಯರ ಸಹಾಯವು ವಿಶೇಷವಾಗಿ ಉಪಯೋಗಿಸುವದಿಲ್ಲ. ಅಧಿಕಾರಸಂಪನ್ನರೂ, ಆಜ್ಞಾಪಾಲನ ಧುರೀಣರೂ ಆದ ನಿಮಗೆ ಸವಿಸ್ತರ ಬೋಧವು ಅನವಶ್ಯಕವಾದ್ದರಿಂದ ಸಂಕ್ಷೇಪವಾಗಿಯೇ ಹೇಳುವದನ್ನು ಹೇಳುವೆನು. ಸತಿಯರ ಮುಖ್ಯಧರ್ಮವು ಪತಿಯ ಅನುಸರಣವು. ಸತಿಗೆ ಪತಿಯೇ ದೈವತವು. ಆತನೇ ಸದ್ಗುರುವು. ಆತನ ವೇದೋಕ್ತ ಕರ್ಮಾಚರಣೆಯ ಅನುಸರಣದಿಂದ ಚಿತ್ತಶುದ್ಧಿಯೂ, ಆತನ ಆಜ್ಞಾಪಾಲನರೂಪವಾದ ಉಪಾಸನೆಯಿಂದ ಚಿತ್ತೈಕಾಗ್ರತೆಯೂ ಆಗುವವು. ಇವೇ ಬ್ರಹ್ಮಜ್ಞಾನದ, ಅಥವಾ ಸ್ವಾನಂದಸಾಮ್ರಾಜ್ಯದ ಪ್ರಾಪ್ತಿಗೆ ಮುಖ್ಯ ಸಾಧನಗಳಾಗಿರುವವು. ಸದ್ಗುರುರೂಪನಾದ ಪತಿಯ ಕೃಪಾಸಂಪಾದನವೇ ಬ್ರಹ್ಮಜ್ಞಾನಪ್ರಾಪ್ತಿಯು. ಹೀಗೆ ಸತಿಗೆ ಪತಿಯ ಹೊರತು ಅನ್ಯಗತಿಯಿಲ್ಲ. ಸತಿಯು ಸತ್ಯ, ಶಾಂತಿ, ಕ್ಷಮಾ, ಧೈರ್ಯ, ಸಂತೋಷ, ಅಕ್ರೋಧ, ನಿರಭಿಮಾನ, ನಿರ್ಮಾತ್ಸರ್ಯ, ಪ್ರಾಣಿಜಾತಗಳಲ್ಲಿ ಭಗವದ್ರೂಪಭಾವನೆ, ಆರ್ಜವ ಈ ಗುಣಗಳನ್ನು ಪ್ರಯತ್ನಪೂರ್ವಕ ಸಂಪಾದಿಸಬೇಕು. ಮೋಕ್ಷಾಪೇಕ್ಷೆಯು ಈ ಜಗತ್ತು, ಬಹಳಹೇಳುವದೇನು, ಈ

ದೇಹವುಕೂಡ ನನ್ನದಲ್ಲವೆಂದು ಭಾವಿಸಬೇಕು. ಇದಕ್ಕೇ ಋಷಿಗಳು ತ್ಯಾಗವೆನ್ನು ವರು. ದೇಹಬುದ್ಧಿಯುವರಿಗೆ ಈ ತ್ಯಾಗವು ದುಷ್ಕರವಾಗಿರುವದು. ಯಾವತ್ತು ವಿಷಯುಜಾತವನ್ನು ವಮನದಂತೆ ತಿಳಿಯುವವರಿಗೇ ವೈರಾಗ್ಯವು ಪ್ರಾಪ ವಾಗುವದು. ವಿರಾಗಿಯೇ ಮೋಕ್ಷಾಧಿಕಾರಿಯು. ಆತ್ಮನು ಸರ್ವತ್ರವ್ಯಾಪಕನಾಗಿದ್ದು, ಸ್ತ್ರೀ-ಪುತ್ರಾದಿಗಳಿಗಿಂತ ಆತನು ಅತ್ಯಂತಪ್ರಿಯನಾಗಿರುವನು. ಪತಿ-ಪುತ್ರಾದಿಗಳನ್ನು ಪ್ರೀತಿಸುವದು ಅವರಸಲುವಾಗಿಯಲ್ಲ, ತನ್ನಸಲುವಾಗಿ! ಇದೇಮಾತು ಶರೀರ, ಪಶು, ದೇವತೆಗಳು, ಎಲ್ಲಪ್ರಾಣಿಜಾತಗಳು ಇವುಗಳ ವಿಷಯುದ ಪ್ರೇಮಭಕ್ತಿಗಳಿಗೂ ಸಂಬಂಧಿಸುವದು; ಆದರೂ ಆತ್ಮನು ಅಭೇದ್ಯನೆಂದು ನಿಃಸಂಶಯದಿಂದ ತಿಳಿಯಲಿಕ್ಕೆ ಈಪತಿ-ಪುತ್ರಾದಿಕರೇ ಸಾಧನಗಳಾಗಿರುವರು. ಸಮುದ್ರವು ಯಾವತ್ತು ಜಲಗಳ ಆಧಾರವಾಗಿರುವಂತೆ ಆತ್ಮನು ಯಾವತ್ತು ಜಗತ್ತಿನ ಆಧಾರವಾಗಿರುವನು.

ಬ್ರಹ್ಮದೇವನಿಂದ ಕ್ರಿಮಿಕೀಟಕಾದಿ ಕ್ಷುದ್ರಜೀವಿಗಳವರೆಗೆ ಒಬ್ಬನೇ ಆತ್ಮನು ವ್ಯಾಪಕನಾಗಿರುವನೆಂಬ ಅನುಭವವನ್ನು ಪಡೆಯುವದೇ ಜ್ಞಾನವು. ಹಸಿಕಟ್ಟಿಗೆಯು ಸುಡುವಾಗ ಬೆಂಕಿ-ಹೊಗೆಗಳು ಬೇರೆಬೇರೆಯಾಗಿ ಕಾಣಿಸುವಂತೆ, ಆತ್ಮನು ಸಂಕಲ್ಪಯುಕ್ತನಾದರೆ ಈ ಜಗತ್ತು ಭಿನ್ನವಾಗಿ ತೋರುವದು. ಸುಮಂಗಲೆಯುರೇ, ಅಜ್ಞಾನ ಮೂಲವಾದ ದ್ವೈವತವು ದುಃಖಕ್ಕೆ ಕಾರಣವು. ನಿಮಗೆ ದ್ವೈತದ ಭಾಸವಾಗಲಿಕ್ಕೆ ನಿಮ್ಮ ಸಂಕಲ್ಪವೇ ಕಾರಣವು. ನೀವು ಸಂಕಲ್ಪಾತೀತರಾದರೆ ಆತ್ಮನಸ್ವರೂಪರೇ ಇರುವೆವೆಂಬ ಅನುಭವವು ನಿಮಗೆ ಆಗುವದು; ಆದ್ದರಿಂದ ಯಾವತ್ತು ಸಂಕಲ್ಪಗಳ ನಿರೋಧಮಾಡಿ, ನಾವೇ ಆತ್ಮಸ್ವರೂಪರೆಂಬ ಅಖಂಡಭಾವನೆಯನ್ನು ಹೃದಯದಲ್ಲಿ ಧಾರಣಮಾಡಿರಿ; ಅಂದರೆ ಆಯುಷ್ಯವಿರುವವರೆಗೆ ಜೀವನ್ಮುಕ್ತಿದಶೆಯು ಪ್ರಾಪ್ತವಾಗಿ ಕಡೆಗೆ ಆತ್ಮಸ್ವರೂಪದಲ್ಲಿ ನೀವು ಕೂಡಿಹೋಗುವಿರಿ. ಸ್ವಪ್ನಕ್ಕೆ ಸಂಕಲ್ಪವು ಕಾರಣವಾಗಿರುವಂತೆ, ಜಾಗ್ರತಿಗೂ ಸಂಕಲ್ಪವೇ ಕಾರಣವಾಗಿರುವದು. ಸ್ವಪ್ನದಲ್ಲಿ ಸಂಕಲ್ಪದ್ನಾಶವಾದ ಕೂಡಲೆ ಗಾಢನಿದ್ರೆಯೂ ಹತ್ತುವಂತೆ, ಜಾಗ್ರತಿಯಲ್ಲಿ ಸಂಕಲ್ಪದ ನಾಶವಾದರೆ ಸಮೃದ್ಧಿಯು ಲಭಿಸುವದು. ಆತ್ಮನು ಸಂಗರಹಿತನಾಗಿದ್ದು ಎಲ್ಲವನ್ನು ನೋಡುವನು; ಆದರೆ ಆತ್ಮನನ್ನುಮಾತ್ರ ಯಾರೂ ನೋಡಲಾರರು. ಆತ್ಮನು ಅವಸ್ಥಾತ್ರಯದಲ್ಲಿಯೂ ಸಾಕ್ಷೀಭೂತನಾಗಿದ್ದು, ಸ್ವಯಂಪ್ರಕಾಶಕನಾಗಿರುವನು. ಈ ಆತ್ಮನೇ ಅಜ್ಞಾನಾವೇಷ್ಟಿತನಾಗಿ ನಾನು ಕರ್ತವ್ಯವೆಂದು ಭಾವಿಸಿ ಬದ್ಧನಾಗುವನು. ಅದೇ ಆತ್ಮನೇ ತಾನು ಅಸಂಗನೂ, ಅಕರ್ತೃವೂ ಎಂದು ತಿಳಿದರೆ ಮುಕ್ತನಾಗುವನು. ಕನ್ನಡಿಯಲ್ಲಿ ಪ್ರತಿಬಿಂಬಿಸಿರುವ ತನ್ನಸ್ವರೂಪವನ್ನೆ ಬಾಲಕನು ಭಿನ್ನವಾಗಿ ಕಲ್ಪಿಸುವಂತೆ, ಮಾಯಾಮೋಹಿತನಾದ ಆತ್ಮನು ವಿಷಯುಗಳನ್ನು ತನ್ನಿಂದ ಭಿನ್ನವಾಗಿ ಕಲ್ಪಿಸುವನು. ಸುಮಂಗಲೇಯುರೇ, ನೀವು ಶಾಂತವೃತ್ತಿಯುವರಾಗಿ ಆತ್ಮನಹೊರತು ಬೇರೆಯಾವದರ ವಿಚಾರವನ್ನು ಮಾಡದೆ ಜೀವನ್ಮುಕ್ತರಾಗಿ ಪ್ರಾರಬ್ಧಕ್ಷಯವಾಗುವವರೆಗೆ ಸುಖಿಗಳಾಗಿ ಇರ್ರಿ. ಈ ಆತ್ಮಶೋಧಕ್ಕಾಗಿಯೇ ಎಷ್ಟೋಜನರು ಸರ್ವಸಂಗ

ಪರಿತ್ಯಾಗಮಾಡಿ ಭಿಕ್ಷಾವೃತ್ತಿಯಿಂದ ತಿರುಗುತ್ತಿರುವರು ; ಆದ್ದರಿಂದ ನೀವು ನಿರಿಚ್ಛರಾಗಿ ಆತ್ಮನಿಷ್ಠರಾಗಿರಿ. ಮಾಡಿದಕರ್ಮಗಳನ್ನು ಸ್ಮರಿಸಬೇಡಿರಿ. ಪ್ರಾರಬ್ಧಾನುಸಾರವಾಗಿ ಮಾಡಬೇಕಾದ ಕರ್ಮಗಳನ್ನು ನೀವು ಅನಾಸಕ್ತರಾಗಿ ಮಾಡಿರಿ; ಆದರೆ ಕರ್ತೃತ್ವದ ಅಹಂಕಾರಕ್ಕೆ ಹೃದಯದಲ್ಲಿ ಸರ್ವಥಾ ಆಸ್ಪದಕೊಡಬೇಡಿರಿ. ಒಬ್ಬನೊಬ್ಬ ಹುಡುಗನು ಅಹಂಕಾರರಹಿತನಾಗಿ ಕರ್ಮಮಾಡುತ್ತಿರುವಂತೆ ನೀವು ಕರ್ಮಮಾಡಿ ಮುಕ್ತರಾಗಿರಿ. ಎಷ್ಟು ಹೇಳಿದರೂ ಅಷ್ಟೇ, ಪ್ರಿಯತಮೆಯರೇ, ಸದ್ಗುರುವಿಗೆ ಶರಣುಹೋಗಿ, ಆತನನ್ನು ಏಕನಿಷ್ಠೆಯಿಂದ ಸೇವಿಸಿ ಆತನ ಅನುಗ್ರಹ ಸಂಪಾದಿಸದಹೊರತು ಮೋಕ್ಷವು ಸಾಧಿಸದು. ನೀವು ಪರಮ ಧನ್ಯರಾದ್ದರಿಂದಲೇ ಪತಿರೂಪ ಸದ್ಗುರುವನ್ನು ಸೇವಿಸಿ, ಆತನ ಅನುಗ್ರಹಕ್ಕೆ ಪಾತ್ರರಾಗುವಿರಿ !

ಈಮೇರಿಗೆ ಬೋಧಿಸಿ ಯೋಗೀಶ್ವರರಾದ ಶ್ರೀ ಯಾಜ್ಞವಲ್ಕ್ಯರು ಸನ್ಯಾಸಗ್ರಹಣ ಮಾಡಿದರು. ಏಕನಿಷ್ಠೆಯಿಂದ ತಮ್ಮನ್ನು ಸ್ಮರಿಸುವವರನ್ನು ಉದ್ಧರಿಸುವದಕ್ಕಾಗಿ ಆ ಮಹಾತ್ಮರು ಈಗಲೂ ಭೂತಲದಲ್ಲಿ ವಾಸಿಸುತ್ತಿರುವರು. ಇಹ-ಪರ ಸೌಖ್ಯಸಾಧಕವಾದ ಈ ಭಗವತೀಕಾತ್ಯಾಯನಿಯ ಸದ್ರಸಪೂರ್ಣ ಚಾರಿತ್ರ್ಯವನ್ನು ಓದುವವರ, ಹಾಗು ಕೇಳುವವರ ಇಷ್ಟಾರ್ಥಗಳು ಸಾಧಿಸುವವು. ಈ ಅಲ್ಪಗ್ರಂಥರೂಪ ಪುಷ್ಪಾಂಜಲಿಯನ್ನು ನಮ್ಮ ಪೂಜ್ಯ ಮಾತೃವರ್ಗಕ್ಕೂ, ಪ್ರಿಯ ಭಗಿನೀವರ್ಗಕ್ಕೂ ಅರ್ಪಿಸಿ, ಅವರ ಇಷ್ಟಾರ್ಥಗಳನ್ನು ಪೂರ್ಣಮಾಡುವದಕ್ಕಾಗಿ ಶ್ರೀ ಕಾತ್ಯಾಯನೀ-ಯಾಜ್ಞವಲ್ಕ್ಯರನ್ನು ಪ್ರಾರ್ಥಿಸುವೆವು ! ! ॥ಓಂ ಶಾಂತಿಃ ಶಾಂತಿಃ ಶಾಂತಿಃ॥

ಸಂಪೂರ್ಣ.

ಗಳಗನಾಥ-ಸುರಸಗ್ರಂಥಮಾಲಾ.

ಶ್ರೀಃ

೩೯ನೆಯ ಗ್ರಂಥ.

# ಬಂಧವಿಮೋಚನ.

ಲೇಖಕ.

**ವೇ. ಶಾ. ಸ. ಮಹಾದೇವಶಾಸ್ತ್ರೀ ಜಂತಲಿ**

ಮುಖ್ಯಾಧ್ಯಾಪಕ.

ಶ್ರೀ ಶೇಷಾಚಲ ಸಂಸ್ಕೃತಪಾಠಶಾಲಾಹಾವೇರಿ.

ಪ್ರಕಾಶಕ

ವೇಂಕಟೇಶ ತಿರಕೋ ಕುಲಕರಣಿ **ಗಳಗನಾಥ**

ಒಂದನೆಯ ಆವೃತ್ತಿ ೫೦೦೦ ಪ್ರತಿಗಳು

ಪುಸ್ತಕದ ಎಲ್ಲ ಹಕ್ಕುಗಳು ಪ್ರಕಾಶಕರ

ಸ್ವಾಧೀನನಲ್ಲಿರುವವು.

೧೯೧೯.

**ಬೆಲೆ ೪ ಆಣೆ**

ಈ ಪುಸ್ತಕವನ್ನು ಮಿ ಯಶವಂತರಾವ ಭಾಸ್ಕರರಾವ ಜತಾರ, ಬಿ. ಎ ಎಲ್ ಎಲ್. ಬಿ, ಇವರು ಧಾರವಾಡದಲ್ಲಿ ತಮ್ಮ ಕರ್ನಾಟಕ-ಪ್ರಿಂಟಿಂಗವರ್ಕ್ಸ ಮುದ್ರಣಾಲಯದಲ್ಲಿ ಮುದ್ರಿಸಿದರು. ಮತ್ತು ಮಿ. ವೇಂಕಟೇಶ ತಿರಕೋ ಕುಲಕರಣಿ, ಗಳಗನಾಥ ಇವರು ಹಾವೇರಿಯ ತಮ್ಮ ಸುರಸಗ್ರಂಥಮಾಲಾ ಆಫಿಸಿನಲ್ಲಿ ಪ್ರಸಿದ್ಧಪಡಿಸಿದರು

# ಪ್ರಸ್ತಾವನೆ.

ಬಂಧವಿಮೋಚನಕ್ಕೆ ಅತ್ಯಂತ ಅವಶ್ಯವಾಗಿರುವ ಮನಶ್ಶುದ್ಧಿಯನ್ನು ಹ್ಯಾಗೆ ಮಾಡಿಕೊಳ್ಳಬೇಕೆಂಬದನ್ನೂ, ಮನಸ್ಸಿನ ಧರ್ಮಗಳಾವವೆಂಬದನ್ನೂ, ಅದರ ಸಂಯಮನದ ಕ್ರಮವನ್ನೂ ತಿಳಿಸುವದಕ್ಕಾಗಿ ಈ ಚಿಕ್ಕ ಪ್ರಬಂಧವನ್ನು ಉಪನಿಷದಾದಿಗಳ ಆಧಾರದಿಂದ ನಮ್ಮ ಶಾಸ್ತ್ರಿಗಳು ಬಹು ಶ್ರಮಬಟ್ಟು ಬರೆದಿರುತ್ತಾರೆ. ಇಂದ್ರಿಯಗಳ ಬಲಶಾಲಿತ್ವವೂ, ವಿಷಯಗಳ ಪ್ರಭಾವವೂ ಇದರಲ್ಲಿ ಚನ್ನಾಗಿ ವರ್ಣಿಸಲ್ಪಟ್ಟಿರುವವು. ಒಟ್ಟಿಗೆ ಈ ಪುಸ್ತಕವನ್ನು ಓದುವದರಿಂದ ವಾಚಕರಿಗೆ ಹಲವು ಹೊಸವಿಷಯಗಳ ಜ್ಞಾನವು ಆಗಿ, ಅವರ ಆತ್ಮಹಿತದ ಯತ್ನಕ್ಕೆ ಬಹುಮಟ್ಟಿಗೆ ಸಹಾಯವಾಗುವದೆಂದು ನಾವು ನಂಬುತ್ತೇವೆ.

ಆತ್ಮನ ಬಂಧವಿಮೋಚನವಂತು ಇರಲಿ, ಸದ್ಯದ ಕಠಿಣಕಾಲದಲ್ಲಿ ಪಾಠಶಾಲೆಯ ಬಂಧವಿಮೋಚನವು ಈ ಮೂರುಪುಸ್ತಕಗಳ ಪ್ರಸಿದ್ಧೀಕರಣದಿಂದ ಆದಂತಾಗಿರುವದು ಬಹು ಸಂತೋಷದ ಸಂಗತಿಯು! ಈ ಸಂತೋಷಕ್ಕೆ ನಮ್ಮ ಶ್ರೀಮಂತ ಯಶವಂತರಾವಜಠಾರ ಬಿ. ಎ. ಎಲ್, ಎಲ್, ಬಿ. ಈಮಹನೀಯರ ಉದಾರಾಶ್ರಯವೂ, ನಮ್ಮ ಪ್ರಿಯವಿದ್ಯಾರ್ಥಿಗಳಾದ ಚಿ॥ ಶಂಕರಜೋಶಿ ತಿಳವಳ್ಳಿ, ಹಾಗು ಚಿ॥ ರಾಮಭಟ್ಟ ಮುಳಗುಂದ ಮೊದಲಾದ ಎಲ್ಲವಿದ್ಯಾರ್ಥಿಗಳ ಪರಿಶ್ರಮವೂ ಕಾರಣವಾಗಿರುವದರಿಂದ ಇವರೆಲ್ಲರವಿಷಯವಾಗಿ ನಾವು ಅತ್ಯಂತ ಕೃತಜ್ಞರಾಗಿರುವೆವು.

ಕಟ್ಟಕಡೆಯಲ್ಲಿ ನಮ್ಮ ಹಾವೇರಿಯ ಪ್ರಮುಖಸಾವುಕಾರ ಕೈ. ವಾ. ಹಣಮಂತನಾಯಿಕ ಬಾದಾಮಿ ಇವರ ಮನೆತನದ ವಹಿವಾಟದಾರರಾದ ಮ. ರಾ ರಾ. ಜೀವಣ್ಣಕುಲಕರ್ಣಿ ಗುತ್ತಲ, ಹಾಗು ಪ್ರಸಿದ್ಧವಕೀಲರಾದ ಮ. ರಾ. ರಾ. ಮೋರೋಪಂತಅಭ್ಯಂಕರ ಈ ಉಭಯ ಉದಾರಸದ್ಗೃಹಸ್ಥರು ಪದೇಪದೇ ದ್ರವ್ಯಸಹಾಯಮಾಡಿ ಪಾಠಶಾಲೆಯ ಬಂಧವಿಮೋಚನ ಮಾಡಿದ್ದನ್ನು ಕೃತಜ್ಞತಾಪೂರ್ವಕವಾಗಿ ನಾವು ಉಲ್ಲೇಖಿಸದೆ ಇರಲಾರೆವು! ಶ್ರೀಗುರುವು ಇವರೆಲ್ಲರ ಕಲ್ಯಾಣವಮಾಡಲಿ!

ಸುರಸಗ್ರಂಥಮಾಲಾ ಹಾವೇರಿ. } ಕನ್ನಡಿಗರ ಸೇವಕ,
೧೮೪೧ ಚೈತ್ರ ವದ್ಯ ೫. } **ವೇ. ಶಿ. ಕುಲಕರಣಿ (ಗಳಗನಾಥ)**

# ಬಂಧವಿಮೋಚನ

## ೧ ನೆಯ ಪ್ರಕರಣ — ಮನಸ್ಸು

**मनएव मनुष्याणां कारणं बंधमोक्षयोः ।**
**बंधाय विषयासक्तं मुक्त्यै निर्विषयंस्मृतं ॥ १ ॥**

—ब्रह्मबिंदूपनिषत्.

ಸೃಷ್ಟಪದಾರ್ಥಗಳಲ್ಲಿ ಮನಸ್ಸೆಂಬ ತತ್ವವು ಮಹತ್ತರವಾದದ್ದು. ಮೇಲಿನ ಉಪನಿಷದ್ವಾಕ್ಯದಂತೆ ಅದು ಬಂಧಮೋಕ್ಷಗಳೆರಡಕ್ಕೂ ಕಾರಣವಾಗಿರುವದರಮೇಲಿಂದಾದರೂ ಅದರ ಗೌರವವು ಚನ್ನಾಗಿ ವ್ಯಕ್ತವಾಗುತ್ತದೆ. ಮನುಷ್ಯಮಾತ್ರರಲ್ಲಿ ಮನಸ್ಸಿನ ವ್ಯಾಪಾರವ ಪ್ರಭಾವವನ್ನರಿಯದವರು ಯಾರಿರುವರು? ಪಂಡಿತರಿಂದ ಪಾಮರರವರೆಗೆ ಎಲ್ಲರೂ ಮನಸ್ಸಿನ ಎಳತಕ್ಕೆ ಒಳಗಾಗಿರುವರು. ಆದರೆ ಜ್ಞಾನಿಗಳು ಮಾತ್ರ ಮನಸ್ಸಿನ ಸ್ವರೂಪವನ್ನು ವಿಚಾರಿಸಿ, ಅದನ್ನು ಸ್ವಾಧೀನಪಡಿಸಿಕೊಂಡಿರುವರು; ಮತ್ತು ಮನಸ್ಸು ಯಾವ ಸ್ಥಿತಿಯಲ್ಲಿ ಬಂಧಕ್ಕೆ ಕಾರಣವಾಗುವದು, ಯಾವಸ್ಥಿತಿಯಲ್ಲಿ ಮೋಕ್ಷಕ್ಕೆ ಕಾರಣವಾಗುವದು. ಎಂಬದನ್ನು ಕುರಿತು ಸ್ವಾನುಭವದಿಂದ ಹೇಳಿರುವರು. ಈ ಮಾತು ಎಲ್ಲರಿಗೂ ಗೊತ್ತಿರುವದು ಹಿತಕರವಾಗಿರುವದರಿಂದ, ಮನಸ್ಸನ್ನು ಕುರಿತು ಕೆಲವು ಸಂಗತಿಗಳನ್ನು ಶಾಸ್ತ್ರಸಮ್ಮತವಾಗಿ ಯಥಾಮತಿ ಬರೆಯಲುಪಕ್ರಮಿಸಿರುತ್ತೇವೆ; ನಮ್ಮ ಬರಹವು ಅನುಭವವನ್ನು ತೀರ ಬಿಟ್ಟಿರಲಾರದೆಂಬದನ್ನು ವಾಚಕರಿಗೆ ನಾವು ತಿಳಿಸುವೆವು. ಮನಸ್ಸನ್ನು ಕುರಿತು ಬರೆಯಲಿಕ್ಕೆ ಮನೋಜಯಮಾಡಿದ ಮಹಾತ್ಮರೇ ಮುಖ್ಯಾಧಿಕಾರಿಗಳಾಗಿದ್ದರೂ, ಮನಸ್ಸಿನ ಮಂಗಚೇಷ್ಟೆಗಳನ್ನು ವರ್ಣಿಸಲಿಕ್ಕೆ, ಮನಸ್ಸಿಗಧೀನರಾದವರೇ ಅನುಭವದದೃಷ್ಟಿಯಿಂದ ಯೋಗ್ಯಾಧಿಕಾರಿಗಳಾಗಿರುತ್ತಾರೆ. ತಾತ್ಪರ್ಯವಿಷ್ಟೇ, ಮುಖ್ಯವಾಗಿ ನಮ್ಮ ಲೇಖದಲ್ಲಿ ನಾವು ಜ್ಞಾನಿಗಳ ಮತವನ್ನು ಉಲ್ಲೇಖಿಸುವೆವಲ್ಲದೆ, ಪ್ರಸಂಗವಿಶೇಷದಲ್ಲಿ ಮನಸ್ಸಿನ ಮಂಗಚೇಷ್ಟೆಗಳನ್ನಾದರೂ ಅನುಭವದಿಂದಹೇಳುವೆವು.

ದೇಹವೆಂಬದೊಂದು ರಾಜಧಾನಿಯು; ಜೀವಾತ್ಮನೆಂಬವನೇ ಅಲ್ಲಿಯ ಅರಸನು; ಮನಸ್ಸು ಆತನ ಮಂತ್ರಿಯು; ಪಂಚಪ್ರಾಣಗಳು ದ್ವಾರಪಾಲಕರು; ಜ್ಞಾನೇಂದ್ರಿಯ–ಕರ್ಮೇಂದ್ರಿಯಗಳೇ ಆತನ ಪರಿಚಾರಕರು. ಇವರೆಲ್ಲರೂಕೂಡಿ ಆ ದೇಹದೊಡೆಯನಾದ ಜೀವಾತ್ಮನಿಗೆ ವಿವಿಧಉಪಭೋಗ್ಯವಿಷಯಗಳನ್ನು ಸಂಪಾದಿಸಿಕೊಡುತ್ತಾರೆ. ಆ ವಿಷಯಗಳ ಉಪಭೋಗದಿಂದ ಜೀವಾತ್ಮನಿಗೆ ಸುಖದುಃಖಗಳಾಗುತ್ತವೆಂಬದು ಅನುಭವಸಿದ್ಧಮಾತಾಗಿರುತ್ತದೆ. ಮೂಲತಃ ಜೀವಾತ್ಮನು ಸ್ವತಂತ್ರನು, ಆನಂದಸ್ವರೂಪನು; ಆದರೆ, "ಜಾಲಿಯಬಿತ್ತಿ ಕಾಲಿಗೆಮೂಲ ಮಾಡಿಕೊಂಡಂ"ತೆ, ಆತನು ಮೇಲೆ ಹೇಳಿದ ತನ್ನ ಪರಿವಾ

ರದ ಅಧೀನನಾಗಿ ಸ್ವಾತಂತ್ರ್ಯಸುಖವನ್ನು ಮರೆತು ಬಿಟ್ಟಿದ್ದರಿಂದ, ಪಾರತಂತ್ರ್ಯದ ಬಗೆ ಬಗೆಯ ಕಾಲ್ಪನಿಕ ಸುಖದುಃಖಗಳ ಜಗ್ಗಾಟಕ್ಕೆ ಗುರಿಯಾಗಿ ನರಳಬೇಕಾಗಿದೆ. ಜೀವಾತ್ಮನ ಪರಿವಾರವಲ್ಲಿ ಅನ್ಯರ ಸ್ವಾತಂತ್ರ್ಯವನ್ನು ಅಪಹರಿಸುವ ದುಷ್ಟಚಾಳಿಯ ಸಂಬಂಧದಿಂದ ಮನಸ್ಸು ಮಿಗಿಲಾದದ್ದು, ಅದು ತನ್ನ ಕೈಕೆಳಗಿನ ಇಂದ್ರಿಯಾದಿಗಳ ಸ್ವಾತಂತ್ರ್ಯವನ್ನಷ್ಟೇ ಅಲ್ಲ, ದೇಹದೊಡೆಯನಾದ ಜೀವಾತ್ಮನ ಸ್ವಾತಂತ್ರ್ಯವನ್ನು ಕಸಿದುಕೊಂಡು, ಕರಮರಿತಿಂದು ಹೆಬ್ಬುಲಿಯಾದಂತೆ, ಎಲ್ಲರನ್ನೂ ಮೀರಿನಿಂತು ಅನಿಯಂತ್ರಿತಾಧಿಕಾರದಿಂದ ಜೀವಾತ್ಮನ ಕುಲಗುರುವಾದ ವಿವೇಕನೆಂಬಾತನ ಆಟವನ್ನು ಸಹ ನಡೆಯಗೊಡದೆ, ಅನರ್ಥ ಪರಂಪರೆಯನ್ನುಂಟುಮಾಡುವದು; ಆದರೆ "ಊರುಸುಟ್ಟರೂ ಹನುಮಪ್ಪನು ಹೊರಗೆ" ಎನ್ನುವಂತೆ, ತಾನು ಯಾವದಕ್ಕೂ ಸಿಲುಕದೆಯಿರುವದು! ಇಂಥ ವಿಲಕ್ಷಣವಾದ ಮನಸ್ಸಿನ ಸ್ವರೂಪವೇನು? ಅದರ ಸಾಮರ್ಥ್ಯವೆಷ್ಟು? ತನ್ನ ಪರಿವಾರದೊಡನೆ ಅದರಬಳಿಕೆಯು ಹ್ಯಾಗಾಗುವದು? ಮನೋಜಯಮಾಡುವ ಬಗೆಯೇನು? ಇತ್ಯಾದಿ ವಿಷಯಗಳನ್ನು ಕುರಿತು ಆಲೋಚಿಸುವದು ಅವಶ್ಯವಾಗಿರುತ್ತದೆ.

ಈ ಪ್ರಕರಣದಲ್ಲಿ ಮನಸ್ಸಿನಸ್ವರೂಪವನ್ನು ಮುಖ್ಯವಾಗಿ ವರ್ಣಿಸಬೇಕಾಗಿದೆ; ಆದ್ದರಿಂದ ಮನಸ್ಸೆಂದರೇನು? ಅದರ ಸ್ವಭಾವವೆಂತಹದು? ಅದರ ಕರ್ತೃತ್ವಶಕ್ತಿ ಎಷ್ಟು? ಎಂಬದನ್ನು ಕುರಿತು ಕ್ರಮವಾಗಿ ಆಲೋಚಿಸುವೆವು. "ಮನು-(ಅವಬೋಧನೇ)" ಎಂಬ ಧಾತುವಿನಿಂದ ಸಿದ್ಧವಾದ "ಮನಸ್ಸೆಂ"ಬ ಶಬ್ದವು, ತಿಳುಕೊಳ್ಳುವಶಕ್ತಿಯುಳ್ಳದ್ದೊಂದು ವಸ್ತುವೆಂಬ ಅರ್ಥವನ್ನು ಬೋಧಿಸುತ್ತದೆ; ಆದರೆ ಈ ಮನಸ್ಸೆಂಬ ವಸ್ತುವಿನ ರೂಪವನ್ನು ಮಾತ್ರ ವರ್ಣಿಸುವದು ಶಕ್ಯವಲ್ಲ; ಯಾಕಂದರೆ ಮನಸ್ಸಿಗೆ ಸ್ವತಂತ್ರ ಆಕಾರವೇ ಇಲ್ಲ. ವ್ಯವಹಾರದಲ್ಲಿ ಪ್ರವಾಹಿರೂಪ-ವಾಯುರೂಪ ಪದಾರ್ಥಗಳಿಗೆ ಸ್ವತಂತ್ರವಾದ ಆಕಾರವಿಲ್ಲೆಂದು ಹೇಳುವದುಂಟು; ಯಾಕಂದರೆ ಅವನ್ನು ಒಳಕೊಳ್ಳುವಪದಾರ್ಥಗಳ ಅವಕಾಶಗಳ ಆಕಾರದಂತೆ ಅವುಗಳ ಆಕಾರವಾಗುತ್ತದೆ; ಆದರೆ ತೇಜೋಮಯವಾದ ಮನಸ್ಸಿನಸ್ವರೂಪವು ಇದಕ್ಕೂ ವಿಲಕ್ಷಣವಾಗಿರುವದು; ಯಾಕಂದರೆ ಮನಸ್ಸಿನ ಆಕಾರವು, ಅದಕ್ಕೆ ಗ್ರಾಹ್ಯವಾದ ಪದಾರ್ಥದಂತೆ ಆಗಿಹೋಗುತ್ತದೆ; ಅಂದರೆ ಮನಸ್ಸು ಆಯಾಪದಾರ್ಥರೂಪವಾಗಿ ಹೋಗುತ್ತದೆ. ಈ ಸಂಬಂಧದಿಂದ "ವೇದಾಂತಪರಿಭಾಷೆ"ಎಂಬಗ್ರಂಥದಲ್ಲಿ — "ಯಥಾ ತಡಾಗೋದಕಂ ಛಿದ್ರಾನ್ನಿರ್ಗತ್ಯ, ಕುಲ್ಯಾತ್ಮನಾ ಕೇದಾರಾನ್ ಪ್ರವಿಶ್ಯ, ತದ್ವದೇವ ಚತುಷ್ಕೋಣಾದ್ಯಾಕಾರಂ ಭವತಿ। ತದ್ವತ್ತೈಜಸಮಪ್ಯಂತಃಕರಣಂ ಚಕ್ಷುರಾದಿದ್ವಾರಾ ನಿರ್ಗತ್ಯ ಘಟಾದಿ ವಿಷಯದೇಶಂ ಗತ್ವಾ ತದಾಕಾರತಯಾ ಪರಿಣಮತೇ ಸ ಏವ ಪರಿಣಾಮೋ ವೃತ್ತಿರಿತ್ಯುಚ್ಯತೆ" ಅಂದರೆ, ಒಂದು ಕೆರೆಯನೀರು ತುಂಬಿನಿಂದ ಹೊರಟು ಕಾಲುವೆಯೊಳಗಿಂದ ಹೊಲಕ್ಕೆ ಹೋಗಿ, ಅಲ್ಲಿ ನಾಲ್ಕೂ ಮೂಲೆ ಸಮನಾಗಿ ನಿಂತುಕೊಂಡು ಹೊಲದ ಆಕಾರವನ್ನೇ ಹೊಂದುವದು. ಇದೇ ಮೇರೆಗೆ ತೇಜೋಮಯವಾದ ಮನಸ್ಸಾದರೂ ಕಣ್ಣು ಮುಂತಾದ ದ್ವಾರಗಳಿಂದ ಹೊರಬಿದ್ದು ಗ್ರಾಹ್ಯಪದಾರ್ಥಗಳಿಗೆ ಸಂಬಂಧಿಸಿ ತದಾಕಾರವನ್ನೇ ಹೊಂದುತ್ತದೆ. ಇದಕ್ಕೆ

ಮನಸ್ಸಿನ ವೃತ್ತಿಯೆಂದು ಹೇಳಿರುತ್ತದೆ; ಅಂದಬಳಿಕ ಇಂಥ ಮನಸ್ಸಿನ ರೂಪವನ್ನು ಹೀಗೆಯೇ ಎಂದು ಹ್ಯಾಗೆ ನಿರ್ಧರಿಸಬೇಕು? ಹೀಗೆ ಮನಸ್ಸು ಮಣಿಸಿದತ್ತ ಮಣಿಯುವ ಗುಣವುಳ್ಳದ್ದಾದ್ದರಿಂದಲೇ ಇದು ದುಷ್ಟಸಂಗದಿಂದ ಜೀವಾತ್ಮ ಬಂಧನಕ್ಕೂ, ಸತ್ಸಂಗ ದಿಂದ ಜೀವಾತ್ಮ ನಮೋಕ್ಷಕ್ಕೂ ಕಾರಣವಾಗುತ್ತದೆಂದು, ಅಂದರೆ ಉಪನಿಷದ್ವಾಕ್ಯದಂತೆ, ಮನಸ್ಸು ಬಂಧ-ಮೋಕ್ಷಗಳೆರಡಕ್ಕೂ ಕಾರಣವಾಗುತ್ತದೆಂದು ಹೇಳಬೇಕಾಗುತ್ತದೆ.

ಇನ್ನು, ಮನಸ್ಸಿನ ಸ್ವಭಾವವನ್ನು ಕುರಿತು ವಿಚಾರಿಸುವಾ. ಇದರ ಸ್ವಭಾ ವವು—೧ಚಂಚಲ, ಮತ್ತು ೨ ನಿರ್ಲಿಪ್ತ. ಇವುಗಳಲ್ಲಿ ಮನಸ್ಸಿನ ಚಂಚಲಸ್ವಭಾವವು ಬಹುಪ್ರಸಿದ್ಧವಾಗಿರುವದು. ಮನಸ್ಸು ಒಂದು ಸ್ಥಳದಲ್ಲಿ ಕ್ಷಣಮಾತ್ರವೂ ನಿಲ್ಲುವದಿಲ್ಲ; ಬಾಲ ಸುಟ್ಟ ಬೆಕ್ಕಿನ ಹಾಗೆ ಸಮಾಧಾನವಿಲ್ಲದೆ ಅತ್ತಿತ್ತ ತಿರುಗಾಡುತ್ತಲೇ ಇರುವದು. ಇದಕ್ಕೆ ಹೊಸಹೊಸ ಪದಾರ್ಥಗಳಮೇಲೆ ಪ್ರೀತಿ ಬಹಳ; ಮತ್ತು ಇದರ ಕಲ್ಪನಾಶಕ್ತಿ ಯಾದರೂ ಅತ್ಯಂತಪ್ರಬಲವಾದದ್ದು; ಇದು ಆಶೆಬುರುಕ ಸ್ವಭಾವದ್ದು; ಆದ್ದರಿಂದ ಇದು ಯಾವಾಗಲೂ ಪದಾರ್ಥಗಳನ್ನೇ ಗೋಚರಿಸುತ್ತಲಿರುತ್ತದೆ. ಈ ಕಲ್ಪನಾಶಕ್ತಿ ಆಶೆಬುರುಕ ತನಗಳೇ ಮನಸ್ಸಿನ ಚಂಚಲವೃತ್ತಿಯ ಉತ್ತೇಜಕಗಳಾಗಿರುವಂತೆ ತೋರುತ್ತದೆ. ಇದಕ್ಕೆ ಪದಾರ್ಥಗಳ ಜ್ಞಾನವು ಇಂದ್ರಿಯಗಳ ದ್ವಾರದಿಂದಲೂ, ಅಭಿರುಚಿಯ ಜ್ಞಾನವು ದೇಹಾ ಭಿಮಾನಿಯಾದ ಜೀವಾತ್ಮನ ದ್ವಾರದಿಂದಲೂ ಆಗುತ್ತವಲ್ಲದೆ, ಇದಕ್ಕೆ ಸ್ವತಂತ್ರವಾಗಿ ಪದಾ ರ್ಥಗಳ ಜ್ಞಾನವು ಅಥವಾ ಅಭಿರುಚಿಯ ಜ್ಞಾನವು ಆಗುವದಿಲ್ಲ. ತನಗೆ ರುಚಿಸುವ ಪದಾ ರ್ಥಗಳನ್ನಷ್ಟು ಅದು ಸಂಗ್ರಹಿಸಿಕೊಂಡು ಉಳಿದವನ್ನು ಉಗುಳಿಬಿಡುತ್ತದೆ. ಮನಸ್ಸನ್ನು ಫೋಟೋಗ್ರಾಫರನೆಂತಲೂ, ಪಂಚಜ್ಞಾನೇಂದ್ರಿಯುಗಳನ್ನು ಫೋಟೋತೆಗೆಯುವ ಕನ್ನಡಿ ಗಳೆಂತಲೂ ಭಾವಿಸಬಹುದು. ಈ ಮನಸ್ಸೆಂಬ ಫೋಟೋಗ್ರಾಫರನು ಪಂಚಜ್ಞಾನೇಂದ್ರಿ ಯುಗಳೆಂಬ ಕನ್ನಡಿಗಳಿಂದ ರೂಪ, ರಸ, ಗಂಧ, ಸ್ಪರ್ಶ, ಶಬ್ದಗಳೆಂಬ ವಿಷಯುಗಳ ಫೋಟೋ ಗಳನ್ನು ತಕ್ಕೊಂಡು, ಅವನ್ನು ತನ್ನ ಮಿದುಳೆಂಬ ಪೆಟ್ಟಿಗೆಯಲ್ಲಿ ಬಚ್ಚಿಡುತ್ತಾನೆ. ಬೇಕಾ ದಾಗ ಆ ಫೋಟೋಗಳನ್ನು ಹೊರಗೆ ತೆಗೆಯುವನು, ಬೇಡಾದಾಗ ಬಚ್ಚಿಡುವನು. ಮನಸ್ಸು ತನಗೆ, ಅಂದರೆ ದೇಹಾಭಿಮಾನಿಯಾದ ಜೀವಾತ್ಮನಿಗೆ ಬೇಕಾದ ಸಂಗತಿಯನ್ನು ಹತ್ತಿಪ್ಪತ್ತು ವರ್ಷಗಳವರೆಗೆ, ಅಥವಾ ದೇಹವಿರುವವರೆಗೆ ನೆನಪಿನಲ್ಲಿಟ್ಟಿರುತ್ತದೆ. ಹೆಚ್ಚಿಗೆ ಹೇಳುವದೇನು, ಜನ್ಮಾಂತರದಲ್ಲಿಯೂ ಪೂರ್ವಾನುಭೂತ ಸಂಗತಿಗಳು ಮನಸ್ಸಿನ ನೆನಪಿಗೆ ಬರುತ್ತವೆಂದು ಶಾಸ್ತ್ರಕಾರರು ಹೇಳುವರು; ಆದ್ದರಿಂದಲೇ ಕಾಲಿದಾಸನು—"ಮನೋಹಿ ಜನ್ಮಾಂತರಸಂಗತಿಜ್ಞಂ" ಅಂದರೆ ಮನಸ್ಸು ಜನ್ಮಾಂತರದ ಸಂಗತಿಗಳನ್ನು ತಿಳಿಯುವಂಥಾದ್ದು ಎಂದು ಹೇಳಿರುವನು. ಆದ್ದರಿಂದ ಮನಸ್ಸಿನ ಸ್ಮರಣಶಕ್ತಿಯು ಬಲಿಷ್ಠವಾದದ್ದು. ಅದರ ಆಶೆಬುರುಕತನಕ್ಕಂತು ನೆಲೆಯಿಲ್ಲ. ಅಂದಬಳಿಕ ಅದು ಚಂಚಲವಾಗಿರದೆ ಏನುಮಾಡೀತು?

ಇಷ್ಟಾದರೂ ಮನಸ್ಸು ನಿರ್ಲಿಪ್ತಸ್ವಭಾವದ್ದೆಂದು ಹೇಳುವದು ಬಲು ಆಶ್ಚರ್ಯಕರ ವಾಗಿ ತೋರುವದು; ಆದರೆ ಇದರಲ್ಲಿ ಆಶ್ಚರ್ಯವೇನೂ ಇಲ್ಲ. ಮನಸ್ಸನ್ನು ದಲಾಲನಿಗೆ ಹೋಲಿಸಬಹುದು. ವ್ಯಾಪಾರದಲ್ಲಿ ಕೊಡಕೊಳ್ಳುವ ಗಿರಾಕಿಗಳಿಗಾಗುವ ಲಾಭಹಾನಿಗಳ

ಸುಖದುಃಖಗಳು, ಆ ಕೊಡಕೊಳ್ಳುವ ಗಿರಾಕಿಗಳ ಪ್ರೇರಣೆಯಿಂದ ದಲಾಲಿಯನ್ನು ಮಾಡುವವಲಾಲನಿಗೆ ಹೇಗೆ ಹತ್ತಬೇಕು? ಆತನು ದಲಾಲಿಯು ದೊರೆಯುತ್ತ ಹೋದಂತೆ ಪರಿಪುಷ್ಟವಾಗುತ್ತ ಪೋಗುವನು, ದಲಾಲಿಯು ದೊರೆಯದಾದಂತೆ ನಾಶವಾಗುತ್ತ ಹೋಗುವನು; ಅವರಂತೆ ಜೀವಾತ್ಮನ ಬಂಧನವೂ, ಇಂದ್ರಿಯಗಳ ಪಾಟವವೂ ಹೆಚ್ಚುತ್ತ ಹೋದಂತೆ, ಮನಸ್ಸಿನ ವಿಷಯಾಸಕ್ತಿಯು ಹೆಚ್ಚುತ್ತಹೋಗುವದು; ಮತ್ತು ಜೀವಾತ್ಮನ ಬಂಧನವೂ, ಇಂದ್ರಿಯಪಾಟವವೂ ಕ್ಷೀಣವಾಗುತ್ತ ಹೋದಂತೆ ಮನಸ್ಸು ಕ್ಷೀಣವಾಗುತ್ತ ಹೋಗುವದು. ಆದ್ದರಿಂದಲೇ ಮನಸ್ಸು ಪಾಪಪುಣ್ಯಗಳಿಗೂ, ಅವುಗಳ ಫಲಕ್ಕೂ ಸಂಬಂಧಿಸವೆ, ಅವಕ್ಕೆ ದೇಹಾಭಿಮಾನಿಯಾದ ಜೀವಾತ್ಮನು ಸಂಬಂಧಿಸುತ್ತಾನೆಂದು ಶಾಸ್ತ್ರಾಧಾರಗಳಿಂದ ಸಿದ್ಧವಾಗಿರುತ್ತದೆ. ಉದಾಹರಣಾರ್ಥ, ಕಳವು ಮಾಡಲಿಕ್ಕೆ ಪ್ರೇರಿಸುವದು ಮನಸ್ಸು, ಬಂದೀಖಾನೆಬೀಳುವದು ದೇಹವು, ದುಃಖವು ದೇಹಾಭಿಮಾನಿಯಾದ ಜೀವನಿಗೆ! ದೇಹಾಂತರ್ಗತ ಇಂದ್ರಿಯಗಳ ದ್ವಾರಾ ಆಗುವ ದುಃಖವನ್ನು ಇಂದ್ರಿಯಾಭಿಮಾನಿಯಾದ ಜೀವನು ಭೋಗಿಸುವನೆಂದ ಬಳಿಕ, ಶ್ರೇಷ್ಠ ಇಂದ್ರಿಯವೆನಿಸುವ ಮನಸ್ಸಿಗೆ ಸ್ವತಃ ಪಾಪಪುಣ್ಯಗಳ ಲೇಪವು ಅಥವಾ ಸುಖದುಃಖಗಳ ಭೋಗವು ಎಲ್ಲಿ ಉಳಿಯುವದು? ಆದ್ದರಿಂದ ಮನಸ್ಸನ್ನು ನಿರ್ಲಿಪ್ತವೆಂತಲೇ ಹೇಳಬೇಕಾಗುವದು. ಹೀಗೆಮನವು ಯಾತರಲ್ಲಿಯೂ, ಯಾವಪೆಟಿಗೂ ಸಿಗದೆ ಹಾಗೆಯೇ ಉಳಿದುಕೊಳ್ಳುತ್ತಲಿರುವದರಿಂದ, ವ್ಯಾಕರಣ ಕರ್ತೃವಾದ ಪಾಣಿನಿ ಮುನಿಯು ಇದಕ್ಕೆ ನಪುಂಸಕವೆಂದು ತನ್ನ ವ್ಯಾಕರಣ ಗ್ರಂಥದಲ್ಲಿ ಬರೆದಿಟ್ಟಿರುವನು.

ಇನ್ನು, ಮನಸ್ಸಿನ ಕರ್ತೃತ್ವ ಶಕ್ತಿಯನ್ನು ಕುರಿತು ವಿಚಾರಿಸುವಾ. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು "ಇಂದ್ರಿಯಾಣಾಂ ಮನಶ್ಚಾಸ್ಮಿ" ಎಂದು ಹೇಳಿರುವದರಿಂದ, ಮನಸ್ಸು ಯಾವತ್ತು ಇಂದ್ರಿಯಗಳಲ್ಲಿ ಶ್ರೇಷ್ಠವಾದದ್ದಿರುತ್ತದೆಂಬ ಮಾತು ವ್ಯಕ್ತವಾಗುತ್ತದೆ. ಯಾವತ್ತು ಇಂದ್ರಿಯಗಳ ಮೇಲೆ ಮನಸ್ಸು ಅಧಿಕಾರ ನಡಿಸುವದನ್ನು ವಿಚಾರಿಸಿದರೆ, ಇದೇ ಮಾತು ನಮಗೆ ಗೋತಾಗುತ್ತದೆ. ಒಂದು ದೊಡ್ಡ ಯಂತ್ರದಲ್ಲಿ ಹಲವು ಸಣ್ಣ-ದೊಡ್ಡ ಚಕ್ರಗಳಿರುತ್ತವಷ್ಟೆ? ಅವುಗಳಲ್ಲಿ ಮುಖ್ಯವಾದ ದೊಡ್ಡ ಚಕ್ರವು ತಿರುಗಹತ್ತಿದ ಕೂಡಲೆ ಸಣ್ಣ ಚಕ್ರಗಳು ತಿರುಗಹತ್ತಿ, ಅದು ನಿಂತಕೂಡಲೆ ಅವೂ ನಿಲ್ಲುವವು. ಅದರಂತೆ, ದೇಹವೆಂಬ ಯಂತ್ರದಲ್ಲಿ ಮನಸ್ಸು ಮುಖ್ಯ ಚಕ್ರದಂತೆ ಇರುವದು, ಇಂದ್ರಿಯಗಳು ಸಣ್ಣ ಚಕ್ರಗಳಾಗಿರುವವು. ಮನಸ್ಸಿನ ವ್ಯಾಪಾರವು ನಡೆದ ಕೂಡಲೆ, ಅದಕ್ಕೆ ಆಧೀನವಾಗಿರುವ ಇಂದ್ರಿಯಗಳ ವ್ಯಾಪಾರವು ನಡೆಯಹತ್ತುತ್ತದೆ. ಮನಸ್ಸು ಏಕಾಗ್ರವಾಗಿರುವಾಗ, ಅಥವಾ ಅದು ಯಾವದೊಂದು ಕೆಲಸದಲ್ಲಿ ತೊಡಗಿರುವಾಗ, ಅದರಿಂದ ಪ್ರೇರಿಸಲ್ಪಡವ ಇಂದ್ರಿಯಗಳು ನಿರ್ವ್ಯಾಪಾರವಾಗಿರುತ್ತವೆ. ಅಂದರೆ, ಕಣ್ಣು ತೆರೆದಿದ್ದರೂ ಅದಕ್ಕೆ ಪದಾರ್ಥಗಳು ಕಾಣುವದಿಲ್ಲ. ಕಿವಿಗಳಿಗೆ ಸಪ್ಪಳವೂ ಕೇಳಿಸುವದಿಲ್ಲ. ಇದೇ ಮಾತು ಎಲ್ಲ ಇಂದ್ರಿಯಗಳಿಗೂ ಹತ್ತುವದು. ನಿದ್ರೆಯಲ್ಲಿ ಮನಸ್ಸು ಯಾವ ಇಂದ್ರಿಯಗಳನ್ನು ಪ್ರೇರಿಸದೆಯಿರುವದರಿಂದ, ಆಗ ಎಲ್ಲ ಇಂದ್ರಿಯಗಳೂ ನಿರ್ವ್ಯಾಪಾರ

ವಾಗಿರುತ್ತವೆ. ಹೀಗೆ ಇಂದ್ರಿಯಗಳನ್ನು ಆಧೀನದಲ್ಲಿಟ್ಟುಕೊಳ್ಳುವದಂತು ಇರಲಿ, ಹಿಂದೆ ಹೇಳಿದಂತೆ ಸ್ವಭಾವತಃ ಸ್ವತಂತ್ರನಾದ ಆತ್ಮನನ್ನು ಮನಸ್ಸು ಆಧೀನದಲ್ಲಿಟ್ಟುಕೊಂಡಿರುವದು. ಯಾರಾದರೂ ನಮಗೆ ಬುದ್ಧಿಯ ಮಾತನ್ನು ಹೇಳುವಾಗ ಅದು ನಮಗೆ ಸೇರದಿದ್ದರೆ ನಾವು ಬುದ್ಧಿ ಹೇಳುವವರಿಗೆ "ನಾನು ನನ್ನ ಮನಸ್ಸಿಗೆ ಬಂದ ಹಾಗೆ ಮಾಡುತ್ತೇನೆ, ನೀನು ಹೇಳುವ ಕಾರಣವಿಲ್ಲ"ಎಂದು ಹೇಳುವೆವು. ಇದರಿಂದ ಮನಸ್ಸಿನ ಅಧಿಕಾರ ಶಕ್ತಿಯು ಪ್ರಾಬಲ್ಯವು ಗೊತ್ತಾಗುತ್ತದೆ. ಆತ್ಮನು ಮನಸ್ಸಿನ ಕೈಯಲ್ಲಿ ಸಿಕ್ಕನೆಂದರೆ, ಆ ಮರ್ಕಟ ಸ್ವರೂಪದ ಚಂಚಲಮನಸ್ಸು ಆತ್ಮನನ್ನು ಹ್ಯಾಗೆ ಹ್ಯಾಗೆ ಕುಣಿಸುವದೆಂಬದನ್ನು ನಾವು ಹೇಳಲಾರೆವು. ಕೇವಲ ಮನಸ್ಸಿನಕೈಯಲ್ಲಿ ಸಿಕ್ಕಿದ್ದ ನಮ್ಮನ್ನು ಮನಸ್ಸು ಹ್ಯಾಗೆ ಎಳೆದಾಡುವದೆಂಬದರ ಅನುಭವವು ನಮಗೆ ಇದ್ದೇ ಇರುತ್ತದೆ. ಒಮ್ಮೆ ನಾವು ಉದ್ಯೋಗತತ್ಪರರಾಗುವೆವು, ಒಮ್ಮೆ ಉದಾಸೀನರಾಗುವೆವು; ಒಮ್ಮೆ ಲುಬ್ಧರಾಗುವೆವು, ಒಮ್ಮೆ ಉದಾರರಾಗುವೆವು, ಒಮ್ಮೆ ಸಂಸಾರಾಸಕ್ತಿಗೆ ಸಿಗುವೆವು, ಒಮ್ಮೆ ವೈರಾಗ್ಯವನ್ನು ತಾಳುವೆವು; ಒಮ್ಮೆ ಒಬ್ಬರ ವಿಷಯವಾಗಿ ಸ್ನೇಹ ತಾಳುವೆವು, ಒಮ್ಮೆ ದ್ವೇಷತಾಳುವೆವು. ಹೀಗೆ ಹಲವು ಭಾವನೆಗಳಿಂದ, ಹಾಗು ಆಯಾ ಭಾವನೆಗನುಸರಿಸಿದ ಕೃತಿಗಳಿಂದ ಆತ್ಮವು ವ್ಯಥೆಗೊಳ್ಳುತ್ತಿರುತ್ತದೆ; ಆದರೂ ಮನಸ್ಸಿನ ಅಧಿಕಾರವನ್ನು ಅತಿಕ್ರಮಿಸುವದು ಆತ್ಮನಿಂದ ಆಗುವದಿಲ್ಲ.

ಮನಸ್ಸಿನ ಈ ಅಧಿಕಾರಶಕ್ತಿಯಂತೆ ಅದರ ವೇಗಶಕ್ತಿಯು ಅತರ್ಕ್ಯವಾಗಿರುವದು. ದೇಹವು ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ಹೋಗಬೇಕಾದರೆ, ಅದಕ್ಕೆ ಸರಿಯಾದ ಮಾರ್ಗವು ಬೇಕಾಗುತ್ತದೆ. ಇದಲ್ಲದೆ ಅಲ್ಲಲ್ಲಿ ಹೊಳೆಹಳ್ಳಗಳಿದರೆ ಅವನ್ನು ದಾಟುವದಕ್ಕೆ ಪೂಲುಗಳು ಬೇಕಾಗುವವು. ಮಾರ್ಗದಲ್ಲಿ ಗಿಡಗಂಟಿಗಳಿದ್ದರೆ ತಗ್ಗುದಿನ್ನೆಗಳಿದ್ದರೆ ಅಲ್ಲಿ ಇದರ ಗತಿಯು ಕುಂಠಿಸುತ್ತದೆ. ಮತ್ತು ಹುಲಿ, ಕರಡಿ ಮುಂತಾದ ಪ್ರಾಣಿಗಳು ಎದುರಿಗೆ ಬಂದರೆ ಮುಂದೆ ಹೋಗದೆ ಹಿಂದಕ್ಕೆ ತಿರಗುತ್ತದೆ, ಇದಲ್ಲದೆ ಇದು ಹೋಗುವದಕ್ಕೆ ಕಾಲವಿಲಂಬವಾಗುತ್ತದೆ. ಮತ್ತು ಗಾಡಿ, ಕುದುರೆ ಮುಂತಾದ ಸಾಧನಗಳು ಬೇಕಾಗುತ್ತವೆ. ನಡುವೆ ಬೇನೆ ಮುಂತಾದ್ದರ ಸಂಭವವಾದರೆ ಅಲ್ಲಿಯೇ ಕೆಲವು ಕಾಲ ನಿಲ್ಲಬೇಕಾಗುವದು; ಮತ್ತು ಯಾರಾದರೂ ಪ್ರತಿಬಂಧಿಸಿದರೆ, ಮುಂದೆ ಹೋಗುವ ಹಾಗಿಲ್ಲ. ಇವೇ ಮುಂತಾದ ಕಾರಣಗಳಿಂದ ಮಾರ್ಗಕ್ರಮಣದಲ್ಲಿ ದೇಹವು ಸ್ವತಂತ್ರವಾದದ್ದಲ್ಲೆಂದು ಸಹಜವಾಗಿ ತಿಳಿದುಬರುತ್ತದೆ. ಮನವು ಮಾತ್ರ ಹಾಗಲ್ಲ, ಮನವು ಅಲ್ಪ ಸಮಯದಲ್ಲಿಯೇ ಬಹಳ ದೂರ ಹೋಗುತ್ತದೆ. ಅದು ಯಾವ ಪ್ರತಿಬಂಧಕಕ್ಕೂ ಒಳಗಾಗುವದಿಲ್ಲ. ಇದು ತೇಜೋಮಯವಾಗಿರುವದರಿಂದ ಇವರ ಗತಿಯೂ, ತೇಜಸ್ಸಿನ ಗತಿಯೂ ಒಂದೇ ಪ್ರಕಾರದವಾಗಿರುವವು. ದೀಪವು ಕುಂಬಳಬೀಜದಷ್ಟು ಇದ್ದರೂ ಅದರ ಪ್ರಕಾಶವು ಬಹಳ ಪ್ರದೇಶಗಳನ್ನು ವ್ಯಾಪಿಸುತ್ತದೆಂಬದು ಸರ್ವರಿಗೂ ಅನುಭೂತವಾದ ವಿಷಯವೇ ಇರುತ್ತದೆ. ಇದೇ ಮೇರೆಗೆ ಮನವಾದರೂ ತಾನು ಅಲ್ಪವಿದ್ದರೂ ಅದರ ಪ್ರಕಾಶವು ಬಹಳ ಪ್ರದೇಶಗಳನ್ನು ವ್ಯಾಪಿಸುತ್ತದೆ. ಮತ್ತು ಸೂಕ್ಷ್ಮರೀತಿಯಾಗಿ

ವಿಚಾರಿಸಿ ನೋಡಿದರೆ ಈ ಮನಕ್ಕೆ ಸೂರ್ಯಪ್ರಕಾಶವುಕೂಡಹತ್ತುವದಿಲ್ಲ. ಯಾಕಂದರೆ, ಸೂರ್ಯಪ್ರಕಾಶಕ್ಕೆ ನಿಲುಕದ ಪ್ರದೇಶವನ್ನೂ ಮನವು ವ್ಯಾಪಿಸುವದು. ಸರ್ವಜ್ಞರಾದ ನಮ್ಮ ಪ್ರಾಚೀನಋಷಿಗಳ ಯೋಗಸಿದ್ಧಮನಸ್ಸೇ ಇದಕ್ಕೆ ಉದಾಹರಣವೆಂದು ಹೇಳಬಹುದು. ಮನುಷ್ಯನು ಯೋಗಶಾಸ್ತ್ರವನ್ನು ಚನ್ನಾಗಿ ಅಭ್ಯಾಸ ಮಾಡಿದಕೂಡಲೆ ಯೋಗಜಜ್ಞಾನವೆಂಬದೊಂದು ಜ್ಞಾನವು ಅವನಲ್ಲಿ ಹುಟ್ಟುತ್ತದೆ. ಅದು ವ್ಯವಹಾರಜ್ಞಾನಕ್ಕೂ, ಶಾಸ್ತ್ರಜ್ಞಾನಕ್ಕೂ ಭಿನ್ನವಾಗಿರುತ್ತದೆ. ವ್ಯವಹಾರಜ್ಞಾನ ಶಾಸ್ತ್ರಜ್ಞಾನಗಳಿಂದ ಪ್ರಾಪ್ತವಾಗದ್ದು, ಈ ಯೋಗಜಜ್ಞಾನದಿಂದ ಪ್ರಾಪ್ತವಾಗುತ್ತದೆ. ಉದಾಹರಣಾರ್ಥ ಸೌಭರಿಯೆಂಬಋಷಿಯು ಅಷ್ಟಾಂಗಯೋಗವಲ್ಲಿ ಪಾರಂಗತನಾಗಿದ್ದದ್ದು, ಪ್ರಸಿದ್ಧವಾಗಿರುವದು. ಆತನು ತನ್ನ ಆ ಯೋಗಜಜ್ಞಾನದ ಬಲದಿಂದ ವಿಚಾರಿಸಿನೋಡಲು, ಒಂದುಸಾವಿರ ಜನ್ಮಗಳು ಅತಿಕ್ರಮಿಸಿ ಹೋದಮೇಲೆ ತನಗೆ ಮುಕ್ತಿಯಾಗುವದೆಂಬ ಸಂಗತಿಯು ತಿಳಿದುಬಂದಿತು. ಆಗ ಅವನು ಇಷ್ಟೊಂದುಜನ್ಮಗಳನ್ನು ಹೇಗೆ ಕ್ರಮಿಸಲಿ, ಜನ್ಮವನ್ನು ತೆಗೆದುಕೊಂಡಮೇಲೆ ಸಹಜವಾಗಿಯೇ ದೇಹಬರುವದು, ದೇಹವನ್ನು ಧರಿಸಿದಮೇಲೆ ಪುಣ್ಯ, ಪಾಪಗಳ ಮಿಶ್ರಣದಿಂದ ಸುಖ, ದುಃಖಗಳೆರಡೂ ಸಂಭವಿಸುವವು. ಸುಖವನ್ನನುಭವಿಸಬಹುದು; ಆದರೆ ದುಃಖವನ್ನನುಭವಿಸುವದು ಬಹಳಕಷ್ಟ. ಎಂದು ಆಲೋಚಿಸಿ, ಮುನಿಯು ತನ್ನಯೋಗಾಭ್ಯಾಸದ ಪ್ರಭಾವದಿಂದ ಒಂದುಸಾವಿರ ಸೌಭರಿಋಷಿಯ ದೇಹಗಳನ್ನು ತೆಗೆದುಕೊಂಡನು. ಹಲವು ವರ್ಷಗಳಮೇಲೆ ಕ್ರಮದಿಂದಾಗಲಿ, ಒಂದೇಕಾಲದಲ್ಲಾಗಲಿ ಆ ದೇಹಗಳೆಲ್ಲ ಬಿದ್ದುಹೋದಕೂಡಲೆ ಮುಕ್ತಿಯನ್ನು ಹೊಂದಿದನು. ಆಗ ಆ ಸಮಯದಲ್ಲಿದ್ದ ಮಹಾನುಭಾವರಾದ ಋಷಿಗಳೆಲ್ಲ ಕೂಡಿ ಆತನಿಗೆ ಯೋಗವ್ಯಾಘ್ರನೆಂಬ ಹೆಸರುಕೊಟ್ಟರು.

ಹೀಗೆ ಮನಸ್ಸು ವೇಗಶಾಲಿಯಾಗಿರುವದಲ್ಲದೆ, ಅದು ಅತ್ಯಂತ ಉದ್ಯೋಗತತ್ಪರವಾಗಿರುವದು. ಈ ಅಭಿಪ್ರಾಯವನ್ನು "ನಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್" "ಅಂದರೆ "ಮನುಷ್ಯನು ಒಂದುಕ್ಷಣವಾದರೂ ಸುಮ್ಮನಿರದೆ ಕೆಲಸಮಾಡುತ್ತಿರುವನೆಂ"ದು ಭಗವದ್ಗೀತೆಯು ಹೇಳುತ್ತದೆ. ಇಲ್ಲಿ ಕೆಲಸಮಾಡತಕ್ಕದ್ದೆಂದರೆ ಮನವೇ. ಆತ್ಮನಲ್ಲ. ಒಂದು ಬ್ರಾಹ್ಮಣಸಮಾರಾಧನದಲ್ಲಿ ಅಡಿಗೆಮುಂತಾದ ಕೆಲಸಗಳನ್ನು ಮಾಡತಕ್ಕವರು ಬೇರೆಯಿದ್ದು, ಯಜಮಾನನು ನೋಡುತ್ತ ಸುಮ್ಮನೆ ಇರುತ್ತಾನೆ; ಆದರೆ ಆ ಪ್ರಸ್ತವು ಉತ್ತಮರೀತಿಯಾಗಿ ಜರುಗಿದರೆ ಕೀರ್ತಿಯೂ, ಕೆಟ್ಟರೆ ಅಪಕೀರ್ತಿಯೂ ಏನೂ ಕೆಲಸಮಾಡದಿದ್ದ ಯಜಮಾನನಿಗೇ ಬರುತ್ತವೆ. ಯಾಕಂದರೆ ಆ ಯಜಮಾನನು ಆ ಕೆಲಸವು ತನ್ನದೆಂದು ಭಾವಿಸಿರುತ್ತಾನೆ. ಆದ್ದರಿಂದ ಅದರಿಂದುಂಟಾಗುವ ಕೀರ್ತಿಗೂ, ಅಪಕೀರ್ತಿಗೂ ಅವನು ಪಾತ್ರನಾಗುತ್ತಾನೆ. ಈ ದೃಷ್ಟಾಂತದ ಮೇಲಿಂದ ಮನಮುಂತಾದ ಪರಿವಾರವುಮಾಡಿದ ಕೆಲಸದಫಲವು ಆತ್ಮನಿಗೆ ಆಗುತ್ತದೆ. ಮಾಡತಕ್ಕದ್ದು ಪರಿವಾರವೇ. ಫಲವು ಯಜಮಾನನಿಗೆ. ಆದ್ದರಿಂದ ಮೇಲಿನ ಭಗವದ್ಗೀತೆಯವಾಕ್ಯವು ಫಲಾಭಿಪ್ರಾಯದಿಂದ ಜೀವಾತ್ಮನನ್ನುದ್ದೇಶಿಸಿದರೂ ಅದಕ್ಕೆ ಮನವೇಗೋಚರವಾದ್ದೆಂದು

ತಿಳಿಯಬೇಕು. ಮುಖ್ಯವಾಗಿ ಕೆಲಸಮಾಡುವದು ಮನವೇ ಇರುವದು. ಈರೀತಿಯಾಗಿ ಸುಷುಪ್ತಿಯನ್ನುಬಿಟ್ಟು ಉಳಿದಅವಸ್ಥೆಗಳಲ್ಲಿ ಉದ್ಯೋಗಮಾಡುವದು ಮನಸ್ಸಿನ ಹೊರತು ಯಾವದೂ ಇಲ್ಲ. ಕೆಲಸಮಾಡುವ ವಿಷಯದಲ್ಲಿ ಮನಕ್ಕೆ ಬೇಸರವೇ ಇಲ್ಲ. ಇಪ್ಪತ್ತುನಾಲ್ಕು ತಾಸುಗಳುಳ್ಳ ದಿವಸದಲ್ಲಿ ಒಂದುತಾಸು ಹೊತ್ತು ಸುಷುಪ್ತಿಯಾದರೆ ಬಹಳ. ಒಂದೊಂದುದಿವಸ ಸುಷುಪ್ತಿಯೇ ಬರುವದಿಲ್ಲ. ಬರೇ ಸ್ವಪ್ನ, ಅಥವಾ ಜಾಗ್ರತ್ ಈ ಅವಸ್ಥೆಯಲ್ಲಿಯೇ ಕಾಲವು ಕ್ರಮಿಸಿಹೋಗುತ್ತದೆ. ಸುಷುಪ್ತಿಯಲ್ಲಿ ಜೀವಾತ್ಮನು ಪರಮಾತ್ಮನಹತ್ತರ ಹೋಗಿರುತ್ತಾನೆ. ಆಗ ಆತನಿಗೂ ಈತನಿಗೂ ಸಂಬಂಧವಾದ್ದರಿಂದ, ಇಂದ್ರಿಯಗಳು ಮತ್ತು ಮನವು ಇವೆರಡೂ ವ್ಯಾಪಾರಶೂನ್ಯಗಳಾಗಿರುತ್ತವೆ. ಆಗ ಸುಖ-ದುಃಖಗಳಿಗೆ ಜನಕವಾಗಿರುವ ವಿಷಯಗಳಸಂಬಂಧವೇ ಮನಕ್ಕೆ ಆಗುವದಿಲ್ಲ. ಜೀವನಿಗೆ ಮನಸ್ಸಿನದ್ವಾರದಿಂದಲೇ ಸುಖ-ದುಃಖಗಳ ಜ್ಞಾನವಾಗತಕ್ಕದ್ದು. ಅಂಥಮನವೇ ವ್ಯಾಪಾರಶೂನ್ಯವಾಗಿರುವಾಗ ಜೀವನಿಗೆ ವ್ಯವಹಾರದ ಸುಖ-ದುಃಖಗಳ ಸಂಬಂಧವೇ ಆಗುವದಿಲ್ಲ. ಇದೊಂದು ಅವಸ್ಥೆಯಹೊರತು ಉಳಿದ ಜಾಗ್ರದವಸ್ಥೆ, ಸ್ವಪ್ನಾವಸ್ಥೆಗಳಲ್ಲಿ ಮನಸ್ಸು ಯಾವದೊಂದು ಉದ್ಯೋಗ ಮಾಡುತ್ತಲೇ ಇರುತ್ತದೆ. ಜಾಗ್ರದವಸ್ಥೆಯಲ್ಲಿ ಅದು ಮುಖ್ಯವಾಗಿ ಇಂದ್ರಿಯಗಳನ್ನು ಕಟ್ಟಿಕೊಂಡು ಕೆಲಸಮಾಡುವದು- ಸ್ವಪ್ನಾವಸ್ಥೆಯಲ್ಲಿ ಮುಖ್ಯವಾಗಿ ತಾನೊಂದೇ ಕೆಲಸಮಾಡುವದು; ಅಂದಬಳಿಕ ಇದರ ಉದ್ಯೋಗತತ್ಪರತೆಯು ಎಷ್ಟೆಂಬದನ್ನು ವಾಚಕರು ತರ್ಕಿಸಬಹುದು.

---

## ೨ ನೆಯ ಪ್ರಕರಣ— ಇಂದ್ರಿಯಗಳು.

—बलवानिंद्रियग्रामो विद्वांस मपिकर्षति. [श्रीमद्भागवत

“ಇದಿ, ಪರಮೈಶ್ವರ್ಯೇ” ಎಂಬ ‘ಇದಿ’ ಧಾತುವಿನಿಂದ ಸಿದ್ಧವಾದ ಇಂದ್ರಿಯ ಶಬ್ದವು ಇಂದ್ರಿಯಗಳ ಪರಮಸಾಮರ್ಥ್ಯವನ್ನು ತೋರಿಸುತ್ತದೆ. ವಿಚಿತ್ರಸಾಮರ್ಥ್ಯವುಳ್ಳ ಈ ಇಂದ್ರಿಯಗಳು ಮನಸ್ಸಿಗೆ ಸಹಾಯಭೂತಗಳಾಗಿರುತ್ತವೆ. ಮನಸ್ಸಿಗೆ ಇವುಗಳಸಹಾಯದ ಹೊರತು ಯಾವ ಪದಾರ್ಥಗಳ ಜ್ಞಾನವೂ ಆಗುವದಿಲ್ಲ. ಮನಸ್ಸೆಂಬದೊಂದು ರಾಜನೆಂದು ಕಲ್ಪಿಸಿ, ಇಂದ್ರಿಯಗಳು ಅವನ ಪರಿಚಾರಕರೆಂದು ಕಲ್ಪಿಸಬಹುದು. ರಾಜನಿಗೆ ಪರಿಚಾರಕರು ಜ್ಞಾನವನ್ನುಂಟುಮಾಡಿದಂತೆ ಇಂದ್ರಿಯಗಳು ಮನಸ್ಸಿಗೆ ಪದಾರ್ಥಜ್ಞಾನವನ್ನು ಮಾಡಿಕೊಡುತ್ತವೆ. ಈ ಪದಾರ್ಥಜ್ಞಾನ ಮಾಡಿಕೊಡುವ ಇಂದ್ರಿಯಗಳು ಜ್ಞಾನೇಂದ್ರಿಯಗಳೆಂದು ಹೇಳಲ್ಪಡುವವು. ಇವಲ್ಲದೆ ಕರ್ಮೇಂದ್ರಿಯಗಳು ಬೇರೆ ಇರುವವು. ಜ್ಞಾನೇಂದ್ರಿಯಗಳು ಮನಸ್ಸಿಗೆ ಜ್ಞಾನವನ್ನು ಸಂಪಾದಿಸಿಕೊಟ್ಟಮೇಲೆ ಮನಸ್ಸು ಕಾರ್ಯಾಕಾರ್ಯ ವಿವೇಚನವನ್ನು ಮಾಡಿ ಕರ್ತವ್ಯದ ವಿಷಯವಾಗಿ ಆಜ್ಞಾಪಿಸಿದ

ಕೂಡಲೆ ಕರ್ಮಮಾಡಲಿಕ್ಕೆ ಮುಂದುವರಿಯುವ ಇಂದ್ರಿಯಗಳು ಕರ್ಮೇಂದ್ರಿಯಗಳು. ಜ್ಞಾನೇಂದ್ರಿಯಗಳು ಐದು, ಕರ್ಮೇಂದ್ರಿಯಗಳು ಐದು. ಹೀಗೆ ಒಟ್ಟು ಹತ್ತುಇಂದ್ರಿಯಗಳು ಮನಸ್ಸಿನ ಕಿಂಕರರಾಗಿ ಈ ದೇಹದಲ್ಲಿರುತ್ತವೆ.

ಜ್ಞಾನೇಂದ್ರಿಯಗಳು ನೇತ್ರ, ಶ್ರೋತ್ರ, ಘ್ರಾಣ, ಜಿಹ್ವಾ, ಚರ್ಮವೆಂಬವು. ಇವುಗಳಲ್ಲಿ ಮೊದಲನೆಯ ನೇತ್ರವೆಂಬ ಇಂದ್ರಿಯವು ರೂಪವೆಂಬ ವಿಷಯವನ್ನು ಹಿಡಿಯುತ್ತದೆ, ಇದಕ್ಕೆ ಇದೊಂದೇ ಕೆಲಸವು, ಮತ್ತೊಂದು ವಿಷಯದಪರಿಜ್ಞಾನವು ಇದಕ್ಕೆ ಆಗುವದಿಲ್ಲ, ಮತ್ತು ಈ ಇಂದ್ರಿಯವು ಕಣ್ಣುಗುಡ್ಡಿಯಿಂದ ಹೊರಬಿದ್ದು, ತನಗೆ ವಿಷಯವಾದ ರೂಪವಿದ್ದಲ್ಲಿ ಹೋಗಿ ಆ ರೂಪವನ್ನು ಗ್ರಹಿಸುತ್ತದೆ. ಈ ಇಂದ್ರಿಯವು ತೇಜೋಮಯವಾದದ್ದರಿಂದ ಇದರ ಗತಿಯು ಬಹು ತೀವ್ರವಿರುತ್ತದೆ. ಆದ್ದರಿಂದ ಕಣ್ತೆರದಕೂಡಲೆ ರೂಪವೇ ಗೋಚರವಾಗುತ್ತದೆ. ಆದರೆ ಇದು ಹೊರಬಿದ್ದು ರೂಪವಿದ್ದಲ್ಲಿ ಹೋಗಿ ಅದನ್ನುಹಿಡಿದದ್ದು ಸಹಸಾ ಮನಸ್ಸಿನ ಕಲ್ಪನೆಯಲ್ಲಿಯೇ ಬರುವದಿಲ್ಲ. ಈ ನೇತ್ರೇಂದ್ರಿಯಕ್ಕೆ "ಗತ್ವಾಗ್ರಾಹಿ"ಎಂದು ಹೆಸರು ಇರುವದು. ಉಳಿದನಾಲ್ಕು ಜ್ಞಾನೇಂದ್ರಿಯಗಳು ತಾವು ಇದ್ದಲ್ಲಿಯೇ ಇದ್ದು, ತಮ್ಮ ಹತ್ತರ ವಿಷಯಗಳುಬಂದಾಗ ಅವನ್ನು ಹಿಡಿಯತಕ್ಕವು; ವಿಷಯಗಳಿದ್ದಸ್ಥಾನಕ್ಕೆ ಇವು ಹೋಗುವವಲ್ಲ. ಆದ್ದರಿಂದ ಇವಕ್ಕೆ "ಸ್ಥಿತ್ವಾಗ್ರಾಹಿ"ಗಳೆಂದುಹೆಸರು. ಪೃಥಿವೀ-ಜಲ-ತೇಜ-ವಾಯು-ಆಕಾಶಗಳೆಂದು ಪಂಚಭೂತಗಳುಂಟು. ಇವೇ ಪಂಚಭೂತಗಳಿಂದ ಪರಮೇಶ್ವರನು ನಮ್ಮ ದೇಹವನ್ನು ನಿರ್ಮಿಸಿದ್ದರಿಂದ, ನಮ್ಮ ದೇಹವು ಪಾಂಚಭೌತಿಕವೆಂದು ಹೇಳಲ್ಪಡುವದು. ಈ ಪಂಚಭೂತಗಳೊಳಗೆ ಒಂದೊಂದು ಜ್ಞಾನೇಂದ್ರಿಯವು ಒಂದೊಂದು ಭೂತಕ್ಕೆ ಸಂಬಂಧಪಟ್ಟಿರುತ್ತದೆ, ಅದು ಹೇಗಂದರೆ—ನೇತ್ರೇಂದ್ರಿಯವು ತೇಜೋಮಯವಾದದ್ದರಿಂದ ತೇಜವೆಂಬ ಭೂತಕ್ಕೆ ಸಂಬಂಧಿಸುತ್ತದೆ. ಶ್ರೋತ್ರೇಂದ್ರಿಯವು ಆಕಾಶವೆಂಬ ಭೂತಕ್ಕೆ ಸಂಬಂಧಿಸುವದು. ಘ್ರಾಣವೆಂಬ ಇಂದ್ರಿಯವು, ಪೃಥಿವೀಯೆಂಬ ಭೂತಕ್ಕೆ ಸಂಬಂಧಿಸುವದು, ಜಿಹ್ವೆಯೆಂಬ ಇಂದ್ರಿಯವು ಜಲವೆಂಬಭೂತಕ್ಕೆ ಸಂಬಂಧಿಸುವದು, ಚರ್ಮವೆಂಬ ಇಂದ್ರಿಯವು ವಾಯುವೆಂಬಭೂತಕ್ಕೆ ಸಂಬಂಧಿಸುತ್ತದೆ. ಈರೀತಿಯಾಗಿ ಐದೂ ಇಂದ್ರಿಯಗಳು ತಮ್ಮ ತಮ್ಮ ಭೂತಗಳೆನಿಸುವ ಪೃಥಿವೀ ಮುಂತಾದವುಗಳ ಗುಣಗಳನ್ನು, ಅಂದರೆ ರೂಪಮುಂತಾದ ಗುಣಗಳನ್ನು ಗ್ರಹಿಸಿ ಅವುಗಳಜ್ಞಾನವನ್ನು ಮನಸ್ಸಿಗೆ ಮಾಡಿಕೊಡುತ್ತವೆ. ಮನಸ್ಸಾದರೂ ಅವುಗಳಲ್ಲಿ ತನಗೆ ಬೇಕಾದದ್ದನ್ನು, ಬೇಡಾದದ್ದನ್ನು ನಿರ್ಣಯಿಸಿಕೊಂಡು, ಸಂಪಾದಿಸುವದಕ್ಕೂ, ಬಿಡುವದಕ್ಕೂ ಆಜ್ಞಾಪಿಸುವದು. ಆಮೇಲೆ ಕರ್ಮೇಂದ್ರಿಯಗಳು, ಅಂದರೆ ವಾಕ್-ಪಾಣಿ-ಪಾದ-ಪಾಯು-ಉಪಸ್ಥ-ಎಂಬವು ಕೆಲಸಮಾಡಹತ್ತುತ್ತವೆ. ವಾಗಿಂದ್ರಿಯವು ಆಹ್ವಾನ-ನಿಷೇಧಗಳೆಂಬ ಕೆಲಸಗಳನ್ನೂ, ಪಾಣೀ (ಕೈ) ಎಂಬಇಂದ್ರಿಯವು ಹಾನೋಪಾದಾನ, ಭರ್ತ್ಸನ, ತಾಡನ ಮುಂತಾದ ಕೆಲಸಗಳನ್ನೂ, ಪಾದ (ಕಾಲು) ಎಂಬಇಂದ್ರಿಯವು ಗಮನಾಗಮನಗಳೆಂಬ ಕೆಲಸಗಳನ್ನೂ, ಪಾಯು (ಅಪಾನ) ಎಂಬಇಂದ್ರಿಯವು ಮಲವಿಸರ್ಜನದ ಕೆಲಸವನ್ನೂ, ಉಪಸ್ಥ (ಜನನೇಂದ್ರಿಯ)

ಎಂಬ ಇಂದ್ರಿಯವು ಪ್ರಜೋತ್ಪಾದನವೆಂಬ ಕಾರ್ಯವನ್ನು ಮಾಡುತ್ತವೆಂಬುವದು ಸರ್ವರಿಗೂ ವಿದಿತವಾದ ವಿಷಯವೇ ಇರುತ್ತದೆ.

ಜ್ಞಾನೇಂದ್ರಿಯಗಳೇ ಆಗಲಿ, ಕರ್ಮೇಂದ್ರಿಯಗಳೇ ಆಗಲಿ, ಪ್ರತಿಯೊಂದು ಇಂದ್ರಿಯಗಳು ತಮ್ಮ ತಮ್ಮ ಕೆಲಸಗಳನ್ನು ಮಾಡುವದಕ್ಕೆ ಸಮರ್ಥಗಳಾಗಿದ್ದರೂ ಅವುಗಳ ಕಡೆಗೆ ಮನಸ್ಸಿನ ಒಲವು ಇರಬೇಕಾಗುತ್ತದೆ. ಇವು ಕೆಲಸಮಾಡುವಾಗ ಮನಸ್ಸು ಇವುಗಳಲ್ಲಿ ಕೂಡಿಕೊಳ್ಳದಿದ್ದರೆ ಇವುಗಳಿಂದ ಯಾವಕೆಲಸವೂ ಆಗುವದಿಲ್ಲ. ಮನಸ್ಸು ಬೇರೆ ಎಲ್ಲಿಯಾದರೂ ಹೋಗಿದ್ದರೆ ಕಣ್ದೆರದಿದ್ದರೂ ರೂಪವೇ ತೋರುವದಿಲ್ಲ, ಇದರಂತೆ ಶಬ್ದವೂ ಕೇಳುವದಿಲ್ಲ, ಗಂಧವೂ ತಿಳಿಯುವದಿಲ್ಲ, ರಸಜ್ಞಾನವೂ ಆಗುವದಿಲ್ಲ, ಸ್ಪರ್ಶವೂ ತಿಳಿಯುವದಿಲ್ಲ. ಈ ಅಭಿಪ್ರಾಯವನ್ನು ಭಗವದ್ಗೀತೆಯಲ್ಲಿ— "ಇಂದ್ರಿಯಾಣಾಂ ಹಿ ಚರತಾಂ ಯನ್ಮನೋನು ವಿಧೀಯತೆ। ತದಸ್ಯ ಹರತಿ ಪ್ರಜ್ಞಾಂ ವಾಯುರ್ನಾವಮಿವಾಂಭಸಿ॥" "ಯಾವಾಗಲೂ, ಇಂದ್ರಿಯಗಳು ವಿಷಯಗಳಲ್ಲಿ ಸಂಚರಿಸತಕ್ಕ ಸ್ವಭಾವವುಳ್ಳವಾಗಿರುತ್ತವೆ, ಅವುಗಳ ಕರ್ತವ್ಯಕರ್ಮವೇ ಅದಾಗಿರುವದು; ಆದರೆ ಆ ಇಂದ್ರಿಯಗಳ ಸಂಗಡ ಮನಸ್ಸನ್ನುಮಾತ್ರ ಕಳಿಸಿದರೆ ಸಾಕು, ನೀರಲ್ಲಿರುವ ನಾವಿಕೆಯನ್ನು ಅನುಕೂಲಮಾರುತನು ಹಾರಿಸುವಂತೆ ಅದು ಮನುಷ್ಯನ ಕರ್ತವ್ಯಾಕರ್ತವ್ಯವಿವೇಕವನ್ನು ಅಪಹರಿಸುತ್ತದೆ. ಅಂದರೆ ಮನುಷ್ಯನು ಇಂದ್ರಿಯ ವಶನಾಗಿ ವ್ಯವಹರಿಸಹತ್ತಿದರೆ ಸದ್ವಿಚಾರಭ್ರಷ್ಟನಾಗುವನೆಂಬ ತಾತ್ಪರ್ಯವು ಈ ಶ್ಲೋಕದಿಂದ ವ್ಯಕ್ತವಾಗಿರುತ್ತದೆ. ಇಂದ್ರಿಯಗಳು ತಮಗೆ ಸ್ವಾಧೀನನಾದ ಮನುಷ್ಯನನ್ನು ಅಡ್ಡಹಾದಿಗೆ ಹಚ್ಚದೆ ಎಂದೂ ಬಿಡವು ಎಂಬ ಅಭಿಪ್ರಾಯವನ್ನು ಶ್ರೀಮದ್ಭಾಗವತದ "ಮಾತ್ರಾ ಸ್ವಸ್ರಾ ದುಹಿತ್ರಾ ವಾ ನೈಕಶಯ್ಯಾಸನೋ ಭವೇತ್। ಬಲವಾನಿಂದ್ರಿಯಗ್ರಾಮೋ ವಿದ್ವಾಂಸಮಪಿಕರ್ಷತಿ।" ತಾಯಿಯಾಗಲಿ, ಅಕ್ಕ-ತಂಗಿಯರಾಗಲಿ, ಮಗಳೇ ಆಗಲಿ, ಇವರೊಡನೆ ಪುರುಷನು ಒಂದೇ ಹಾಸಿಕೆಯಲ್ಲಿ, ಅಥವಾ ಒಂದೇ ಆಸನದಲ್ಲಿ ಕದಾಚಿತ್ಕಾಲವಲ್ಲಿಯಾದರೂ ಕುಳಿತುಕೊಳ್ಳಬಾರದು ಯಾಕಂದರೆ ಇಂದ್ರಿಯಗಳ ಹಿಂಡು ಬಲಾಢ್ಯವಾಗಿರುವವರಿಂದ ಪಂಡಿತನನ್ನೂ ಕೂಡ ಸ್ವಾಧೀನನ್ನಾಗಿ ಮಾಡಿಕೊಳ್ಳುತ್ತದೆ" ಎಂಬ ಶ್ಲೋಕವು ತೋರಿಸುತ್ತದೆ ಈ ಶ್ಲೋಕದಲ್ಲಿಯ "ವಿದ್ವಾಂಸಂ" ಎಂಬ ಶಬ್ದಕ್ಕೆ ಬ್ರಹ್ಮಜ್ಞಾನಿಯೆಂಬ ಅರ್ಥವನ್ನು ಹೇಳಬಾರದು. ಶಾಸ್ತ್ರಕಲಿತವನೂ, ವ್ಯವಹಾರ ಚತುರನೂ ಆದ ಪುರಷನೆಂದು ಹೇಳಬೇಕು. ಯಾಕಂದರೆ, ಮನಸ್ಸು ಮತ್ತು ಇಂದ್ರಿಯ ಇವುಗಳ ಶಕ್ತಿಯನ್ನು ಇಲ್ಲದಂತೆ ಮಾಡಿ, ವಿಷಯಗಳನ್ನು ತುಚ್ಛೀಕರಿಸಿ ಸದಾನಂದಿಯಾಗಿರುವ ಆ ಮಹಾತ್ಮನನ್ನು ಎಳೆದುಕೊಳ್ಳುವ ಶಕ್ತಿಯು ಇಂದ್ರಿಯಗಳಿಗೆ ಎಲ್ಲಿಂದಬರಬೇಕು? ವೇದದಲ್ಲಿ ಒಂದು ರೂಪಕವನ್ನು ಕಲ್ಪಿಸಿರುತ್ತದೆ. ಅದು ಹೇಗಂದರೆ, "ಈ ದೇಹದ ಯಜಮಾನನಾದ ಜೀವಾತ್ಮನೇ ಒಬ್ಬ ರಥಿಕನಾಗಿರುವನು. ಬುದ್ಧಿಯೆಂಬುವದೇ ಇವನಿಗೆ ಸಾರಥ್ಯವನ್ನು ಮಾಡುವದು. ಇವರಿಗೆ ಕುಳಿತುಕೊಳ್ಳಲಿಕ್ಕೆ ರಥಮಾತ್ರ ಬೇಕಾಯಿತಷ್ಟೆ? ಆ ರಥವೆಂದರೆ ದೇಹವು. ರಥಕ್ಕೆ ಹೂಡಿದ ಕುದುರೆಗಳೇ ಇಂದ್ರಿಯಗಳು ಇನ್ನು ಈ ಕುದುರೆಗಳನ್ನು ಬಂಧನಮಾಡುವದಕ್ಕೆ ಬೇಕಾದ ಹಗ್ಗವು ಮನಸ್ಸಾಗಿರುವದು." ಇಲ್ಲಿ ಇಂದ್ರಿಯ

ಗಳಿಗೆ ಅಶ್ವದೃಷ್ಟಾಂತವನ್ನು ಕೊಟ್ಟಿರುವದರಿಂದ, ಅಶ್ವಗಳಹಾಗೆ ಇಂದ್ರಿಯಗಳು ವಿಚಿತ್ರ ಗತಿಯುಳ್ಳವೆಂಬ ಅಭಿಪ್ರಾಯವಾಗುತ್ತದೆ. ಇಂಥ ಅಶ್ವಸಮಾನಗಳಾದ ಇಂದ್ರಿಯಗಳು ನಮ್ಮನ್ನು ಎಲ್ಲಿಯಾದರೂ ಒಂದು ಗರ್ತದಲ್ಲಿ ಕೆಡವವದಹಾಗೆ ಬಿಗಿದು ಹಿಡಿಯುವದಕ್ಕೆ ವಿಚಾರ ಶಕ್ತಿಯುಳ್ಳ ಮನಸ್ಸೇ ರಜ್ಜುವಾಗಿರುವದೆಂಬ ತಾತ್ಪರ್ಯವು. ವಿವೇಕಿಯಾದವನು ವಿಚಾರಯುಕ್ತವಾದ ಮನಸ್ಸಿನ ಸಹಾಯದಿಂದ ಇಂದ್ರಿಯಗಳನ್ನು ವಿಷಯಗಳ ಕಡೆಗೆ ಹೋಗದಂತೆ ಇಟ್ಟುಕೊಂಡರೆ, ಅವನಿಗೆ ಸದ್ಗತಿಯಾಗುತ್ತದೆಂಬ ಭಾವಾರ್ಥವು, ಬೃಹದಾರಣ್ಯಕ ಶ್ರುತಿಯಲ್ಲಿ ವ್ಯಕ್ತವಾಗಿರುವದು. ಇಂದ್ರಿಯಗಳಿಗೆ ಗ್ರಹವೆಂತಲೂ, ವಿಷಯಗಳಿಗೆ ಅತಿಗ್ರಹವೆಂತಲೂ, ಅಲ್ಲಿ ಹೆಸರು ಕೊಟ್ಟಿರುವರು. "ಗೃಣ್ಹಂತಿ ಬಧ್ನಂತಿ ಪುರುಷಪಶೂನಿತಿ ಗ್ರಹಾಃ ಇಂದ್ರಿಯಾಣಿ" ಅಂದರೆ ಅವಿವೇಕಿಗಳಾದ ಪುರುಷರನ್ನು ಪಶುಗಳನ್ನಂತೆ ಕಟ್ಟಿಹಾಕುತ್ತವೆ, ತಮ್ಮ ಸ್ವಾಧೀನರನ್ನಾಗಿ ಮಾಡಿಕೊಳ್ಳುತ್ತವೆ ಎಂಬರ್ಥವು. ಅತಿಗ್ರಹಗಳೆಂದರೆ, ಇದಕ್ಕೂ ಹೆಚ್ಚಿನಗ್ರಹಗಳು ವಿಷಯಗಳು. ವಿಷಯಗಳಿದ್ದರೆಯೇ ಇಂದ್ರಿಯಗಳ ಕೆಲಸವು ನಡೆಯುತ್ತದೆ, ಇಲ್ಲದಿದ್ದರೆ ಅವುಗಳಿಂದಯಾವಕಾರ್ಯವೂ ಆಗುವದಿಲ್ಲ.

ಈ ದೇಹವು ಭೂತಮಹಾಪಂಚಕದ ಸೂಕ್ಷ್ಮಾಂಶವಾಗಿದ್ದು, ಇದರೊಳಗಿನ ಅತಿಸೂಕ್ಷ್ಮಾಂಶಗಳೆಂದರೆ ಇಂದ್ರಿಯಗಳು. ದೇಹದಲ್ಲಿದ್ದ ಪಂಚಭೂತಗಳಿಗೆ ಹೊರಗಿನ ರೂಪ ಮುಂತಾದ್ದರ ಸಂಬಂಧದ ಹೊರತು ಪೋಷಣವಿಲ್ಲ. ಹೇಗಂದರೆ ಒಳಗೆ ಪ್ರಾಣರೂಪವಾದ ವಾಯುವು ಇರುತ್ತದಷ್ಟೆ? ಇದಕ್ಕೆ ಹೊರಗಿನ ವಾಯುವಿನ ಸಂಬಂಧವಿಲ್ಲದಂತಾದರೆ, ಪ್ರಾಣವಾಯುವು ನಿಲ್ಲುವದೇ ಇಲ್ಲ. ಈ ಪ್ರಾಣವಾಯುವು ಯಾವಾಗಲೂ ಒಳಗಿನ ದುರ್ಗಂಧವನ್ನೆಲ್ಲ ಮುಖದ್ವಾರದಿಂದ ಹೊರಗೆ ಹಾಕಿ, ಹೊರಗಿನ ನಿರ್ಮಲವಾದ ವಾಯುವನ್ನು ಒಳಗೆ ಒಯ್ಯುತ್ತಲಿರುತ್ತದೆ. ಇದೊಂದೇ ಈ ವಾಯುವಿನ ಕಾರ್ಯವಿರುತ್ತದೆ. ಈ ಒಳಗಿರುವ ವಾಯುವಿನ ಇಂದ್ರಿಯವು ತ್ವಗಿಂದ್ರಿಯವಿರುವದು. ಇದು ಭೂತಸೂಕ್ಷ್ಮವಾದ ದೇಹದ ವಾಯುವಿನ ಸೂಕ್ಷ್ಮಾಂಶವಿರುವದು. ವಾಯುವಿನ ಗುಣವು ಸ್ಪರ್ಶವಿರುವದರಿಂದ ಇದು ಯಾವಾಗಲೂ, ಸ್ಪರ್ಶವನ್ನೇ ಒಡೆಯುತ್ತದೆ; ಮತ್ತು ಇದಕ್ಕೆ ಮುಖ್ಯವಾಗಿ ಹೊರಗಿನ ವಾಯುವಿನ ಸ್ಪರ್ಶವು ಬೇಕಾಗಿರುತ್ತದೆ ಅದಿಲ್ಲದಿದ್ದರೆ ಈ ದೇಹವೇ ನಿಲ್ಲುವದಿಲ್ಲ. ತ್ವಗಿಂದ್ರಿಯವು ಈ ದೇಹದಮೇಲೆ ಮುಚ್ಚಾಯಿಸಿದಂಥ ಚರ್ಮವನ್ನೆಲ್ಲ ವ್ಯಾಪಿಸಿಕೊಂಡಿರುತ್ತದೆ. ಅದು ನೇತ್ರಮುಂತಾದ ಇಂದ್ರಿಯಗಳಂತೆ ಒಂದೊಂದೇ ಪ್ರದೇಶದಲ್ಲಿಲ್ಲ. ಈ ದೇಹದ ಚರ್ಮಕ್ಕೆ ತುಂಬಾ ಛಿದ್ರಗಳುಂಟು. ಆ ಛಿದ್ರಗಳಲ್ಲೆಲ್ಲ ಸಣ್ಣಸಣ್ಣ ರೋಮಗಳೂ ದೊಡ್ಡ ದೊಡ್ಡ ರೋಮಗಳೂ ತುಂಬಿರುವವು. ದೇಹದಲ್ಲಿರುವ ವ್ಯಾನನೆಂಬ ವಾಯುವು ಒಳಗಿನ ಕಶ್ಮಲವನ್ನೆಲ್ಲ ಬೆವರಿನ ರೂಪದಿಂದ ಹೊರಗೆ ಹಾಕುತ್ತದೆ. ಅದನ್ನೆಲ್ಲ ಹೊರಗಿನ ವಾಯುವು ಆರಿಸಿ ಬಿಡುತ್ತದೆ. ಈ ಕ್ರಿಯೆಯು ಯಾವಾಗಲೂ ನಡೆದಿರುತ್ತದೆ. ಹೀಗಾಗದಿದ್ದರೆ, ದೇಹದ ಪೋಷಣವೇ ಆಗಲಾರದು. ಈ ತ್ವಗಿಂದ್ರಿಯದ ಸಂಪೂರ್ಣ ನಾಶವಾದರೆ ಚರ್ಮವೆಲ್ಲ ಒಣಗಿ ರಕ್ತವೇ ಓಡಾಡುವದಿಲ್ಲ. ಇಂಥ ಪ್ರಸಂಗದಲ್ಲಿ ಮನುಷ್ಯನು ಬದುಕುವದೇ ಇಲ್ಲ.

ಇತರ ಇಂದ್ರಿಯಗಳು ಈ ದೇಹದ ಒಂದೊಂದು ಪ್ರದೇಶದಲ್ಲಿರುವದರಿಂದ, ಇವುಗಳೊಳಗೆ ಒಂದೊಂದರ ನಾಶವಾದರೆ ಅಷ್ಟೊಂದು ಹಾನಿಯಾಗುವದಿಲ್ಲ. ಆಯಾ ಇಂದ್ರಿಯಗಳಿಂದ ಆಗತಕ್ಕ ವಿಷಯಜ್ಞಾನವು ಮಾತ್ರ ಆಗುವದಿಲ್ಲ. ನೇತ್ರೇಂದ್ರಿಯವಿಲ್ಲದಿದ್ದರೆ ಅಥವಾ ಶ್ರೋತ್ರೇಂದ್ರಿಯವಿಲ್ಲದಿದ್ದರೆ ಆ ದ್ವಾರಗಳಿಂದಾಗುವ ಸತ್ವಕ್ಕೆ ಹಾನಿಯಾಗಿ, ಮನುಷ್ಯನು ಇಹ-ಪರಗಳೆರಡಕ್ಕೂ ದೂರಾಗುತ್ತಾನೆ. ಇಷ್ಟೊಂದು ಇಂದ್ರಿಯಗಳ ಮಹತ್ವವಿರುತ್ತದೆ. ತೇಜಸ್ಸೆಂಬ ಭೂತದ ಸೂಕ್ಷ್ಮಾಂಶವೆನಿಸುವ ನೇತ್ರೇಂದ್ರಿಯವು, ಹೊರಗಿನ ಸೂರ್ಯ ಮುಂತಾದ ವಸ್ತುಗಳ ಪ್ರಕಾಶವನ್ನು ಗ್ರಹಿಸಿ ಒಳಗೆ ಒಯ್ಯುತದೆ. ಈ ಪ್ರಕಾಶವು ಒಳಗೆ ಹೋಗಿ ಅಂತಃಪ್ರಕಾಶದಲ್ಲಿ ಕೂಡಿ ರಕ್ತವಾಹಿನಿಗಳಲ್ಲೆಲ್ಲ ಸಂಚರಿಸುತ್ತ, ಅಲ್ಲಿರುವ ಸಣ್ಣ ಸಣ್ಣ ದುಷ್ಟ ಕೃಮಿ-ಕೀಟಾದಿಗಳನ್ನು ನಾಶಗೊಳಿಸಿ ಒಂದು ಪ್ರಕಾರದ ಪುಷ್ಟಿಯನ್ನೂ, ಸುಖವನ್ನೂ, ಸಾಮರ್ಥ್ಯವನ್ನೂ ಸಂಪಾದಿಸಿ ಕೊಡುವದಲ್ಲದೆ ಮನುಷ್ಯನನ್ನು ಸತೇಜನನ್ನಾಗಿಯೂ, ಕರ್ತವ್ಯಕ್ಷಮನನ್ನಾಗಿಯೂ ಮಾಡುತ್ತದೆ. ಈ ಹೊರಗಿನಪ್ರಕಾಶವುನಮಗೆ ಸರ್ವಥಾ ತಗಲದಿದ್ದರೆ ನಾವು ಉಳಿಯುವ ಸಂಭವವೇ ಇಲ್ಲ. ಕತ್ತಲೆ-ಕೋಣೆಯ ಶಿಕ್ಷೆಯು ಎಷ್ಟು ಕಠಿಣವಾದದ್ದೆಂಬದನ್ನು ನಾವುಬರೆಯುವ ಕಾರಣವಿಲ್ಲ. ಸೂರ್ಯನ ಪ್ರಕಾಶವು ತಾಪಕಾರಕವಾಗಿದ್ದರೂ, ನೇತ್ರದ್ವಾರದಿಂದ ಒಳಗೆ ಹೋದರೆ ಸೌಮ್ಯವಾಗುತ್ತದೆ. ಇನ್ನು ಹೊರಗಿನ ಶಬ್ದವು ನಮ್ಮ ಶ್ರವಣೇಂದ್ರಿಯಕ್ಕೆ ಬೀಳದೆ ಹೋದರೆ ನಮಗೆ ವ್ಯವಹಾರಜ್ಞಾನವೇನೂ ಆಗದೆ, ನಾವು ಮೂಕರಾಗಿಹೋಗುತ್ತೇವೆ. ನಾವು ಇದ್ದೂ ಇಲ್ಲದಂತಾಗುತ್ತೇವೆಂಬುವದು ಗೊತ್ತಿದ್ದ ಸಂಗತಿಯಾಗಿರುವದು. ನಮ್ಮ ಘ್ರಾಣೇಂದ್ರಿಯವು ಗಂಧವನ್ನು ಗ್ರಹಿಸದಿದ್ದರೆ ನಮಗೆ ಕೆಟ್ಟದ್ದು, ಕೊಳತದ್ದು, ಹಳಸಿದ್ದು, ಯಾವದೂ ತಿಳಿಯದೆ ಸಿಕ್ಕ ಸಿಕ್ಕ ಪದಾರ್ಥಗಳನ್ನು ತಿಂದು ನಮ್ಮ ದೇಹದ ಹಾನಿಯನ್ನು ನಾವೇ ಮಾಡಿಕೊಳ್ಳುವ ಪ್ರಸಂಗವು ಬಂದೀತು. ರಸನೇಂದ್ರಿಯದ ಮಾತೂ ಹಾಗೆಯೇ ಸರಿ. ಇದರಂತೆ ಪಂಚಕರ್ಮೇಂದ್ರಿಯಗಳಲ್ಲಿಯ ಯಾವದೊಂದು ಇಂದ್ರಿಯದ ನಾಶವಾದರೆ, ಆ ಇಂದ್ರಿಯದ ವ್ಯಾಪಾರವು ನಿಂತು ಹೋಗಿ ದೇಹಕ್ಕೆ ಅಪಾಯವು ತಟ್ಟುವದು.

## ೭ ನೇ ಪ್ರಕರಣ— **ವಿಷಯಗಳು,**

त्याज्यं सुखं विषयसंगमजन्म पुंसाम् । [ माधव.

"विसिन्वंति बध्नंति प्राणिनइति विषयाः" ಅಂದರೆ ವಿಷಯಗಳು ಪ್ರಾಣಿಗಳನ್ನು ಬಂಧಿಸುವ ವಸ್ತುಗಳೆಂದು ಅರ್ಥವಾಗುತ್ತದೆ. ಈ ವಿಷಯಗಳು ಮನಸ್ಸಿನಿಂದೊಡಗೂಡಿದ ಇಂದ್ರಿಯಗಳಿಗೆ ಗೋಚರವಾದರೆ ಸಾಕು, ಪ್ರಾಣಿಗಳನ್ನು ಎಳೆದೇ ಬಿಡುತ್ತವೆ. ಆಗ ಸಹಸಾ ಇವನ್ನು ಉಪಭೋಗಿಸಲೇಬೇಕೆಂಬ ಇಚ್ಛೆಯು ಪ್ರಾಣಿಮಾತ್ರಕ್ಕೆ ಹುಟ್ಟುತ್ತದೆ. ವಿಷಯಗಳಲ್ಲಿ ದೇವರು ಒಂದು ವಿಲಕ್ಷಣವಾದ ಆಕರ್ಷಣಶಕ್ತಿಯನ್ನಿಟ್ಟಿರುವನು. ಇದರಿಂ

ದಲೇ ಸಕಲಪ್ರಾಣಿಗಳು ವಿಷಯಸುಖಗಳಲ್ಲಿ ಬಿದ್ದು ಅಲ್ಲಿಯೇ ಹೊರಳಾಡುತ್ತಲಿರುವದು ಸಕಲರಿಗೂ ದೃಗ್ಗೋಚರವೇ ಇರುವದು. ಎಲ್ಲಿಲ್ಲಿ ನೋಡಿದರೂ ಯಾರನ್ನು ನೋಡಿದರೂ ವಿಷಯೋಪ ಭೋಗದಲ್ಲಿ ತೊಡಗಿದವರೇ ಕಣ್ಣಿಗೆ ಕಾಣುವರಲ್ಲದೆ, ವಿಷಯಪರಾಙ್ಮುಖ ರಾದವರು ತೋರುವದೇ ಇಲ್ಲ. ಈ ಸಂಗತಿಯನ್ನರಿತ ವಿದ್ವಜ್ಜನರು "ವೇಧಾ ದ್ವೇಧಾ ಭ್ರಮಂಚಕ್ರೇ ಕಾಂತಾಸು ಕನಕೇಷುಚ। ತಾಸು ತೇಷ್ವಪ್ಯನಾಸಕ್ತಃ ಸಾಕ್ಷಾದ್ಭರ್ಗೋ ನರಾಕೃತಿಃ।" ಅಂದರೆ ಸೃಷ್ಟಿಕರ್ತನಾದ ಬ್ರಹ್ಮದೇವನು ಸೃಷ್ಟಿಮಾಡುವಾಗಲೇ ಪುರುಷರ ಉದ್ದೇಶವಾಗಿ ಕಾಂತಾ-ಕನಕ(ಸುವರ್ಣ)ಗಳೆಂಬ ಎರಡು ಸ್ಥಳಗಳಲ್ಲಿ ಮೋಹವನ್ನಿಟ್ಟನು; ಆದರೆ ಅವೆರಡರಲ್ಲಿಯೂ ಆಸಕ್ತಿಯಿಲ್ಲದ ಪುರುಷನು ಮನುಷ್ಯದೇಹವನ್ನು ಧರಿಸಿದ್ದರೂ ಸಾಕ್ಷಾತ್ ಪರಮೇಶ್ವರನೇ ಎಂದು ಹೇಳಬೇಕೆಂದು ಹೇಳಿರುವರು. ಸಾರಾಂಶ, ಜಗತ್ತಿನಲ್ಲಿ ವಿಷಯಾಸಕ್ತನಾಗದಿರುವ ಪುರುಷನೇ ದುರ್ಲಭನೆಂಬ ತಾತ್ಪರ್ಯವು.

ಶೈವಸಿದ್ಧಾಂತದವರು "ಪಶು-ಪಾಶ-ಪರಮೇಶ್ವರ"ರೆಂಬ ಈ ಮೂರೇ ಪದಾರ್ಥಗಳು ಜಗತ್ತಿನಲ್ಲಿ ಇರುವವು. ಇವುಗಳಹೊರತು ಮತ್ತೊಂದು ಪದಾರ್ಥವೇ ಇಲ್ಲ. ಈ ಮೂರೇ ಪದಾರ್ಥಗಳಿಂದೇ ಜಗತ್ತು ತುಂಬಿರುವದು. ನಮ್ಮನ್ನು ಹಿಡಿದುಕೊಂಡು ದೇವತೆಗಳ ವರೆಗೆ ಇರುವ ಪ್ರಾಣಿಗಳೆಲ್ಲ ಪಶುಗಳೆನಿಸುವವು. ಪಾಶವೆಂದರೆ ಇವರು ಉಪಭೋಗಿಸುವ ವಿಷಯಗಳೇ. ಪರಮೇಶ್ವರನೆಂದರೆ ಪಾಶಗಳಲ್ಲಿ ತೊಡಗಿದ ಪಶುಗಳನ್ನುದ್ಧರಿಸುವ ದೇವರು. ಕಣ್ಣಿಯಿಂದ ಕಟ್ಟಿಹಾಕಿದ್ದರಿಂದ ಮಲ-ಮೂತ್ರಗಳನ್ನು ಕಟ್ಟಿದ ಸ್ಥಳದಲ್ಲಿಯೇ ಮಾಡಿಕೊಂಡು, ಹಸಿವಾದರೆ ಅಲ್ಲಿಯೇ ಇದ್ದು ಮೇಯುತ್ತ, ನಿದ್ರೆ ಬಂದರೆ ಅದೇ ಹೊಲಸಿನಲ್ಲಿಯೇ ಮಲಗಿ ನಿದ್ರೆಮಾಡುತ್ತ, ಮೈಯೆಲ್ಲ ಹೊಲಸು ಮಾಡಿಕೊಂಡು, ದುರ್ಗಂಧವನ್ನು ಅನುಭೋಗಿಸುತ್ತ, ಬೇಜಾರಗೊಂಡಿರುವ ದನಗಳನ್ನು ಬೆಳಗಿನ ಝಾವದಲ್ಲಿ ಪರಮಕಾರುಣಿಕನಾದ ಗೋಪಾಲಕನು ಹೇಗೆ ಕಣ್ಣಿಯನ್ನುಬಿಚ್ಚಿಬಿಡುವನೋ, ಹಾಗೆ ಪರಮಕಾರುಣಿಕನಾದ ಪರಮೇಶ್ವರನು, ವಿಷಯಾಸಕ್ತರಾಗಿ ಸಂಸಾರದಲ್ಲಿ ಹೊರಳಾಡುತ್ತ ಅನೇಕ ಯಾತನೆಗಳನ್ನು ಅನುಭೋಗಿಸುತ್ತ ಪಾರಗಾಣದೆ ಪ್ರಾಂತದಲ್ಲಿ ವೈರಾಗ್ಯ ಹೊಂದಿತನ್ನನ್ನು ಸ್ಮರಿಸುವ ನಮ್ಮನ್ನು ಸದ್ಗುರುರೂಪವನ್ನು ಧರಿಸಿ ಪ್ರತ್ಯಕ್ಷವಾಗಿ ಬಂದು ವಿವೇಕೋಪದೇಶದಿಂದ ಪಾಶಗಳೆನಿಸುವ ವಿಷಯಗಳಿಂದ ದೂರಮಾಡುವನು. ಆದ್ದರಿಂದಲೇ ಪರಮೇಶ್ವರನಿಗೆ ("ಪಶುಪತಿ") ಯೆಂಬ ಹೆಸರುಂಟಾಗಿರುವದು. ನಾವೆಲ್ಲ ಪಶುಗಳು, ವಿಷಯಗಳೇ ಪಾಶಗಳು ಅಂದರೆ ಕಣ್ಣಿಗಳು, ನಾವೆಲ್ಲರೂ ವಿಷಯಾಸಕ್ತರಾಗಿರುವದರಿಂದ ನಮಗೆ ಪಶು ಎಂಬ ಹೆಸರು ಬಂದದೆ. ಈ ಅಭಿಪ್ರಾಯವನ್ನು "ಶಿವಕಲ್ಪವಲ್ಲೀ" ಎಂಬ ಗ್ರಂಥದಲ್ಲಿ "ಶಿಪಿವಿಷ್ಟ" ಎಂಬ ನಾಮದ ಅರ್ಥವನ್ನು ಮಾಡುವಾಗ "ಪಶವಃ ಪರಮಾತ್ಮನಿ ಧೀವಿರಹಾತ್ ದ್ವಿಪದಾಶ್ಚ ನರಾಶ್ಚ ಸುರಾಃ ಪಶವಃ। ತದನುಗ್ರಹ ಕೃದ್ಧಯಂ ಪ್ರವಿಶನ್ ಪ್ರಥಿತೋಽಸಿ ವಿಭೋ ಶಿಪಿವಿಷ್ಟ ಇತಿ॥" ಪರಮಾತ್ಮನ ವಿಷಯವಾದ ಜ್ಞಾನವಿಲ್ಲದ ರಿಂದ ಎರಡು ಕಾಲುಗಳುಳ್ಳ ಮನುಷ್ಯರೂ, ದೇವತೆಗಳೂ ಕೂಡ ಪಶುಗಳೆನಿಸುವರು. ನಾಲ್ಕು ಕಾಲುಗಳುಳ್ಳ ದನ-ಕರಗಳಿಗೂ, ಮನುಷ್ಯರಿಗೂ, ದೇವತೆಗಳಿಗೂ

ಪರಮಾತ್ಮನ ಜ್ಞಾನವಿಲ್ಲ. ಇಂಥ ಪರಮಾತ್ಮನ ಜ್ಞಾನವಿಲ್ಲದವರನ್ನು ಉದ್ಧರಿಸುವದಕ್ಕಾಗಿ, ಅವರವರ ಹೃದಯವನ್ನು ಪ್ರವೇಶಮಾಡುವದರಿಂದ ಪರಮೇಶ್ವರನೇ ನಿನಗೆ "ಶಿಪಿವಿಷ್ಟ" ಎಂಬ ನಾಮವು ಬಂದಿರುವದು. "ಶಿಪಿ" ಅಂದರೆ "ಪಶು" "ವಿಷ್ಟ" ಅಂದರೆ "ಪ್ರವೇಶಮಾಡಿದವನು" ಎಂದು ಭಾಸ್ಕರರಾಯರೆಂಬ ವಿದ್ವಾಂಸರು ಹೇಳಿರುತ್ತಾರೆ. ಈ ಅಭಿಪ್ರಾಯವನ್ನು ಶ್ರೀ ಮಚ್ಛಾಂಕರಭಾಷ್ಯ ಜಿಜ್ಞಾಸಾಸೂತ್ರದಭಾಷ್ಯದಲ್ಲಿ "ಪಶ್ವಾದಿಭಿಶ್ಚಾ ವಿಶೇಷಾತ್" ಇಲ್ಲಿಂದ ಉಪಕ್ರಮಿಸಿ "ಅತಶ್ಚ ಪಶ್ವಾದಿಭಿಃ ಸಮಾನಃ ಪುರುಷಾಣಾಂ ಪ್ರಮಾಣಪ್ರಮೇಯ ವ್ಯವಹಾರಃ" ಇಲ್ಲಿಯವರೆಗಿನ ಗ್ರಂಥದಿಂದ ವಿವರಿಸಿರುತ್ತಾರೆ. ಕೈಯಲ್ಲಿ ಕೋಲು ಹಿಡಿದು ಬೆದರಿಸಿದರೆ ಇವನು ನಮ್ಮನ್ನುಹೊಡೆಯುತ್ತಾನೆಂಬ ಭೀತಿಯಿಂದ ಪಶುಗಳುಓಡಹತ್ತುತ್ತವೆ, ಅದೇ, ಎಳೆಯಹುಲ್ಲನ್ನು ಕೈಯಲ್ಲಿ ಹಿಡಿದು ತೋರಿಸುತ್ತ ಕರೆಯಹತ್ತಿದರೆ ಒಂದೊಂದೇ ಹೆಜ್ಜೆಯನ್ನಿಡುತ್ತ ಪ್ರೀತಿಸುತ್ತಬರುತ್ತವೆ. ಇದೇ ಮೇರೆಗೆ ಕೈಯಲ್ಲಿ ಶಸ್ತ್ರವನ್ನು ಹಿಡಿದು ಕಣ್ಣು ಕೆಂಪು ಮಾಡಿಕೊಂಡು ಬೆದರಿಸುತ್ತಿರುವ ಬಲಾಢ್ಯಪುರುಷನನ್ನು ಕಂಡರೆ ತಿಳುವಳಿಕೆಯುಳ್ಳವನೆನಿಸುವ ಮನುಷ್ಯನಾದರೂ ಓಡಹತ್ತುತ್ತಾನೆ; ಪ್ರೀತಿಯಿಂದ ಕರೆಯುವ ಸೌಮ್ಯನಾದ ಪುರುಷನ ಹತ್ತರ ಮೆಲ್ಲನೆ ಹೋಗುತ್ತಾನೆ, ಆದ್ದರಿಂದ ಪಶುಗಳು ಹೇಗೆ ದೇಹಾಭಿಮಾನಿಗಳಾಗಿ ವಿಷಯಾಸಕ್ತಗಳೋ, ಇದರಂತೆಯೇ ತಿಳುವಳಿಕೆಯುಳ್ಳ ಮನುಷ್ಯನಾದರೂ ದೇಹಾಭಿಮಾನಿಯಾಗಿ ವಿಷಯಾಸಕ್ತನಾಗಿಹೋದರೆ, ಇವನನ್ನು ಪಶುವೆಂದು ಯಾಕೆ ಹೇಳಬಾರದು? ಇನ್ನು ದೇವತೆಗಳಿಗೆ ದೇಹಾಭಿಮಾನವೂ, ವಿಷಯಾಸಕ್ತಿಯೂ ಅದೆಯೋ, ಇಲ್ಲವೋ ಎಂಬದನ್ನು ಕುರಿತು ವಿಚಾರಿಸುವಾ; ದೇವತೆಗಳು ದೈತ್ಯರಕೂಡ ಹೋರಾಡಿದ್ದು ಪುರಾಣೇತಿಹಾಸಗಳಲ್ಲಿ ಕಂಡುಬರುತ್ತದೆ. ಈ ದೇವತೆಗಳು ಬ್ರಹ್ಮಜ್ಞಾನಿಗಳೇ ಆಗಿದ್ದರೆ, ದೈತ್ಯರಕೂಡ ಯಾತರ ಸಲುವಾಗಿ ಹೋರಾಡುತ್ತಿದ್ದರು? ಇದಕ್ಕೆ ವಿಷಯಾಭಿಲಾಷೆಯೇ ಕಾರಣವೆನಿಸುವದು. ಈ ಭೂಲೋಕದಲ್ಲಿ ಯಾರಾದರೂ ಅತ್ಯುಗ್ರ ತಪಸ್ಸನ್ನು ಮಾಡಹತ್ತಿದರೆ, ದೇವತೆಗಳಿಗೆ ಹೊಟ್ಟೆಕಿಚ್ಚು ಯಾಕೆ? ಸಗರರಾಯನು ಅಶ್ವಮೇಧಯಾಗವನ್ನು ಮಾಡಿದಾಗ ದೇವೇಂದ್ರನು ಅಶ್ವವನ್ನು ಯಾಕೆ ಕದ್ದೊಯ್ಯಬೇಕು? ಈ ವಿಷಯದಲ್ಲಿ ಇಂದ್ರನಿಗೆ ತನ್ನ ಪದಚ್ಯುತಿಯಾಗುವದೆಂಬ ಭೀತಿಯೇ ಕಾರಣವಾಗಿರುವದು. ಹೀಗೆ ವಿಷಯಗಳು ಬ್ರಹ್ಮಾದಿ ದೇವತೆಗಳನ್ನೂ ಕೂಡ ಅಮಾರ್ಗಕ್ಕೆ ಹಚ್ಚಿದಮೇಲೆ, ನಮ್ಮಂಥವರ ಪಾಡೇನು?

ಜೀವಾತ್ಮನಿಂದ ಸಂಯುಕ್ತವಾದ ಮನಸ್ಸು ಇಂದ್ರಿಯಗಳಿಂದ ಕೂಡಿಕೊಳ್ಳುತ್ತದೆ. ಮನಸ್ಸಿನಿಂದ ಕೂಡಿಕೊಂಡಿರುವ ಜ್ಞಾನೇಂದ್ರಿಯಗಳು ವಿಷಯಗಳ ಮೇಲೆ ಹೋಗುತ್ತವೆ. ಆಗ ವಿಷಯಗಳ ಜ್ಞಾನವಾಗುತ್ತದೆ. ಮನಸ್ಸು ಒಂದು ಕಡೆ ಇಂದ್ರಿಯಗಳು ಬೇರೆ ಕಡೆಗೆ ಹೀಗಿದ್ದರೆ ವಿಷಯಗಳ ಜ್ಞಾನವು ಎಲ್ಲಿಂದುಂಟಾಗಬೇಕು? ಈ ವಿಷಯಗಳಲ್ಲಿ ಐದುಭಾಗಗಳನ್ನು ಮಾಡಿರುತ್ತಾರೆ. ಅವು ಯಾವವೆಂದರೆ, ೧ ರೂಪ, ೨ ಶಬ್ದ, ೩ ಗಂಧ ೪ ರಸ, ೫ ಸ್ಪರ್ಶ ಎಂಬವು. ಕಣ್ಣಿಗೆ ತೋರುವದು ರೂಪವು. ಕಿವಿಗೆ ಕೇಳುವದು ಶಬ್ದವು. ಘ್ರಾಣೇಂದ್ರಿಯಕ್ಕೆ ಗೋಚರವಾಗುವದು ಗಂಧವು. ರಸ

ನೇಂದ್ರಿಯಕ್ಕೆ ತಿಳಿಯುವದು ರಸವು. ಚರ್ಮೇಂದ್ರಿಯಕ್ಕೆ ವಿಷಯವಾಗುವದು ಸ್ಪರ್ಶವು. ವಿಷಯುಗಳನ್ನು ಉಪಯೋಗಿಸಿಕೊಳ್ಳುವ ಚಾತುರ್ಯವು ಮನುಷ್ಯಪ್ರಾಣಿಗೆ ವಿಶೇಷ ವಾಗಿರುತ್ತದೆ; ಆದ್ದರಿಂದ ಇತರ ಪ್ರಾಣಿಗಳಿಗಿಂತಲೂ ಮನುಷ್ಯನನ್ನು ವಿಷಯಗಳು ಬಹು ತೀವ್ರವಾಗಿ ಅಂಟಿಕೊಳ್ಳುತ್ತವೆ. ಮನುಷ್ಯನು ಒಂದು ಸಾರೆ ವಿಷಯಗಳಲ್ಲಿ ಪ್ರವೇಶಮಾಡಿದರೆ ಸಾಕು. ಅವನಿಗೆ ಅವನ್ನು ಒದ್ದೊಗೆದು ಹೊರಗೆ ಬರುವದಕ್ಕೆ ಆಗು ವದೇ ಇಲ್ಲ. ವಿಷಯಗಳಲ್ಲಿ ಏನೂ ಸ್ವಾರಸ್ಯವಿಲ್ಲದಿದ್ದರೂ ಚಿಂತೆಯಿಲ್ಲ, ಅವನ್ನು ಬಿಡುವಹಾಗಿಲ್ಲ. ಒಂದು ನಾಯಿಯು ಹಾದಿಹಿಡಿದು ಹೋಗುವಾಗ ಒಂದು ಎಲವು ಕಣ್ಣಿಗೆ ಬಿದರೆ ಅದನ್ನು ಮಾಂಸಭ್ರಮದಿಂದ ಬಾಯಿಯಲ್ಲಿ ಕಚ್ಚಿಕೊಳ್ಳುತ್ತದೆ. ಆ ಮೇಲೆ ಆ ನಾಯಿಗೆ ಆ ಎಲವನ್ನು ಬಿಡುವದಕ್ಕೆ ಆಗುವದಿಲ್ಲ. ಎಲ್ಲಿ ಹೋದರೂ ಆ ಎಲವನ್ನು ಬಾಯಿಯಲ್ಲಿ ಕಚ್ಚೇ ಇರುತ್ತದೆಂಬದು ಎಲ್ಲರಿಗೂ ಅನುಭವದ ಸಂಗತಿಯೇ ಇರುತ್ತದೆ. ಅದು ಯಾಕೆ ಬಿಡುವದಿಲ್ಲವೆಂದರೆ, ತನ್ನ ಬಾಯಿಯಲ್ಲಿರುವ ಮಧುರವಾದ ಜೊಲ್ಲು ಆ ಎಲವಿನ ಮೇಲೆ ಬಿದ್ದ ಕೂಡಲೆ ಆ ಎಲವು ಒಂದು ಪ್ರಕಾರವಾಗಿ ಅದಕ್ಕೆ ರುಚಿಸುತ್ತದೆ, ಬಾಯಿಯಲ್ಲಿ ಕಚ್ಚಿರುವದರಿಂದ ಯಾವಾಗಲೂ ಜೊಲ್ಲಿನಿಂದ ಅದು ಆರ್ದ್ರವಾಗಿರುತ್ತದೆ. ಅದನ್ನು ಇದು ಮತ್ತು ಮತ್ತು ನೆಕ್ಕುತ್ತಲೇ ಇರುತ್ತದೆ. ಈ ದೃಷ್ಟಾಂತದಿಂದ ಮನುಷ್ಯನು ನೀರಸವಾದ ವಿಷಯಗಳಲ್ಲಿ ತೊಡಗಿಕೊಂಡು ಪರಮಾರ್ಥ ವನ್ನು ಮರೆತುಬಿಡುತ್ತಾನೆ. ಆ ನಾಯಿಯು ಬಾಯಿಯಲ್ಲಿ ಎಲವನ್ನು ಕಚ್ಚಿಕೊಂಡು ಆಹಾರ-ವಿಹಾರಗಳನ್ನು ಹ್ಯಾಗೆ ಬಿಡುತ್ತದೆಯೋ, ಹಾಗೆ ಮನುಷ್ಯನು ಪರಮಾರ್ಥವನ್ನು ಮರೆತು ವಿಷಯಭೋಗದಲ್ಲಿ ತೊಡಗುವನು. ಈ ವಿಷಯಗಳು ಯಾವಾಗಲೂ ಹಾನಿ ಕಾರಕಗಳೆಂಬ ಬಗ್ಗೆ ಪೌರಾಣಿಕರು "ಕುರಂಗಮಾತಂಗ ಪತಂಗಭೃಂಗ ಮೀನಾಹತಾಃ ಪಂಚಭಿರೇವಪಂಚ । ಏಕಃಪ್ರಮಾದೀ ಸಕಥಂ ನ ಹನ್ಯತೇ ಯಃ ಸೇವತೆ ಪಂಚಭಿರೇವ ಪಂಚ।"ಅಂದರೆ " ಕುರಂಗವೆಂದರೆ ಎರಳೆಯು, ಇದು ಶಬ್ದವೆಂಬ ವಿಷಯವನ್ನು ತನ್ನ ಶ್ರೋತ್ರೇಂದ್ರಿಯದಿಂದ ಅನುಭವಿಸಿ ನಾಶವನ್ನು ಹೊಂದುವದು. ಅದು ಹೇಗೆಂದರೆ— ಒಬ್ಬ ಚಿಗರಿಬೇಟೆಗಾರನು ಚಿಗರಿಗಳನ್ನು ಹಿಡಿಯುವದರಸಲುವಾಗಿ ತನ್ನ ಬಲೆಯನ್ನು ಸುತ್ತ ಲೂ ಬೀಸಿಕೊಂಡು, ದಿವ್ಯವಾದ ಗಾನವನ್ನು ಮಾಡುತ್ತ ಕುಳಿತಿರುತ್ತಾನೆ.. ಅಷ್ಟರಲ್ಲಿ ಒಂದು ಜಿಂಕೆಯು ಆ ದಿವ್ಯವಾದ ಗಾನದಲ್ಲಿ ಲುಬ್ಧವಾಗಿ ಆ ಬಲೆಯಲ್ಲಿ ಬಿದ್ದು ಸಾಯು ತ್ತದೆ. ಮಾತಂಗವೆಂದರೆ ಆನೆಯು, ಇದು ಸ್ಪರ್ಶವೆಂಬ ವಿಷಯದಿಂದ ಹಾನಿಯನ್ನು ಹೊಂದುವದು. ಅದು ಹೇಗಂದರೆ, ಆನೆಯನ್ನು ಹಿಡಿಯುವದರಸಲುವಾಗಿ ತರುಣವಾದ ಹೆಣ್ಣಾನೆಯನ್ನು ಗಂಡಾನೆಯಹತ್ತರ ಒಯ್ಯುತ್ತಾರೆ. ಆಗ ಆ ಗಂಡಾನೆಯು, ಹೆಣ್ಣಾನೆಯ ಮೈಮೇಲೆ ತನ್ನ ಸೊಂಡಿಲವನ್ನಾಡಿಸಿ ಆ ಸ್ಪರ್ಶಕ್ಕೆ ಮೋಹಿತವಾಗಿ ಸಿಕ್ಕು ತನ್ನ ಸ್ವಾತಂತ್ರ್ಯ ವನ್ನು ಕಳೆದುಕೊಳ್ಳುತದೆ; ಆದ್ದರಿಂದ ನಾನಾವಿಧವಾದ ಭಂಗವನ್ನು ಹೊಂದುತ್ತದೆ. ಪತಂಗವೆಂದರೆ ದೀಪದಹುಳವು. ಇದು ದೀಪವನ್ನುನೋಡಿ ದಿವ್ಯವಾದ ಫಲವೆಂಬ ಭ್ರಾಂತಿ ಯಿಂದ ದೀಪದಮೇಲೆ ಬಿದ್ದು ಸತ್ತುಹೋಗುತ್ತದೆ. ಭಂಗವೆಂದರೆ ಗುಂಗೀಹುಳವು. ಇದು

ಪುಷ್ಪಗಂಧಕ್ಕೆ ಮೋಹಿತವಾಗಿ ಸಕಲಪುಷ್ಪಗಳಲ್ಲಿ ಸಂಚರಿಸುತ್ತ, ಚಂಪಕ(ಸಂಪಗಿ) ಪುಷ್ಪ ದಲ್ಲಿ ಕೂಡ್ರುತ್ತದೆ. ಆಮೇಲೆ ಎದ್ದು ಹಾರಿಹೋಗುವದಕ್ಕೆ ಬಾರದಂತಾಗಿ ಅಲ್ಲಿಯೇ ಸತ್ತುಹೋಗುತ್ತದೆ. ಇನ್ನು ಮೀನವು ಬಲೆಗಾರನ ಉಕ್ಕಿನಗಾಣದ ತುದಿಯ ಗೋದೀ ಹಿಟ್ಟಿನರಸಕ್ಕೆ ಮೆಚ್ಚಿಕೊಂಡು ಹಿಡಿಯಲು, ಪರಗೀ ಮುಳ್ಳಿನಂತೆ ವಕ್ರವಾಗಿರುವ ಆ ಗಾಣವು ಗಂಟಲಿನಲ್ಲಿ ಸಿಕ್ಕಕೂಡಲೆ ಸತ್ತುಹೋಗುತ್ತದೆ.ಹೀಗೆ ಹೀಗೆ ಇವೆಲ್ಲ ಪ್ರಾಣಿಗಳು ಒಂದೊಂದೇ ಇಂದ್ರಿಯಗಳಿಂದ ಒಂದೊಂದೇ ವಿಷಯಗಳನ್ನನುಭವಿಸಿ ಸತ್ತುಹೋಗು ತ್ತವೆ. ಇದು ಎಲ್ಲರಿಗೂ ಗೊತ್ತಿದ್ದ ಸಂಗತಿಯೇ ಇರುವದು. ಹೀಗಿರಲು, ಹೆಜ್ಜೆಹೆಜ್ಜೆಗೆ ತಪ್ಪುಮಾಡುತ್ತಿರುವ ಮನುಷ್ಯನು ತಾನೊಬ್ಬನೇ ಯಾವಾಗಲೂ ಐದೂ ಇಂದ್ರಿಯಗಳಿಂದ ವಿಷಯಗಳನ್ನು ಒಂದೇಕಾಲಕ್ಕೆ ಸೇವಿಸಿದಮೇಲೆ ಇವನ ಹಾನಿಯಾಗದೆ ಹೇಗೆ ಉಳಿಯುವದು? ಇದರ ಮೇಲಿಂದ ಇಂದ್ರಿಯಗಳ ಸಾಮರ್ಥ್ಯದ ಜ್ಞಾನವಾಗುತ್ತದೆ.

---

## ೪ ನೆಯ ಪ್ರಕರಣ---ಮನಸ್ಸಿನ ಶುದ್ಧೀಕರಣ.

ಹೀಗೆ ಇಂದ್ರಿಯಗಳು ಎಷ್ಟೇ ಬಲಿಷ್ಠವಾಗಿರಲಿ, ವಿಷಯಗಳು ಎಷ್ಟೇ ಆಕರ್ಷಕ ವಾಗಿರಲಿ, ಮನಸ್ಸನ್ನಷ್ಟು ನಾವು ತಿದ್ದಿ ಹಾದಿಗೆ ತಂದು ಬಿಟ್ಟರೆ ಅವುಗಳ ಬಾಧೆಯು ಇಲ್ಲದಂತಾಗುವದು. ಆದರೆ ಈಗಿನ ಕಾಲದ ನಾವು ಕೆಲಸಕ್ಕೆ ಬಾರದ ಕಾಡುಕಲ್ಲಿನಂತಿ ರುವ ನಮ್ಮ ಮನಸ್ಸನ್ನು ತಿದ್ದಿ ಹಾದಿಗೆ ತರುವ ಕ್ರಮವು ಹೇಗೆ? ಅದನ್ನು ತಿದ್ದುವದಕ್ಕೆ ಉಪಾಯಗಳು ಯಾವವು? ಮತ್ತು ಆ ಉಪಾಯಗಳು ಸುಲಭಸಾಧ್ಯಗಳೊ, ಕಠಿಣ ಸಾಧ್ಯಗಳೋ, ಅಸಾಧ್ಯಗಳೊ? ಕದಾಚಿತ್ ಅವು ಅಸಾಧ್ಯವಾಗಿದ್ದರೆ ಅವನ್ನು ಹೇಳಿ ಪ್ರಯೋಜನವೇನು? ಕೇಳಿ ಫಲವೇನು? ಯಾವ ಉಪಾಯಗಳು ಸುಲಭಸಾಧ್ಯವಾಗಿ ಯೂ, ಅನುಭವಕ್ಕೆ ಬರುವವಾಗಿಯೂ, ಇರುವವೋ, ಅಂಥ ಉಪಾಯಗಳನ್ನು ಮಾತ್ರ ಹೇಳುವದೂ, ಕೇಳುವದೂ ಶ್ರೇಯಸ್ಕರವಾಗಿರುವದು. ಆದ್ದರಿಂದ ಅಂಥ ಉಪಾಯ ಗಳನ್ನೇ ಇಲ್ಲಿ ನಾವು ಹೇಳುವದಕ್ಕೆ ಯತ್ನಿಸುತ್ತೇವೆ. ಮನಸ್ಸನ್ನು ಶುದ್ಧ ಮಾಡಿಕೊಳ್ಳುವ ದಕ್ಕಿಂತ ಮೊದಲು, ಮನಸ್ಸಿನ ಉತ್ಪತ್ತಿಯನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಅದರ ಉತ್ಪತ್ತಿಯು ಯಾವ ಪದಾರ್ಥಗಳಿಂದಾಗುತ್ತದೆಂಬುವದು ತಿಳಿದರೆ, ಆಯಾ ಪದಾರ್ಥ ಗಳ ಸಾಧಕ–ಬಾಧಕತನದ ಮೇಲಿಂದ ಮನಸ್ಸನ್ನು ತಿದ್ದಿಕೊಳ್ಳುವದು ಜಡವಾಗುವದಿಲ್ಲ. ಆದ್ದರಿಂದ ಮನಸ್ಸಿನ ಉತ್ಪತ್ತಿಯು ಯಾತರಿಂದಾಗುತ್ತದೆಂಬದನ್ನು ಮೊದಲು ನಿರ್ಣಯಿಸಿ, ಅನಂತರದಲ್ಲಿ ಮನಸ್ಸಿನ ಶುದ್ಧಿಯ ಪ್ರಕಾರವನ್ನು ಹೇಳುವದಕ್ಕೆ ಉಪಕ್ರಮಿಸುತ್ತೇವೆ.

ಮನಸ್ಸು ಅಣುಮಾತ್ರವಿರುತ್ತದೆಂದು ಶಾಸ್ತ್ರಕಾರರು ಶಾಸ್ತ್ರದಲ್ಲಿ ಹೇಳಿರುತ್ತಾರೆ. ಇದರ ಮೇಲಿಂದ ವಿಚಾರಿಸಿದರೆ, ಅಣುಪ್ರಮಾಣವಾಗಿರುವ ಮನಸ್ಸು ಯಾವ ಕೆಲಸಗ ಳನ್ನು ಮಾಡುವದಕ್ಕೆ ಸಮರ್ಥವಾದೀತು? ಅಶಕ್ತನಾದ ಮನುಷ್ಯನು ಪುಷ್ಟನ ಹಾಗೆ ಕೆಲಸವನ್ನು ಮಾಡಲಾರನೆಂಬುವದು ಸ್ಪಷ್ಟವಿರುತ್ತದೆ. ಆದ್ದರಿಂದ ಅಣುಮಾತ್ರವಾಗಿದ್ದ

ಮನಸ್ಸು ಯಾವ ಪದಾರ್ಥಗಳ ಎಷ್ಟೆಷ್ಟು ಅಂಶಗಳನ್ನು ಕೂಡಿಕೊಂಡು ಪರಿಪೋಷ ವನ್ನು ಹೊಂದಿ ಕೆಲಸಮಾಡಲಿಕ್ಕೆ ಸಮರ್ಥವಾಗುತ್ತದೆಂಬದನ್ನು ಹೇಳಲಿಕ್ಕೆ ಬೇಕಾಗು ತ್ತದೆ. ಈ ಸಂಬಂಧದಿಂದ ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಿದ್ದೇನಂದರೆ—

"ಅನ್ನಮಶಿತಂ ತ್ರೇಧಾವಿಧೀಯತೇ" ನಾವು ತಿಂದ ಅನ್ನದೊಳಗೆ ಮೂರುಭಾಗ ಗಳಾಗುತ್ತವೆ, ಒಂದು ಸ್ಥೂಲಭಾಗವು ಮಲವಾಗಿ ಹೋಗುತ್ತದೆ. ಮತ್ತೊಂದು ಮಧ್ಯಮಭಾಗವು ಮಾಂಸವಾಗುತ್ತದೆ, ಮೂರನೆಯ ಸೂಕ್ಷ್ಮ ಭಾಗವೇ ಮನಸ್ಸಾಗು ತ್ತದೆ. ಇದೇ ಮೇರೆಗೆ ನಾವು ಕುಡಿದ ನೀರೊಳಗಾದರೂ ಮೂರುಭಾಗಗಳಾಗಿ, ಮೊದ ಲನೆಯ ಸ್ಥೂಲಭಾಗವು ಮೂತ್ರವೂ. ನಡುವಿನ ಮಧ್ಯಮಭಾಗವು ರಕ್ತವೂ, ಮೂರನೆಯ ಸೂಕ್ಷ್ಮಭಾಗವು ಪ್ರಾಣವೂ ಆಗುತ್ತವೆ. ಇದರಂತೆ ನಾವು ತಿನ್ನುವ ತೇಜಸ್ಸಿನೊಳಗೆ ಮೂರು ಭಾಗಗಳಾಗಿ, ಮೊದಲನೆಯ ಸ್ಥೂಲಭಾಗವು ಎಲವೂ, ಎರಡನೆಯ ಮಧ್ಯಮ ಭಾಗವು ಮಜ್ಜೆ (ಎಲವಿನೊಳಗಿನ ರಸ) ಯೂ, ಮೂರನೆಯ ಸೂಕ್ಷ್ಮ ಭಾಗವು ವಾಣಿ ಯೂ ಆಗುತ್ತವೆ. ತೇಜಸ್ಸೆಂದರೆ ಘೃತ-ತೈಲ ಮುಂತಾದ ಸ್ನಿಗ್ಧವಸ್ತುವು, ಸೂರ್ಯ-ಚಂದ್ರ-ಅಗ್ನಿ ಮುಂತಾದವಲ್ಲ. ಈ ಸ್ನಿಗ್ಧ ಪದಾರ್ಥಗಳನ್ನು ಯಾವಾಗಲೂ ಉಪ ಯೋಗಿಸುವ ಜನರ ದೇಹದಲ್ಲಿ ಇವು ವಿಲಕ್ಷಣವಾದ ಪ್ರಕಾಶವನ್ನುಂಟುಮಾಡುತ್ತಿರುವದ ರಿಂದ, ಇವಕ್ಕೆ ತೇಜಸ್ಸೆಂಬ ಹೆಸರನ್ನು ನಮ್ಮ ಪ್ರಾಚೀನರು ಇಟ್ಟಿರುತ್ತಾರೆ. ಮತ್ತು "ಜ್ಯೋತಿಶ್ಚರಣಾಭಿಧಾನಾತ್" ಎಂಬ ಬ್ರಹ್ಮಸೂತ್ರದ ಭಾಷ್ಯದಲ್ಲಿ "ಮನೋಜ್ಯೋತಿ-ರ್ಜುಷತಾಮಾಜ್ಯಂ" ಎಂಬ ವೇದವಾಕ್ಯವನ್ನು ಹಿಡಿದು ಅರ್ಥ ಮಾಡುವಾಗ ತುಪ್ಪ ವನ್ನು ತಿನ್ನುವವರ ಮನಸ್ಸು ಜ್ಯೋತಿರೂಪವಾಗುತ್ತದೆ; ಅಂದರೆ ಜ್ಯೋತಿಸ್ಸಿನಂತೆ ಬಹು ಪದಾರ್ಥಗಳನ್ನು ಪ್ರಕಾಶಿಸುತ್ತದೆ. ಎಂದು ಹೇಳಿರುತ್ತಾರೆ. ಹೀಗಿದ್ದ ಮೂಲಕ ವಾಗಿಯೇ ನಮ್ಮ ಪೂರ್ವಜರು ಹವ್ಯ-ಕವ್ಯ ಮುಂತಾದ ಕರ್ಮಗಳಲ್ಲಿಯೂ, ಹೋಮ-ಹವನಾದಿ ಕರ್ಮಗಳಲ್ಲಿಯೂ ಭೋಜನ-ಪ್ರತಿಭೋಜನಗಳಲ್ಲಿಯೂ, ದೇವರದೀಪಗಳ ಲ್ಲಿಯೂ ತುಪ್ಪಕ್ಕೆ ಪ್ರಾಧಾನ್ಯವನ್ನು ಕೊಟ್ಟಿರುವರು. ತುಪ್ಪವಿಲ್ಲದ ಹೊರತು ಬ್ರಾಹ್ಮಣರ ಕರ್ಮವೇ ಸಾಗುವಂತಿಲ್ಲ. ಈ ಪ್ರಕಾರವಾಗಿ ಅನ್ನದಿಂದ ಮನಸ್ಸೂ, ನೀರಿನಿಂದ ಪ್ರಾಣವೂ, ತೇಜಸ್ಸಿನಿಂದ ವಾಣಿಯೂ ಹುಟ್ಟುತ್ತವೆ. ಒಂದು ದೊಡ ಪಾತ್ರೆಯಲ್ಲಿ ಮೊಸರು ಹಾಕಿ ಕಡಗೋಲಿನಿಂದ ಕಡೆಯಹತ್ತಿದರೆ, ಮೇಲಕ್ಕೆ ಬೆಣ್ಣೆಯು ಬರುವದಷ್ಟೆ, ಆ ಬೆಣ್ಣೆಯನ್ನು ಕಾಸಿದರೆ ತುಪ್ಪವಾಗುತ್ತದೆ. ಇದರಲ್ಲಿ ಸ್ಥೂಲಭಾಗವು ಮಜ್ಜಿಗೆ, ಮಧ್ಯಮಭಾಗವು ಬೆಣ್ಣೆಯು, ಸೂಕ್ಷ್ಮ ಭಾಗವೇ ತುಪ್ಪವು. ಇದರಂತೆ ಮನಸ್ಸುಮುಂತಾದ್ದ ರಲ್ಲಿಯೂ ಅನ್ನಪಾನಾದಿಗಳ ಮೂರುಭಾಗಗಳ ಸಂಬಂಧದಿಂದ ತಿಳಿದುಕೊಳ್ಳಬೇಕು.

ಮೂಲತಃ ಮನಸ್ಸು ಅಣುಮಾತ್ರವಾಗಿರುತ್ತದೆ. ಹದಿನೈದು ದಿನಗಳವರೆಗೆ ತಿಂದಅನ್ನದಿಂದ ಅದಕ್ಕೆ ಹದಿನೈದು ಅಂಶಗಳು ಕೂಡಿಕೊಳ್ಳುತ್ತವೆ. ಆಗ ಮನಸ್ಸು ಷೋಡಶಕಲಾತ್ಮಕವಾಗಿ ವ್ಯವಹಾರಚತುರವೂ ಕಾರ್ಯಕರಣಸಮರ್ಥವೂ ಆಗುತ್ತದೆ. ನಾವು ಹದಿನೈದು ದಿವಸಗಳವರೆಗೆ ಅನ್ನವನ್ನು ಮುಟ್ಟದೆ ಕೇವಲ ನೀರನ್ನೇ ಕುಡಿದು

ಕೊಂಡಿದ್ದರೆ, ಪ್ರಾಣವೇನೂ ಹೋಗುವದಿಲ್ಲ. ಮನಸ್ಸುಮಾತ್ರ ಕ್ಷೀಣವಾಗಿಹೋಗುತ್ತದೆ. ಆಗ ನಾವು ಕಲಿತದ್ದೂ ಕೂಡ ಮರೆತಂತಾಗಿ, ಯಾವದೂ ನೆನಪಿಗೆ ಬರುವದಿಲ್ಲ. ಇದು ಅನುಭವದ ಮಾತೇಸರಿ. ನಿರಾಹಾರ ಮಾಡಿದ ಮನುಷ್ಯನಿಗೆ ಯಾವದೂ ಬೇಡಾಗುತ್ತದೆಂಬುವದು ಸ್ಪಷ್ಟವಿರುವದು. ಬಹುದಿವಸ ನಿರಾಹಾರ ಮಾಡಿದ ಮನುಷ್ಯನು ಮತ್ತೆ ಅನ್ನವನ್ನು ಉಣ ಹತ್ತಿದರೆ ಒಂದೊಂದುದಿವಸದ ಅನ್ನದಿಂದ ಒಂದೊಂದು ಅಂಶದಂತೆ ಹದಿನೈದು ದಿವಸಗಳಲ್ಲಿ ಹದಿನೈದು ಅಂಶಗಳು ಕೂಡಿಕೊಳ್ಳಲಾಗಿ, ಮನಸ್ಸುಪರಿಪೋಷವನ್ನು ಹೊಂದಿ ಷೋಡಶಕಲಾತ್ಮಕವಾದ ಕೂಡಲೆ ಮೊದಲಿನಂತೆ ಕಲಿತ ವಿಷಯಗಳೆಲ್ಲ ನೆನಪಿಗೆ ಬರುತ್ತವೆ. ಒಂದು ಬೆಂಕಿಯ ಕಿಡಿಯು ಇರುತ್ತದೆಂದು ತಿಳಿಯೋಣ. ಇದರಲ್ಲಿ ದಹನಶಕ್ತಿಯಿದ್ದರೂ ಅಷ್ಟು ವ್ಯಕ್ತವಾಗಿರುವದಿಲ್ಲ. ಅದನ್ನು ಮುಟ್ಟಿದರೆ ಬಹಳ ಸುಡುವದಿಲ್ಲ. ಆದರೆ ಇದಕ್ಕೆ ಒಣತರಗುಗಳನ್ನೂ, ಒಣಹುಲ್ಲನ್ನೂ ಕೂಡಿಸಿ ಗಾಳಿ ಹಾಕಿ ಹೊತ್ತಿಸಿದರೆ ಈ ಸಣ್ಣ ಬೆಂಕಿಯ ಕಿಡಿಯು ಪರಿಪುಷ್ಟವಾಗಿ ಊರಿಗೆ ಊರನ್ನೇ ಸುಡಬಹುದು. ಇದೇ ಮೇರೆಗೆ ಮನಸ್ಸಾದರೂ ಪರಿಪುಷ್ಟವಾಯಿತೆಂದರೆ ಸಕಲವನ್ನೂ ಗ್ರಹಿಸುವ ಸಾಮರ್ಥ್ಯವನ್ನು ಹೊಂದುತ್ತದೆ.

ಈ ಪ್ರಕಾರವಾಗಿ ಮನಸ್ಸು ಅನ್ನಜನ್ಯವೆಂದು ಸಿದ್ಧವಾದಬಳಿಕ, ಅದರ ಶುದ್ಧಿಯಾದರೂ ಅನ್ನದಿಂದಲೇ ಆಗುತ್ತದೆಂದು ಸಿದ್ಧವಾಗುತ್ತದೆ. ಅನ್ನದಲ್ಲಿ ಸಾತ್ವಿಕ, ರಾಜಸ, ತಾಮಸವೆಂದು ಮೂರು ವರ್ಗಗಳಿರುತ್ತವೆ. ಇವುಗಳಲ್ಲಿ ರಾಸಜ-ತಾಮಸಗಳನ್ನು ಬಿಟ್ಟು ಸಾತ್ವಿಕಾನ್ನವನ್ನೇ ಸ್ವೀಕರಿಸಿ ಮನಸ್ಸಿನ ಪೋಷಣವನ್ನು ಮಾಡಬೇಕು. ಈ ಸಾತ್ವಿಕಾನ್ನದಿಂದ ಸುಶಿಕ್ಷಿತವಾದ ಮನಸ್ಸು ಸಿದ್ಧವಾಗುತ್ತದೆ. ಮನಸ್ಸು ಸುಪರಿಶುದ್ಧವಾಗಬೇಕಾದರೆ ಯೋಗ್ಯವಾದ ಆಹಾರವನ್ನು ಕೊಡಬೇಕೆಂದು ಛಾಂದೋಗ್ಯದಲ್ಲಿ ಸನತ್ಕುಮಾರ ನಾರದರ ಸಂವಾದದ ಪ್ರಕರಣದಲ್ಲಿ ನಿರೂಪಿಸಲ್ಪಟ್ಟಿದೆ. "ಆಹಾರಶುಧ್ಧೌ ಸತ್ವಶುದ್ಧಿಃ ಸತ್ವಶುದ್ಧೌ ಧ್ರುವಾಸ್ಮೃತಿಃ ಸ್ಮೃತಿಲಂಭೇ ಸರ್ವಹೃದಯಗ್ರಂಥೀನಾಂ ವಿಪ್ರಮೋಕ್ಷಃ" ಆಹಾರಗಳು ಶುದ್ಧವಾಗೋಣದರಿಂದ ಅಂತಃಕರಣವು ಶುದ್ಧವಾಗುತ್ತದೆ. ಅಂತಃಕರಣವು ಶುದ್ಧವಾದಮೇಲೆ ನಿಶ್ಚಲವಾದ ಪರಮೇಶ್ವರನ ಸ್ಮರಣವು ಹುಟ್ಟುತ್ತದೆ. ಇಂಥ ಸ್ಮರಣದಿಂದ ಮನಸ್ಸಿನ ಗ್ರಂಥಿಗಳು, ಅಂದರೆ ಹೆಂಡಿರು-ಮಕ್ಕಳು ಮುಂತಾದ ವಸ್ತುಗಳಮೇಲಿನ ಸ್ನೇಹದ ಗ್ರಂಥಿಗಳು ದೂರವಾಗುತ್ತವೆ. ಎಂದು ಅಲ್ಲಿ ಹೇಳಿರುತ್ತದೆ.

ಇನ್ನು, ಆಹಾರವೆಂದರೇನು ? ಅನ್ನವೆಂದರೇನು ? ಎಂಬವನ್ನು ವಿಚಾರಿಸುವಾ. "ಆಹ್ರಿಯಂತಇತ್ಯಾಹಾರಾಃ" ಅಂದರೆ ಪಂಚಜ್ಞಾನೇಂದ್ರಿಯಗಳು ಸೇವಿಸುವ ಶಬ್ದ-ಸ್ಪರ್ಶ ಮುಂತಾದ ವಿಷಯಗಳು ಆಹಾರಗಳೆನಿಸುವವು. "ಅದ್ಯತಇತ್ಯನ್ನಂ" ಅಂದರೆ, ನಾವು ತಿನ್ನುವ ಧಾನ್ಯ-ಫಲ-ಶಾಕ ಮುಂತಾದವುಗಳು ಅನ್ನಗಳೆನಿಸುವವು.

ಆಹಾರಗಳಲ್ಲಿ ರಾಜಸ-ತಾಮಸಗಳನ್ನು ಬಿಟ್ಟು ಯಾವಾಗಲೂ ಸಾತ್ವಿಕವಾದವನ್ನೇಗ್ರಹಿಸುತ ಹೋಗಬೇಕು; ಅಂದರೆ, ಸಾತ್ವಿಕರೂಪವನ್ನೂ, ಸಾತ್ವಿಕರಸವನ್ನೂ,

ಸ್ವಾತ್ವಿಕಗಂಧವನ್ನೂ, ಸಾತ್ವಿಕಸ್ಪರ್ಶವನ್ನೂ, ಸಾತ್ವಿಕಶಬ್ದವನ್ನೂ ಸೇವಿಸುತ್ತಿರಬೇಕು. ಈ ಸಾತ್ವಿಕ ಪದಾರ್ಥಗಳ ಸೇವನದಿಂದ ನಿಶ್ಚಯವಾಗಿ ಸತ್ವಗುಣದ ಪೋಷಣವಾಗಿ, ಅಂತಃಕರಣವು ಶುದ್ಧವಾಗುತ್ತದೆ ಅಂತಃಕರಣ ಶುದ್ಧಿಯೆಂದರೆ- ರಜಸ್ತಮೋಗುಣಗಳ ಅವನತಿಪೂರ್ವಕವಾಗಿ ಸತ್ವವಿಜೃಂಭಣವು. ಅರ್ಥಾತ್ ಸತ್ವವಿಜೃಂಭಣವಾದರೆ ರಜಸ್ತಮೋಗುಣಗಳ ಅವನತಿಯಾಗುತ್ತದೆ ಸತ್ವವಿಜೃಂಭಣವಾದಾಗ ರಜೋಗುಣವು ಕಾರ್ಯಪ್ರವೃತ್ತಿಯನ್ನೂ, ತಮೋಗುಣವು ಅಜ್ಞಾನವಿಲಾಸವನ್ನೂ ಮಾಡುವದಿಲ್ಲ. ಕೇವಲ ಸತ್ವಕ್ಕೆ ಪ್ರೋತ್ಸಾಹಸವಾಗುತ್ತಿರುವದರಿಂದ ಅದರ ಕಾರ್ಯವೆನಿಸುವ ಜ್ಞಾನವೂ, ಸುಖವೂ ತಪ್ಪದ ಆಗುತ್ತವೆ. ಹೀಗಾಗಹತ್ತಿದರೆ ಅಂತಃಕರಣಶುದ್ಧಿಯಾಯಿತೆಂದು ಭಾವಿಸಬೇಕು. ಯಾವಾಗಲೂ ಸಾತ್ವಿಕವಾದ ರೂಪ, ರಸ, ಮುಂತಾದ ಪದಾರ್ಥಗಳ ಸೇವನದಿಂದ ನಮ್ಮ ಅಂತಃಕರಣಕ್ಕೊಂದು ವಿಲಕ್ಷಣವಾದ ಪ್ರಕಾಶ ಸಾಮರ್ಥ್ಯವುಂಟಾಗುತ್ತದೆ ಅದರಿಂದ ಆ ಮನಸ್ಸು ಅತಿಸೂಕ್ಷ್ಮವಾದ ವಸ್ತುವನ್ನೂ, ಅತಿಗಹನವೆನಿಸುವ ವಿಷಯವನ್ನೂ, ಸಹ ಹಿಡಿಯುತ್ತದೆ. ಆದ್ದರಿಂದ ಯಾವಜನರು ಕೇವಲ ರಾಜಸ-ತಾಮಸರಾಗಿ ಸತ್ವಹೀನರಾಗಿರುವರೋ ಅಂಥವರ ದರ್ಶನವನ್ನೂ, ಸ್ಪರ್ಶವನ್ನೂ, ಅವರ ಶಬ್ದಶ್ರವಣವನ್ನೂ, ಅವರಗೂಡ ವ್ಯವಹಾರವನ್ನೂ, ಹೆಚ್ಚು ಹೇಳುವದೇನು ಅವರ ಮೈಗೆ ತಗಲಿಬಂದ ಗಾಳಿಯನ್ನೂಕೂಡ ಬಿಡಬೇಕು. ಕದಾಚಿತ್ ಅವನ್ನು ಸೇವಿಸಹತ್ತಿದರೆ ನಾವು ಎಷ್ಟು ಸಾತ್ವಿಕ ಪದಾರ್ಥಗಳನ್ನು ಉಪಯೋಗಿಸುತ್ತಿದ್ದರೂ, ನಮ್ಮ ಸತ್ವಹಾನಿಯಾಗತಕ್ಕ ಸಂಭವವಿರುತ್ತದೆ. ಇನ್ನು ರಾಜಸ-ತಾಮಸ ಜನರಗೂಡ ಸರ್ವಥಾ ವ್ಯವಹಾರವನ್ನು ಬಿಡುವದು ನಮ್ಮ ಪ್ರಾಪಂಚಿಕರಿಗೆ ಶಕ್ಯವಲ್ಲ. ಯಾವಜನರು ಸರ್ವಸಂಗ ಪರಿತ್ಯಾಗಮಾಡಿ ಅರಣ್ಯವನ್ನು ಸೇರಿಕೊಂಡು ತಪೋನಿಷ್ಠರಾಗಿರುವರೋ, ಅಂಥವರು ಈ ಕೆಲಸವನ್ನು ಮಾಡಬಹುದು. ಅದರೆ ನಾವು ನಮ್ಮ ಸತ್ವವೃತ್ತಿಯನ್ನು ಕಾಯ್ದು ಕೊಂಡು ಕಾರ್ಯಪರತ್ವದಿಂದ ರಾಜಸ-ತಾಮಸರಗೂಡ ವ್ಯವಹಾರವನ್ನಿಡಬೇಕು; ಆದರೆ ಅವರೂಕೂಡ ನಮ್ಮ ಪ್ರೋಜ್ವಲಸತ್ವವನ್ನು ನೋಡಿ ನಮ್ಮ ಗೂಡ ಸಾತ್ವಿಕ ವ್ಯವಹಾರವಿಡುವಂತೆ ನಾವು ನಡೆದುಕೊಳ್ಳಬೇಕು. ಇದರಿಂದ ಅವರಿಗೂ ಸಾತ್ವಿಕವ್ಯವಹಾರದ ಚಟಯುಬಿದ್ದು, ಕ್ರಮದಿಂದ ಅವರ ವೃತ್ತಿಯೂ ತಿದ್ದುವದು. ಇನ್ನು ಪಂಚೇಂದ್ರಿಯಗಳಆಹಾರಗಳ ದಿಗ್ದರ್ಶನವನ್ನು ಸಾಮಾನ್ಯವಾಗಿ ಮಾಡುವಾ:—

೧ ನೇತ್ರೇಂದ್ರಿಯ ವಿಷಯಗಳಾದ ರೂಪಗಳು— ಗೋವುಮುಂತಾದ ಪ್ರಾಣಿಗಳ ರೂಪವೂ, ಸತ್ಪುರುಷರರೂಪವೂ, ದೇವರಪ್ರತಿಮೆಗಳರೂಪವೂ, ಇವೇ ಮುಂತಾದ ಭಕ್ತಿ ಜನಕ ರೂಪಗಳು ಸಾತ್ವಿಕರೂಪಗಳು. ಕಾಮಜನಕವಾದ ಸ್ತ್ರೀ ಮುಂತಾದವಸ್ತುಗಳ ರೂಪಗಳುರಾಜಸಗಳು. ಅಜ್ಞಾನಜನಕವಾದಮದ್ಯಮುಂತಾದವಸ್ತುಗಳರೂಪಗಳುತಾಮಸಗಳು

೨ ರಸನೇಂದ್ರಿಯದ ವಿಷಯಗಳಾದ ರಸಗಳು— ಸಾತ್ವಿಕಪದಾರ್ಥಗಳಲ್ಲಿಯ ರಸಗಳು ಸಾತ್ವಿಕರಸಗಳು, ವೃಂತಾಕ-ಪಲಾಂಡು-ಲಶುನಮುಂತಾದವಸ್ತುಗಳಲ್ಲಿಯ ರಸವು ರಾಜಸಗಳು. ಮದ್ಯ ಮುಂತಾದ ಮಾದಕವಸ್ತುಗಳಲ್ಲಿಯ ರಸಗಳು ತಾಮಸಗಳು,

೩ ರಸನೇಂದ್ರಿಯದ ವಿಷಯಗಳಾದ ಗಂಧಗಳು— ದೇವರಲ್ಲಿ ಅರ್ಪಿಸಿ ಪ್ರಸಾದ ರೂಪವಾಗಿ ತಕ್ಕೊಂಡ ಪುಷ್ಪ ಮುಂತಾದ ಪದಾರ್ಥಗಳಲ್ಲಿಯ ಸುಗಂಧವು ಸಾತ್ವಿಕವು. ಸ್ತ್ರೀಯರು ತಲೆಯಲ್ಲಿ ಮುಡಿದ ಪುಷ್ಪಗಂಧವು ರಾಜಸವು. ಮದಜನಕವಾದ ಮದ್ಯ ಮುಂತಾದ ವಸ್ತುಗಳ ಗಂಧವು ತಾಮಸವು.

೪ ಸ್ಪರ್ಶೇಂದ್ರಿಯದ ವಿಷಯಗಳಾದ ಸ್ಪರ್ಶಗಳು—ಗೋ ಮುಂತಾದ ಸಾತ್ವಿಕ. ವಸ್ತುಗಳ ಸ್ಪರ್ಶವು ಸಾತ್ವಿಕವು, ಸ್ತ್ರೀ ಮುಂತಾದ ವಸ್ತುಗಳ ಸ್ಪರ್ಶವು ರಾಜಸವು, ಮದ್ಯ ಮುಂತಾದ ಮಾದಕವಸ್ತುಗಳ ಸ್ಪರ್ಶವು ತಾಮಸವು.

೫ ಶ್ರೋತ್ರೇಂದ್ರಿಯದ ವಿಷಯಗಳಾದ ಶ್ರವಣಗಳು— ಶ್ರುತಿ-ಸ್ಮೃತಿ-ಪುರಾಣ-ಇತಿಹಾಸಗಳೂ, ಸತ್ಪುರುಷರ ಚರಿತ್ರೆಗಳೂ, ಸತ್ಪುರುಷರ ಬೋಧಪ್ರದ ಉಪದೇಶ ವಾಕ್ಯಗಳೂ, ಸಾತ್ವಿಕಗಳು. ಕೇವಲ ಕಾಮಜನಕವಾದ ಸ್ತ್ರೀ-ಪುರುಷರ ಸಂಸರ್ಗದ ಪ್ರಸಂಗಗಳ ವರ್ಣನಗಳು ರಾಜಸಗಳು. ಮದಜನಕ ವಸ್ತುಗಳ ವರ್ಣನಗಳು ತಾಮಸಗಳು.

ಇವನ್ನೆಲ್ಲ ವಿಚಾರಿಸಿಕೊಂಡು ಸೂಕ್ಷ್ಮರೀತಿಯಾಗಿ ನಮ್ಮಲ್ಲಿ ಸತ್ವಾಭಿವೃದ್ಧಿಯಾಗುವಂತೆ ಯತ್ನ ಮಾಡತಕ್ಕದು ನಮ್ಮ ಪವಿತ್ರ ಕರ್ತವ್ಯವಾಗಿದೆ. ಇನ್ನು ಅನ್ನಗಳ ಸಂಬಂಧದಿಂದ ವಿಚಾರಮಾಡೋಣ.

ನಾವು ತಿನ್ನುವ ಅನ್ನದಲ್ಲಿ ಸಾತ್ವಿಕ, ರಾಜಸ, ತಾಮಸಗಳೆಂದು ಮೂರುವರ್ಗಗಳನ್ನು ಮಾಡಿರುವೆವಷ್ಟೆ! ಇವೇ ಸಾತ್ವಿಕಗಳೆಂದು ಶಾಸ್ತ್ರಕಾರರು ನಿರ್ಣಯಿಸಿದ ಪದಾರ್ಥಗಳಲ್ಲಿ ೧ ಧಾನ್ಯ, ೨ ಫಲ, ೩ ಶಾಕ, ೪ ಸ್ನೇಹ, ಇತರಪದಾರ್ಥಗಳು ಎಂದು ಐದು ಭಾಗಗಳನ್ನು ಮಾಡಿ, ಇವುಗಳ ಪಟ್ಟಿಯನ್ನು ಮುಂದೆಕೊಟ್ಟಿರುತ್ತದೆ. ಇವುಗಳನ್ನುಪಯೋಗಿಸುತ್ತ ವಿಷಯಗಳ ಶುದ್ಧಿಯನ್ನಿಟ್ಟುಕೊಳ್ಳಬೇಕು. ಇನ್ನೂ ಹೆಚ್ಚಿನ ಪದಾರ್ಥಗಳನ್ನು ಸಾತ್ವಿಕವಸ್ತುಗಳಲ್ಲಿ ಗ್ರಂಥಕಾರರು ಹಿಡಿದಿರುತ್ತಾರೆ; ಆದರೆ ಆ ಪದಾರ್ಥಗಳು ಅಪ್ರಸಿದ್ಧವಿರುವದರಿಂದ ನಾವು ಹೇಳಲಿಲ್ಲ. ನಾವು ಹೇಳಿದ ಪದಾರ್ಥಗಳಿಗಿಂತ ಹೆಚ್ಚು ಪದಾರ್ಥಗಳನ್ನು ಶಾಸ್ತ್ರಾಧಾರದಿಂದಲೂ, ಸತ್ಪುರುಷರ ಮುಖದಿಂದಲೂ ತಿಳಿದು ಸಾತ್ವಿಕವೆಂದು ನಿಶ್ಚಯವಾದಲ್ಲಿ ಉಪಯೋಗಿಸಿಕೊಳ್ಳಬಹುದು. ತಿನ್ನುವಪದಾರ್ಥಗಳಲ್ಲಿ ಯಾವದೇ ಪದಾರ್ಥವನ್ನಾಗಲಿ ಒಂದೆರಡುದಿವಸ ಉಪಯೋಗಿಸಿದರೆ ಅದರ ಗುಣ-ದೋಷಜ್ಞಾನವಾಗುವದಿಲ್ಲ. ನಾವು ಸಾತ್ವಿಕವಸ್ತುಗಳನ್ನುಪಯೋಗಿಸಿ ಮಾಡಿಕೊಂಡ ಸತ್ವಾಭಿವೃದ್ಧಿಯು ಬೆಳಕು ನಮ್ಮ ಆತ್ಮರೂಪರಾದ ಮುಂದಿನ ಸಂತತಿಯವರಮೇಲೆ ಬಹಳ ಬೀಳುತ್ತದೆ. ಆದ್ದರಿಂದ ಅವರು ನಮಗಿಂತಲೂ ಸಾತ್ವಿಕರಾಗಿ ತೇಜಸ್ವಿಗಳೂ, ಕಾರ್ಯಕ್ಷಮರೂ ಆಗುತ್ತಾರೆ. ಹೇಗೆ ಹೇಗೆ ನಮ್ಮ ಸಂತತಿಯವರು ಸತ್ವಾಭಿವೃದ್ಧಿಯನ್ನು ಹೊಂದಿ ಕಾರ್ಯಕ್ಷಮರಾಗುತ್ತ ಹೋಗುವರೋ? ಹಾಗೆ ಹಾಗೆ ನಮಗೆ ಇಹ-ಪರಗಳೆರಡೂ ಸಾಧಿಸುತ್ತ ಹೋಗುತ್ತವೆಂಬುವದೇ ಶಾಸ್ತ್ರೀಯ ಸಿದ್ಧಾಂತವೂ, ಸತ್ಪುರುಷರ ಬೋಧದ ಫಲಿತವೂ, ವೇದ-ಶಾಸ್ತ್ರಾಧ್ಯಯನದ ಪ್ರಯೋಜನವೂ, ಪುರಾಣೇತಿಹಾಸಗಳ

ಶ್ರವಣದಸಾರವೂ ಆಗಿರುತ್ತದೆ. ಇನ್ನು ಕೆಳಗೆ ಕೊಟ್ಟಿರುವ ಸಾತ್ವಿಕಾಹಾರಗಳ ಪಟ್ಟಿಯನ್ನುವಾಚಕರು ಅವಲೋಕಿಸಿ, ಅವನ್ನುಗ್ರಹಿಸುತ್ತ ಚಿತ್ತಶುದ್ಧಿಯನ್ನು ಪಡೆಯತಕ್ಕದ್ದು.

ಸಾತ್ವಿಕಾಹಾರಗಳ ಪಟ್ಟಿಯು—

೧ ಧಾನ್ಯಗಳು— ೧ ನೆಲ್ಲಕ್ಕಿ. ೨ ಜವೆಗೋದಿ. ೩ ಗೋದಿ. ೪ ಎಳ್ಳು. ೫ ಉದ್ದು. ೬ ಸಾವಿ. ೭ ನವಣಿ. ೮ ಹೆಸರು. ೯ ಸಾಸಿವಿ. ೧೦ ಕಡಲಿ (ವಿಕಲ್ಪ) ೧೧ ಜೋಳ. (ವಿಕಲ್ಪ) ೧೨ ಅವರಿ. ೧೩ ಬಟ್ಟಿಗಡಲೆ. ೧೪ ಬಾಯಿಮೂಗು. ಇತ್ಯಾದಿ.

೨ ಫಲಗಳು—೧ ಬಾಳೀಹಣ್ಣು. ೨ ಮಾವಿನಹಣ್ಣು. ೩ ಹಲಸು. ೪ ಬೋರೆಹಣ್ಣು. ೫ ನೇರಿಲಹಣ್ಣು. ೬ ಖರ್ಜೂರ. ೭ ಹುಣಸೀಹಣ್ಣು. ೮ ದ್ರಾಕ್ಷಿ. ೯ ದಾಳಿಂಬ. ೧೦ ಅಕ್ರೋಡದಹಣ್ಣು. ೧೧ ಕರಬೂಜಿಹಣ್ಣು. ೧೨ ತೆಂಗಿನಕಾಯಿ. ೧೩ ಲಿಂಬಿಯಹಣ್ಣು.(ವಿಕಲ್ಪ)

೩ ಶಾಕಗಳು—೧ ಚವಳಿ. ೨ ಸೂರಣಗಡ್ಡಿ. ೩ ಸವತೀಕಾಯಿ. ೪ ಹೀರೀಕಾಯಿ. ೫ ಕೊತ್ತುಂಬರಿ. ೬ ಪಡವಲಕಾಯಿ. ೭ ನೆಲ್ಲೀಕಾಯಿ. ೮ ಹಸಿಶುಂಠಿ. ೯ ಒಣಶುಂಠಿ. ೧೦ ಮೂಲಂಗಿ. ೧೧ ಮೆಣಸಿನಕಾಯಿ. ೧೨ ಗೆಣಸು.

೪ ಸ್ನೇಹಗಳು—೧ ಆಕಳಹಾಲು. ೨ ಆಕಳಮೊಸರು. ೩ ಆಕಳತುಪ್ಪ. ೪ ಆಕಳ ಮಜ್ಜಿಗಿ. ೫ ಎಮ್ಮೆಯತುಪ್ಪ. ೬ ಬೆಣ್ಣೆತೆಗೆಯದೆಯಿದ್ದ ಎಮ್ಮೆಯ ಮಜ್ಜಿಗಿ. ೭ ಸಕ್ಕರೆ ಕೂಡಿದ ಎಮ್ಮೆಯಹಾಲು. ಇತ್ಯಾದಿ.

೫ ಇತರಪದಾರ್ಥಗಳು—೧ ಕಬ್ಬು. ೨ ಸಕ್ಕರಿ. ೩ ಬೆಲ್ಲ. ೪ ಕಪ್ಪುರ. ೫ ಸಿಂಧು ಲವಣ. ೬ ಸಮುದ್ರದಉಪ್ಪು. ೭ ಅಡಕಿ. ೮ ವೀಳೆಯದೆಲೆ. ೯ ಮೆಣಸು. ೧೦ ಜೇನು ತುಪ್ಪ. ಇತ್ಯಾದಿ.

ಒಟ್ಟಿಗೆ ಹೇಳತಕ್ಕದ್ದೇನಂದರೆ, ಮನಸ್ಸಿಗೂ—ಇಂದ್ರಿಯಗಳಿಗೂ, ಇಂದ್ರಿಯಗಳಿಗೂ—ವಿಷಯಗಳಿಗೂ ಪರಸ್ಪರ ಅಪರಿತ್ಯಾಜ್ಯಸಂಬಂಧವಿರುವದರಿಂದ ಇವುಗಳವ್ಯವಹಾರವು ನಿತ್ಯವಿರುತ್ತದೆ; ಆದ್ದರಿಂದ ನಾವು ವಿಚಾರಪೂರ್ವಕವಾಗಿ ಮನಸ್ಸಿಗೆ ವಿಷಯಗಳ ಸಂಬಂಧವನ್ನು ಮಾಡಿಸತಕ್ಕದ್ದು. ವಿಷಯಗಳ ಪರಿಶೀಲನವೇ ಮನಸ್ಸಿನ ಶುದ್ಧಾಶುದ್ಧತೆಗಳಿಗೆ ಕಾರಣವಾಗಿರುವದರಿಂದ, ವಿಷಯಗಳಲ್ಲಿಯ ಗುಣ-ದೋಷಗಳ ಪರಿಜ್ಞಾನವನ್ನು ಮನಸ್ಸಿಗೆ ಅವಶ್ಯವಾಗಿ ಮಾಡಿಕೊಡತಕ್ಕದ್ದು. ಒಂದುಸಾರೆ ಮನಸ್ಸು "ಇವು ದುಷ್ಟ ಪದಾರ್ಥಗಳೆಂ"ದು ನಿಶ್ಚಯಿಸಿ, ಅವುಗಳಮೇಲೆ ಓಕರಿಸಿದರೆ ಸಾಕು. ಅಂಥ ದುಷ್ಟ ಪದಾರ್ಥಗಳ ಸಂಬಂಧಕ್ಕೆ ಅದು ಒಳಗಾಗುವದಿಲ್ಲ.

---

## ೫ ನೆಯ ಪ್ರಕರಣ— ಬಂಧವಿಮೋಚನ.

"यस्य देवे परा भक्ति र्यथा देवे तथा गुरौ ।
तस्यैते कथिता ह्यर्थाः प्रकाशंते महात्मनः ॥१॥

ಹಿಂದಿನ ನಾಲ್ಕು ಪ್ರಕರಣಗಳಲ್ಲಿ, ಮನಸ್ಸು ಅತಿ ಚಂಚಲವಾಗಿದ್ದು ನಿಂತಲ್ಲಿನಿಲ್ಲದೆ ಯಾವಾಗಲೂ ಕರ್ತವ್ಯಶಾಲಿಯಾಗಿರುವದರಿಂದ, ಅದು, ಇಂದ್ರಿಯಗಳೊಡನೆ ಹೇಯವಾ

ಗಿರುವ ವಿಷಯುಗಳಮೇಲೆ ಧಾವಿಸುವದು. ಈ ವಿಷಯುಗಳು ಆಕರ್ಷಕವಾಗಿರುವದರಿಂದ ಮನಸ್ಸನ್ನು ಕೂಡಲೆ ಕಟ್ಟಿಬಿಡುತ್ತವೆ. ಆಗ ಮನಸ್ಸು ವಿಷಯಪರವಶವಾಗಿ ಮನುಷ್ಯನನ್ನು ಸಂಸಾರದಲ್ಲಿ ಕೆಡವುತ್ತದೆ. ತಾನೂ ಈ ಜಡವಿಷಯುಗಳ ಸಂಸರ್ಗದಿಂದ ಮಲಿನವಾಗಿ ಹೋಗುತ್ತದೆ. ಮನಸ್ಸಿಗೆ ವಿಷಯುಗಳ ಸಂಬಂಧದ ಚಟವನು ಸಹಸಾ ಬಿಡಿಸುವದು ಯಾರಿಂದಲೂ ಆಗುವದಿಲ್ಲ. ಆದರೆ ವಿಷಯುಗಳನ್ನು ಸಾತ್ವಿಕ, ರಾಜಸ, ತಾಮಸಗಳೆಂದು ಮೂರು ವರ್ಣಗಳಾಗಿ ವಿಂಗಡಿಸಿ ಇವುಗಳಲ್ಲಿ ಆ ಮನಸ್ಸಿಗೆ ಕೇವಲ ಸಾತ್ವಿಕವಿಷಯುಗಳನ್ನೇ ಕೊಡುವದರಿಂದ ಮನಸ್ಸಿನ ಶುದ್ಧಿಯೆಂದರೆ ನಿರ್ಮಲತೆಯಾಗುತ್ತದೆ. ಇದು ನಿರ್ಮಲವಾಗುವದರಿಂದ ಇದರಲ್ಲಿ ಹೆಚ್ಚಿನ ಸ್ಫುರಣಶಕ್ತಿಯು ಉತ್ಪನ್ನವಾಗುತ್ತದೆಂಬ ಸಂಗತಿಯನ್ನು ನಿರೂಪಿಸಿದೆವು. ಈ ಪ್ರಕಾರವಾಗಿ ಸುಪರಿಶುದ್ಧಗಳಾದ ಆಹಾರಗಳಿಂದ ಮನಸ್ಸು ನಿರ್ಮಲವಾದಮೇಲೆ ನಾವು ಮಾಡತಕ್ಕ ಕರ್ತವ್ಯವೇನು ?ಎಂಬ ಬಗ್ಗೆ ಈಗ ವಿಚಾರಮಾಡತಕ್ಕದ್ದು. ಈ ರೀತಿ ಮನಸ್ಸಿಗೆ ನೈರ್ಮಲ್ಯಬಂದರೂ ಅದರ ಚಂಚಲಸ್ವಭಾವವು ಹೋಗದಿದ್ದರೆ ಅದನ್ನು ಬಿಗಿದುಹಿಡಿಯುವದು ಹೇಗೆ ? ಅದು 'ನಮ್ಮ ಬಿಗಿಯಲ್ಲಿ ಸಿಗದಿದ್ದರೆ ನಾವು ಹೇಗೆ ಕರ್ತವ್ಯನಿಷ್ಠರಾಗುವೆವು ? ನಾವು ಕರ್ತವ್ಯನಿಷ್ಠರಾಗದಿದ್ದರೆ ನಮ್ಮ ಮೇಲೆ ಸದ್ಗುರುವಿನ ಅಂತಃಕರಣವಾಗುವದು ಹೇಗೆ ? ಸದ್ಗುರುವಿನ ಅಂತಃಕರಣದ ಹೊರತು ಯಾರಿಗೂ ಮುಕ್ತಿ ಇಲ್ಲವೆಂಬದು ಸಿದ್ಧವಾದದ್ದೇ ಇರುತ್ತದೆ. ಹೀಗೆ ಮನಸ್ಸು ಚಾಂಚಲ್ಯಮಾತ್ರದಿಂದ ಫಲಕ್ಕೆ ದೂರಾಗುವ ಕಲ್ಪಕ್ಕೆ ಅದರ ಚಾಂಚಲ್ಯವನ್ನು ಪರಿಹರಿಸತಕ್ಕದ್ದು ಮೊದಲನೆಯ ಕರ್ತವ್ಯವಿರುತ್ತದೆ; ಆದ್ದರಿಂದ ಅದರ ಚಾಂಚಲ್ಯವನ್ನು ತೆಗೆದುಹಾಕುವ ವಿಷಯವನ್ನು ಕುರಿತು ವಿಚಾರಿಸುವಾ—

ಈ ಮನಸ್ಸಿನಚಾಂಚಲ್ಯವನ್ನು ತೆಗೆದುಹಾಕುವಉಪಾಯುಗಳೆಂದರೆ ೧. ಸಂಕಲ್ಪವು. ೨. ಯೋಗವು. ಇವೆರಡೂ ಕೂಡಿ ಮನಸ್ಸಿನ ಚಾಂಚಲ್ಯವನ್ನು ಪರಿಹರಿಸುತ್ತವೆ. ಮನಸ್ಸು ಒಂದು ಕೆಲಸವನ್ನು ಮಾಡಲಿಕ್ಕೆ ಉಪಕ್ರಮಿಸಿತು, ಅದನ್ನು ಬಿಟ್ಟಿತು; ಮತ್ತೊಂದಕ್ಕೆ ಆರಂಭಿಸಿತು; ಅದನ್ನೂ ಬಿಟ್ಟಿತು. ಹೀಗೆ ಒಂದೂ ಕೆಲಸವನ್ನು ನಿರ್ಧಾರದಿಂದ ಮಾಡದಿರುವದೇ ಮನಸ್ಸಿನ ಚಾಂಚಲ್ಯವು. ಉಪಕ್ರಮಿಸಿದ ಕಾರ್ಯವನ್ನು ತಪ್ಪದೆ ಮುಗಿಸುವ ಚಟಿಯನ್ನು ಕಲಿಸುವದೇ ಚಾಂಚಲ್ಯನಿವಾರಣೋಪಾಯುವು. ಒಂದು ತಾಸಿನೊಳಗೆ ನೂರಾರು ಕಡೆಗೆ ಓಡಾಡುವ ಚಟಿಯು ಬಿದ್ದದ ರಿಂದ ಸಹಸಾ ಒಂದೇ ಕಾರ್ಯದಲ್ಲಿ ಮನಸ್ಸು ವ್ಯಾಪ್ರತವಾಗಲಾರದೆಂಬುವದು ದೊಡ್ಡಮಾತಲ್ಲ; ಆದರೆ ತಿರುಗಿ-ಮುರುಗಿ ಅದೇಕೆಲಸಕ್ಕೆ ಹಚ್ಚೋಣ, ಅದನ್ನುಬಿಟ್ಟುಹಾರಿದರೆ ಮತ್ತು ಅದಕ್ಕೆ ತಂದುಹಚ್ಚೋಣ, ಹೀಗೆ ಸ್ವೀಕೃತ ಕಾರ್ಯದಕಡೆಗೆ ಮನಸ್ಸನ್ನು ನಿರ್ಧಾರದಿಂದ ಹಚ್ಚುವದಕ್ಕೆ ಸಂಕಲ್ಪವೆಂತಲೂ, ಅಭ್ಯಾಸವೆಂತಲೂ ಪರ್ಯಾಯಶಬ್ದಗಳನ್ನು ಉಪಯೋಗಿಸಬಹುದು. ಇನ್ನು “ ಯೋಗಃ ಕರ್ಮಸು ಕೌಶಲಂ” ಎಂದರೆ ಕೌಶಲ್ಯದಿಂದ ಕರ್ಮಮಾಡುವದೇ ಯೋಗವೆಂದು ಹೇಳಿರುವದರಿಂದ, ಅತ್ಯಂತ ಕರ್ಮಾಸಕ್ತನು ಸ್ವೀಕೃತಕಾರ್ಯದಲ್ಲಿ ತನ್ನನ್ನೇ ಮರೆತು ಬಿಡುವನಾದ್ದರಿಂದ, ನಿಜವಾದ ವೈರಾಗ್ಯವು ಆತನಲ್ಲಿಯೇ ಉತ್ಪನ್ನವಾಗುವಸಂಭವವಿರುತ್ತದೆ.

ಸಂಕಲ್ಪದಲ್ಲಿ ವಿಚಿತ್ರವಾದ ಶಕ್ತಿಯಿರುತ್ತದೆಂಬದು ಸಹಜವಾಗಿ ನಮಗೇ ತಿಳಿಯುವಂತಿದೆ. ಉದಾಹರಣ, ಏಕಾದಶೀತಿಥಿಯಲ್ಲಿ ಇಡೀದಿವಸ ಬಾಯೊಳಗೆ ನೀರು ಹಾಕಲಿಕ್ಕಿಲ್ಲೆಂದು ಒಮ್ಮೆ ನಿಶ್ಚಯಿಸಿದರೆ, ಸಾಕು. ಅಂದಿನ ದಿವಸ ಆಹಾರದಮೇಲೆ ಅಪೇಕ್ಷೆಯೇ ಆಗುವದಿಲ್ಲ. ಇದು ಸರ್ವಾನುಭವಸಿದ್ಧವಾದದ್ದೇ ಇರುತ್ತದೆ. ಈ ವಿಷಯವಾಗಿ ಭಗವದ್ಗೀತೆಯಲ್ಲಿ "ಚಂಚಲಂಹಿ ಮನಃ" ಎಂಬ ಶ್ಲೋಕದಿಂದ ಅರ್ಜುನನು ಭಗವಂತನಿಗೆ "ಶ್ರೀಕೃಷ್ಣಾ, ಮನಸ್ಸು ಚಂಚಲವಾಗಿ ಬಲಾಢ್ಯವಾಗಿರುವದರಿಂದ ಇದನ್ನು ನಿಗ್ರಹಿಸುವದೂ, ಗಾಳಿಯುಮುಟ್ಟೀಕಟ್ಟುವದೂ ಒಂದೇಇರುವದೆಂ"ದು ಪ್ರಶ್ನಮಾಡಲು, ಶ್ರೀಕೃಷ್ಣನು ಅರ್ಜುನನಿಗೆ——"ಅಭ್ಯಾಸೇನಚ ಕೌಂತೇಯ" ಎಂಬ ಶ್ಲೋಕದಿಂದ ಎಲೈ ಕೌಂತೇಯನೇ, ಇದಕ್ಕೆ ಇಷ್ಟೊಂದು ಯಾಕೆ ಯೋಚನೆ? ಮನಸ್ಸಿಗೆ ಅಭ್ಯಾಸ, ಮತ್ತು ವೈರಾಗ್ಯಗಳನ್ನು ಯೋಜಿಸಿದರೆ ಸಾಕು. ತಾನಾಗಿಯೇ ಆ ಮನಸ್ಸಿನ ನಿಗ್ರಹವಾಗುವದೆಂದು ಹೇಳಿರುವನು. ಸಂಕಲ್ಪಾಭ್ಯಾಸಶಬ್ದಗಳೂ, ಯೋಗ-ವೈರಾಗ್ಯಶಬ್ದಗಳೂ ಒಂದೇ ಅರ್ಥದವಿರುವವೆಂದು ತಿಳಿಯಬೇಕು. ಹಿಂದಕ್ಕೆ ದುರ್ಮರಣವನ್ನು ಹೊಂದಿದ ತನ್ನ ಪಿತಾಮಹರಾದ ಅರವತ್ತುಸಾವಿರ ಸಗರರನ್ನುದ್ಧರಿಸುವದಕ್ಕೆ ಅವರ ವಂಶದ ಭಗೀರಥರಾಜನು ಮನಸ್ಸಿಗೆ ಸಂಕಲ್ಪಶಕ್ತಿಯನ್ನುಯೋಜಿಸಿ ಕಾರ್ಯದಲ್ಲಿ ತೊಡಗಿದಾಗ ಅವರನ್ನುದ್ಧರಿಸಿ ತಾನೂ ಪಾರಾದನು. ಆತನ ಕಾರ್ಯಪ್ರಭಾವದಿಂದ ನಮಗೂಕೂಡ ಗಂಗಾಸ್ನಾನದ ಲಾಭವಾಗಹತ್ತಿದೆ. ಈ ಭಗೀರಥನ ಹಿಂದಿನವರ ಮನಸ್ಸಿನಲ್ಲಿ ಅವರನ್ನು ಉದ್ಧರಿಸಬೇಕೆಂಬ ಕಲ್ಪನೆಯಿದ್ದರೂ, ಅದಕ್ಕೆ ಸಂಕಲ್ಪವು ಕೂಡದ್ದರಿಂದ ಅವರಿಂದ ಕಾರ್ಯವಾಗಲಿಲ್ಲ. ಮನುಷ್ಯನ ಮನಸ್ಸಿನಲ್ಲಿ ಎಷ್ಟೋ ಕಲ್ಪನೆಗಳು ಉದಯಿಸುತ್ತವೆ; ಆದರೆ ಅವೆಲ್ಲ ಕಾರ್ಯಸಾಧಕವಾಗುವದಿಲ್ಲ. ಇನ್ನು ಇವುಗಳಲ್ಲಿ, ಯಾವ ಕಲ್ಪನೆಗೆ ಸಂಕಲ್ಪವು ಕೂಡಿಕೊಳ್ಳುವದೋ? ಅದೇ ಕಲ್ಪನೆಯು ಕಾರ್ಯವನ್ನು ಸಾಧಿಸಿಕೊಡುತ್ತದೆ. ಈಮಾತು ಸರ್ವರಿಗೂ ಗೊತ್ತಿರುತ್ತದೆ. ದೇವರು, ಯಾವಾಗಲೋ ಏನೋ? ಹಿಂದಕ್ಕೆ ಒಂದುಸಾರೆ ಸೂರ್ಯ-ಚಂದ್ರರಿಗೆ, ಗ್ರಹ-ನಕ್ಷತ್ರಗಳಿಗೆ ಅಪ್ಪಣೆಯನ್ನುಮಾಡಿ, ಗತಿಯನ್ನು ಕೊಟ್ಟಿರುವನು. ಆಗಿನಿಂದ ಅವರೆಲ್ಲ ಕಾಲಕಾಲಕ್ಕೆ ತಪ್ಪದೆ ತಮ್ಮ ತಮ್ಮ ಕೆಲಸವನ್ನು ಮಾಡುತ್ತಿರುವದರಿಂದ, ನಮಗೆಲ್ಲ ಬೇಗು ಬೆಳಗುಗಳೂ, ಮಳೆ-ಬೆಳೆಗಳೂ ಆಗುತ್ತವೆ. ಆ ಪರಮೇಶ್ವರನ ಅಪ್ಪಣೆಗನುಸರಿಸಿ ತಪ್ಪದೆ ಕೆಲಸಮಾಡುವಮಾತ್ರದಿಂದಲೇ ಆ ಸೂರ್ಯ-ಚಂದ್ರ ಮುಂತಾದವರು ನಮಗೆಲ್ಲ ವಂದ್ಯರಾಗಿರುವರು. ನಾವಾದರೂ ಅವರಂತೆ ಪರಮೇಶ್ವರನ ಆಜ್ಞೆಯೆನಿಸಿಕೊಳ್ಳುವ ಶ್ರುತಿ-ಸ್ಮೃತಿ ಮುಂತಾದ್ದರಲ್ಲಿ ಹೇಳಿದಕರ್ಮವನ್ನು ಮಾಡಹತ್ತಿದರೆ, ಜಗತ್ತಿನಲ್ಲಿ ಪೂಜ್ಯರಾಗುವದು ಆಶ್ಚರ್ಯವೇನು? ಈಗಿನಕಾಲದಲ್ಲಿಯೂ, ಶಿವಾಜಿ ಮುಂತಾದವರು ರಾಷ್ಟ್ರಕಾರ್ಯದಲ್ಲಿ ತೊಡಗಿಕೊಂಡು ತಮ್ಮ ಹಿತಾಹಿತಗಳನ್ನೂಕೂಡ ನೋಡದೆ ಕಾರ್ಯಮಾಡಿದ್ದರಿಂದ ಇತಿಹಾಸಪ್ರಸಿದ್ಧರಾಗಿರುವರು. ಕರ್ತವ್ಯಶಾಲಿಯಾದ ಮನುಷ್ಯನು ಸಾಮಾನ್ಯನಲ್ಲ. ಮನುಸ್ಮೃತಿಯಲ್ಲಿ "ಕರ್ತೃಷುಬ್ರಹ್ಮವೇದಿನಃ" ಎಂಬ ವಾಕ್ಯದಲ್ಲಿ ಕರ್ತವ್ಯಶಾಲಿಯು

ನಂಬರು ಬ್ರಹ್ಮಜ್ಞಾನಿಯ ಹತ್ತರ ಬಿದ್ದಿರುವದು. ಇದರ ಮೇಲಿಂದ ವಿಚಾರಿಸಿದ ಕರ್ತವ್ಯಶಾಲಿಗಳು ಎಷ್ಟೊಂದು ಪುಣ್ಯವಂತರು! ಒಂದು ರಾಷ್ಟ್ರದಲ್ಲಿ ಒಬ್ಬಿಬ್ಬರು ಕರ್ತವ್ಯಶಾಲಿಗಳಾದರೆ, ಆ ರಾಷ್ಟ್ರವೇ ಸ್ವತಂತ್ರವಾಗಿ ತೇಜಸ್ವಿಯಾಗುವದೆಂಬ ಸಂಗತಿಯು ಇತಿಹಾಸಗಳ ಮೇಲಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ. ಮುಂದೆ ಬ್ರಹ್ಮಜ್ಞಾನಿಯಾದಮೇಲೆ ಕರ್ತವ್ಯವಿಲ್ಲ. ಅಂಥ ಕರ್ತವ್ಯಶೂನ್ಯರಾಗಿಯೂ, ಮುಕ್ತಿಯೋಗ್ಯರಾಗಿಯೂ, ಇರುವ ಬ್ರಹ್ಮಜ್ಞಾನಿಗಳಿಂದ ರಾಷ್ಟ್ರದ ಹಿತವೇನು? ಯದ್ಯಪಿ ಸಾಮಾನ್ಯವಾಗಿ ಈ ಮಹಾತ್ಮರಿಂದ ರಾಷ್ಟ್ರಹಿತವಿಲ್ಲದಿದ್ದರೂ ಯಾವ ಜನರು ಉಜ್ವಲವೃತ್ತಿಯಿಂದ ರಾಷ್ಟ್ರಹಿತಕಾರ್ಯವನ್ನು ಮಾಡಿ ಕೃತಕೃತ್ಯರಾಗುವರೋ, ಅವರಿಗೆ ಮುಕ್ತಿಮಾರ್ಗವನ್ನು ತೋರಿಸುವ ಕೆಲಸವು ಅವರದೇ ಇರುವದು. ಅವರು ಯಾವಾಗಲೂ, ಇಂಥ ಕರ್ತವ್ಯನಿಷ್ಠರನ್ನೇ ಹುಡುಕುತ್ತಲಿರುತ್ತಾರೆ. ಆದ್ದರಿಂದ ರಾಷ್ಟ್ರಕ್ಕೆ ಉಭಯಪಕ್ಷದವರದೂ ಅವಶ್ಯಕತೆಯಿರುವದು. ಇನ್ನು ಈ ಎರಡೂ ಪಕ್ಷಗಳಲ್ಲಿ ಸೇರದೆ "ಜಾಯಸ್ವ ಮ್ರಿಯಸ್ವ" ಹುಟ್ಟು, ಸಾಯು ಎಂಬ ತೃತೀಯಪಂಥದವರಾದ ನಮ್ಮಂಥವರಿಂದ ಮಾತ್ರ ರಾಷ್ಟ್ರಕ್ಕೆ ಏನೂ ಹಿತವಾಗಲಾರದೆಂದು ಕೈ ಎತ್ತಿಹೇಳಬಹುದು. ರಾಷ್ಟ್ರಹಿತವಾಗುವದಿಲ್ಲ ಇಷ್ಟೇ ಅಲ್ಲ, ಕೇವಲ ಭಾರಭೂತರಾದ ನಮ್ಮಿಂದ ರಾಷ್ಟ್ರಕ್ಷೋಭವೇ ಆಗುವದು. ಯಾಕಂದರೆ ನಾವು ಏನೂ ಕೆಲಸ ಮಾಡದಿದ್ದರೂ, ಕೆಲಸಮಾಡುವವರನ್ನು ಕಂಡು ಸುಮ್ಮನೆ ಕೂಡ್ರುವದಿಲ್ಲ. ಜನರಲ್ಲಿ ನಮ್ಮದೊಂದು ಒಣಪ್ರತಿಷ್ಠೆಯನ್ನು ಬೆಳಸುವದಕ್ಕಾಗಿ ಕೆಲಸ ಮಾಡುವವರಿಗೆ ಕಾಡುತ್ತೇವೆ. ನಮ್ಮಂಥವರು ಸಾವಿರಮಂದಿ ಕಾಡಿದರೂ ಅವರು ಸ್ವೀಕೃತಕಾರ್ಯವನ್ನು ಬಿಡುವದಿಲ್ಲೆಂಬದು ಒಂದು ಕಡೆಗೆ ಇರಲಿ. ಸಾರಾಂಶ, ನಾವು ಅಂಥ ಮಹನೀಯರಿಗೆ ತೊಂದರೆಯನ್ನು ಕೊಟ್ಟು ರಾಷ್ಟ್ರಕ್ಷೋಭವನ್ನುಂಟುಮಾಡುವದರಿಂದ ನಾವು ಅನುಪಯುಕ್ತರೇ ಆಗುವೆವು. ನಾವಾದರೂ ಹೀಗಾಗದೆ ಮಹನೀಯರನ್ನು ಕಂಡು ಅವರ ಸದ್ಗುಣಗಳನ್ನು ನಮ್ಮಲ್ಲಿ ಸಂಪಾದಿಸಿಕೊಂಡು ಅವರಂತೆ ಲೋಕಹಿತಕಾರ್ಯವನ್ನು ಮಾಡಹತ್ತಿದರೆ ನಮ್ಮದೂ ಉದ್ಧಾರವಾಗುತ್ತದೆ. ಆಹಾರಶುದ್ಧಿಯಾದ್ದರಿಂದ ಮನಸ್ಸು ಸುಪರಿಶುದ್ಧವಾದ ಮೇಲೆ, ನಮಗೆ ಸತ್ಸಮಾಗಮವಾಗತಕ್ಕದ್ದು. ಅಲ್ಲಿಂದ ಸಜ್ಜನರು ನಮಗೆ ಜ್ಞಾನೋಪದೇಶವನ್ನು ಮಾಡತಕ್ಕದ್ದು. ಅನಂತರದಲ್ಲಿ ಬಂಧವಿಮೋಚನವಾಗುವದು ಹೀಗೆ ಕ್ರಮವಿರುತ್ತದೆ. ಆದರೆ ಮನಸ್ಸು ಸುಪರಿಶುದ್ಧವಾದ ಮೇಲೆ ಸತ್ಸಮಾಗಮವು ಹೇಗೆ ಆಗುತ್ತದೆಂಬದನ್ನು ಕುರಿತು ವಿಚಾರಿಸುವಾ — ಒಕ್ಕಲಿಗನು ಬೀಜಬಿತ್ತುವದಕ್ಕೆ ಹದನಾದ ಭೂಮಿಯನ್ನು ಹುಡುಕುವಂತೆ ಬ್ರಹ್ಮಜ್ಞಾನಿಗಳಾದ ಸತ್ಪುರುಷರು ಯಾವಾಗಲೂ, ಸುಪರಿಶುದ್ಧ ಮನಸ್ಸುಳ್ಳವರನ್ನೇ ಉಪದೇಶಿಸುವ ಸಲುವಾಗಿ ಹುಡುಕುತ್ತಲಿರುತ್ತಾರೆ. ಇದಕ್ಕಾಗಿಯೇ ಅವರ ಸ್ಥಿತಿಯೂ ಸಂಚಾರವೂ ಇರುವವು. ಏಕನಿಷ್ಠೆಯಿಂದ ಕರ್ತವ್ಯವನ್ನು ಮಾಡಿ ಮನಃಶುದ್ಧಿಯನ್ನು ಹೊಂದಿದ ಮನುಷ್ಯನಾದರೂ ಕೃತಕಾರ್ಯನಾಗಿ ಅಂಥವರ ದರ್ಶನವನ್ನೇ ಅಪೇಕ್ಷಿಸುತ್ತಿರುತ್ತಾನೆ; ಇಷ್ಟರಲ್ಲಿ ದೈವಯೋಗದಿಂದ ಅಂಥಮಹನೀಯರ ಉಜ್ವಲಸ್ವರೂಪದ ದರ್ಶನವಾದ

ಕೂಡಲೆ, ಅವನಲ್ಲಿಯೊಂದು ವಿಲಕ್ಷಣವಾದ ಭಕ್ತಿಯೇ ಹುಟ್ಟುತ್ತದೆ. ಅಂಥ ಭಕ್ತಿಯ ಬೆಳಕು ಮನಸ್ಸಿನಲ್ಲಿ ಬಿದ ಕೂಡಲೆ ಅವನು ಗಾಢಾಂಧಕಾರದಲ್ಲಿ ದೀಪದಲಾಭವಾದಂತೆ ಪರಮಹರ್ಷವನ್ನುಹೊಂದಿ ಉನ್ಮತ್ತನಂತೆ ಕುಣಿಯುತ ಸತ್ಪುರುಷನ ಚರಣಗಳಲ್ಲಿ ಮಣಿಯುತ್ತ ತನ್ನನ್ನು ಕೃತ-ಕೃತ್ಯನನ್ನಾಗಿ ಭಾವಿಸುತ್ತಾನೆ. ಆಮೇಲೆ ಅವನು, ತನ್ನನ್ನೂ ತನ್ನಕಾರ್ಯವನ್ನೂ, ಮರೆತು, ಆ ಸತ್ಪುರುಷರ ಸೇವಾಕಾರ್ಯದಲ್ಲಿಯೇ ತೊಡಗುತ್ತಾನೆ. ಸೇವಾಧುರಂಧರನೆನಿಸಿಕೊಂಡು ಸದ್ಗುರುವಿನ ಕೃಪಾಪಾತ್ರನಾಗುವದೇ ಆತನ ಕರ್ತವ್ಯವಾಗುವದು. ಇದೇ ಜನ್ಮದ ಸಾಫಲ್ಯವು, ಇದೇ ಅನೇಕಜನ್ಮಗಳಿಂದ ಮಾಡುತ್ತಬಂದ ಪುಣ್ಯಕರ್ಮಗಳ ಪರಿಪಾಕವು, ಇದೇ ಗುರು-ಹಿರಿಯರ ಆಶೀರ್ವಾದಗಳ ಫಲವು, ಇದೇ ದೇವ-ತಾರಾಧನದ ಮಹಿಮೆಯು! ಇಷ್ಟರಿಂದು ಕೃಪಾಪಾತ್ರರಾದ ನಮ್ಮನ್ನು ಬಂಧಮುಕ್ತರನ್ನಾಗಿ ಮಾಡುವದು ಬ್ರಹ್ಮನಿಷ್ಠಗುರುಗಳಿಗೆ ಆಯಾಸವಲ್ಲ. ನಾವು ಅವರ ಸೇವಾಕಾರ್ಯವನ್ನು ಮಾಡುವಾಗ ಅವರ ಸದ್ವ್ಯ್ರತ್ತಿಯನ್ನೂ, ನಿರುಪಾಧಿಕವಾದ ಚಿತ್ತವೃತ್ತಿಯನ್ನೂ, ಸತ್ಯಪ್ರಿಯತ್ವ ಮುಂತಾದ ಸದ್ಗುಣಗಳನ್ನೂ, ನೋಡಿನೋಡಿ ಧನ್ಯರಾಗಿರುವದರಿಂದ, ಬಂಧವಿಮೋಚನಸಿತಿಯು ತಾನಾಗಿಯೇ ಒದಗುತ್ತದೆ. ಉಳಿದದ್ದೇನು; ಸ್ವಾನುಭವಪ್ರದರ್ಶನವು. ಸದ್ಗುರುವು ಸದಂತಃಕರಣದಿಂದ ಪರಮಶಿಷ್ಯನ ಉದ್ಧಾರವಾಗಲೆಂದು ಶಿಷ್ಯನ ತಲೆಯಮೇಲೆ ಪರಮಪವಿತ್ರವಾದ ತನ್ನ ಹಸ್ತವನ್ನಿಟ್ಟರೆ ಅದು ಸಾಧಿಸಿ ಹೋಗುತ್ತದೆ. ಮನುಷ್ಯನು ಈ ಸ್ಥಿತಿಗೆ ಮುಟ್ಟಿ ಸದ್ಗುರುವಿನ ಪರಮಾನುಗ್ರಹದಿಂದ ಸ್ವಾನುಭವದಲ್ಲಿ ಮಗ್ನನಾಗಿ ಪರಮಾನಂದ ಪೂರ್ಣನಾದಮೇಲೆ ಮನಸ್ಸಿಗೂ ಇಂದ್ರಿಯಗಳಿಗೂ ಸಂಬಂಧವೆಲ್ಲಿ? ಇಂದ್ರಿಯಗಳಿಗೂ ವಿಷಯಗಳಿಗೂ ಸಂಬಂಧವೆಲ್ಲಿ! ಇಂಥ ಪ್ರಸಂಗದಲ್ಲಿ ಮನಸ್ಸು ವಿಷಯಗಳಿಂದ ತಿರುಗಿ ಸ್ವಾನುಭವಾನಂದದಲ್ಲಿಯೇ ಇರೋಣದರಿಂದ ಈ ಸಂಸಾರವೆಂಬ ದೃಢವಾದ ಬಂಧನವು ತಾನಾಗಿಯೇ ಕಳಚಿಹೋಗುತ್ತದೆಂಬ ತಾತ್ಪರ್ಯವನ್ನು "ಮನ ಏವ" ಎಂಬ ಮೇಲಿನ ಶ್ರುತಿವಾಕ್ಯವು ತೋರಿಸುತ್ತದೆ.

ಸಂಪೂರ್ಣ.